ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 28 ಸೋಮವಾರ 2023

ಸಂಪುಟ: 44 | ಸಂಚಿಕೆ: 133 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರಲ್ಲಿ ಒಂದೇ ಕುಟುಂಬದ ನಾಲ್ವರು ನಿಗೂಢ ಸಾವು

● ಚಾಮುಂಡಿಪುರಂನಲ್ಲಿ ದುರ್ಘಟನೆ ● ಕೊಳೆತ ಸ್ಥಿತಿಯಲ್ಲಿ ಶವಗಳ ಪತ್ತೆ

ಮೈಸೂರು,ಆ.27(ಎಸ್‌ಬಿಡಿ)–ಮೈಸೂರಿನ ಚಾಮುಂಡಿಪುರಂನ ಮನೆಯೊಂದರಲ್ಲಿ ಒಂದೇ ಕುಟುಂಬದ ನಾಲ್ವರು ನಿಗೂಢವಾಗಿ ಸಾವನ್ನಪ್ಪಿದ್ದಾರೆ.

ಇಲ್ಲಿನ ಒಂದನೇ ಮುಖ್ಯರಸ್ತೆ, 3ನೇ ಕ್ರಾಸ್‌ನಲ್ಲಿ ಈ ಧಾರುಣ ಘಟನೆ ನಡೆದಿದ್ದು, ಬಂಡೀಪಾಳ್ಯ ಎಪಿಎಂಸಿ ಮಾರುಕಟ್ಟೆಯಲ್ಲಿ ತರಕಾರಿ ಮಂಡಿ ಹೊಂದಿದ್ದ ಮಹದೇವಸ್ವಾಮಿ(48), ಅವರ ಪತ್ನಿ ಅನಿತಾ(38), ಮಕ್ಕಳಾದ ಚಂದ್ರಕಲಾ(17) ಹಾಗೂ ಧನಲಕ್ಷ್ಮಿ(15) ನಿಗೂಢವಾಗಿ ಸಾವನ್ನಪ್ಪಿದವರಾಗಿದ್ದು, ಮನೆಯ ಹಾಲ್‌ನ ಫ್ಯಾನ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಚಂದ್ರಕಲಾ, ಅಲ್ಲಿಯೇ ಕುರ್ಚಿ ಮೇಲೆ ಅನಿತಾ, ನೆಲದ ಮೇಲೆ ಮಹದೇವಸ್ವಾಮಿ ಹಾಗೂ ಕೊಠಡಿಯಲ್ಲಿ ಧನಲಕ್ಷ್ಮಿ ಶವ ಪತ್ತೆಯಾಗಿವೆ. ಶವಗಳು ಕೊಳೆತ ಸ್ಥಿತಿಯಲ್ಲಿದ್ದು, ಇವರು 2–3 ದಿನಗಳ ಹಿಂದೆಯೇ ಸಾವನ್ನಪ್ಪಿರಬಹುದೆಂದು ಹೇಳಲಾಗಿದೆ.

ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಮುತ್ತುರಾಜು, ಜಾಹ್ನವಿ, ಕೃಷ್ಣರಾಜ ಉಪವಿಭಾಗದ ಎಸಿಪಿ ಗಂಗಾಧರ ಸ್ವಾಮಿ, ಕೃಷ್ಣರಾಜ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ನಾಗೇಗೌಡ ಹಾಗೂ ಸಿಬ್ಬಂದಿ ಪರಿಶೀಲಿಸಿದ ಬಳಿಕ ವಿಧಿ ವಿಜ್ಞಾನ ಪ್ರಯೋಗಾಲಯ(ಎಫ್‌ಎಸ್‌ಎಲ್) ಹಾಗೂ ಬೆರಳಚ್ಚು ತಂಡದ ಸಿಬ್ಬಂದಿ ಪರಿಶೀಲಿಸಿ, ಕೆಲ ಮಾದರಿಯನ್ನು ಸಂಗ್ರಹಿಸಿದರು. ಬಳಿಕ ಮಹದೇವಸ್ವಾಮಿ ಹಾಗೂ ಅನಿತಾ ಕುಟುಂಬದವರ ಸಮ್ಮುಖದಲ್ಲಿ ಶವಗಳನ್ನು ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಲಾಯಿತು. ಸೋಮವಾರ ವೈದ್ಯಕೀಯ ಪರೀಕ್ಷೆ ಬಳಿಕ ಶವಗಳನ್ನು ವಾರಸುದಾರರಿಗೆ ಒಪ್ಪಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಸಂಬಂಧಿಗಳಿಂದ ದೂರವಿದ್ದು: ಮೈಸೂರು ತಾಲೂಕು, ಜಯಪುರ ಹೋಬಳಿ ಬರಡನಪುರ ಗ್ರಾಮದ ಸೋಮಪ್ಪ ಅವರ ಪುತ್ರ ಮಹದೇವಸ್ವಾಮಿ ಹಲವು ವರ್ಷಗಳಿಂದ ಮೈಸೂರು ನಗರದಲ್ಲೇ ನೆಲೆಸಿದ್ದರು. ಆರಂಭದಲ್ಲಿ ಬಾಡಿಗೆ ರೂಂನಲ್ಲಿದ್ದ ಅವರು, ಹುಣಸೂರು ತಾಲೂಕು ಹನಗೂಡು ಬಳಿಯ ಅನಿತಾ ಅವರನ್ನು ವಿವಾಹವಾದ ಬಳಿಕ ಬಾಡಿಗೆಗೆ ಮನೆ ಮಾಡಿದ್ದರು. ಪತ್ನಿ ಹಾಗೂ ▶ 8ನೇ ಪುಟಕ್ಕೆ



▲ ನಿಗೂಢವಾಗಿ ಸಾವನ್ನಪ್ಪಿದ ಕುಟುಂಬ (ಹಳೇ ಫೋಟೊ).



ಮಹದೇವಸ್ವಾಮಿ ಮನೆ ಬಳಿ ಜನ ಜಮಾಯಿಸಿರುವುದು. ▶

ಬೆಳಕಿಗೆ ಬಂದಿದ್ದೇಗೆ?

ಮಹದೇವಸ್ವಾಮಿ ಕುಟುಂಬ ಮೂರು ತಿಂಗಳಿಂದಷ್ಟೇ ನಾರಾಯಣ ಅವರ ಮನೆಯಲ್ಲಿ ಬಾಡಿಗೆಗಿದ್ದರು. ಹಾಗಾಗಿ ಅವರ ಬಗ್ಗೆ ನೆರೆಹೊರೆಯವರಿಗೂ ಹೆಚ್ಚು ತಿಳಿದಿಲ್ಲ. ಭಾನುವಾರ ಬೆಳಗ್ಗೆಯಿಂದಲೇ ಮಹದೇವಸ್ವಾಮಿ ಮನೆ ಬಳಿ ದುರ್ವಾಸನೆ ಬರುತ್ತಿತ್ತು. ಅಕ್ಕಪಕ್ಕದ ನಿವಾಸಿಗಳು ಯಾವುದೋ ಪ್ರಾಣಿ ಸತ್ತಿರಬಹುದೆಂದು ಭಾವಿಸಿದ್ದರು. ಆದರೆ ಮಧ್ಯಾಹ್ನದ ವೇಳೆಗೆ ವಾಸನೆ ಹೆಚ್ಚಾಗಿದ್ದರಿಂದ ಅನುಮಾನಗೊಂಡು '112'ಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ.

ಕೂಡಲೇ ಸ್ಥಳಕ್ಕೆ ಧಾವಿಸಿದ ಪೊಲೀಸ್ ಸಿಬ್ಬಂದಿ, ಕಿಟಕಿಯಿಂದ ನೋಡಿದಾಗ ನೇಣು ಬಿಗಿದ ಸ್ಥಿತಿಯಲ್ಲಿರುವ ಶವ ಕಂಡಿದೆ. ವಿಷಯ ತಿಳಿದ ಕೃಷ್ಣರಾಜ ಠಾಣೆ ಇನ್‌ಸ್ಪೆಕ್ಟರ್ ನಾಗೇಗೌಡ ಹಾಗೂ ಸಿಬ್ಬಂದಿ ಸ್ಥಳಕ್ಕಾಗಮಿಸಿದ್ದಾರೆ.

ಅಷ್ಟರಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರೂ ಅಲ್ಲಿಗೆ ಬಂದಿದ್ದಾರೆ. ಮುಂಬಾಗಿಲು ಒಳಗಿನಿಂದ ಲಾಕ್ ಆಗಿದ್ದರಿಂದ ಪಕ್ಕದ ಪ್ಯಾಸೇಜ್‌ನಲ್ಲಿ ತೆರಳಿ, ಹಿಂಬಾಗಿಲು ಗಮನಿಸಿದ್ದಾರೆ. ಅದು ಲಾಕ್ ಆಗಿರದ ಕಾರಣ ಒಳಹೋಗಿ ಪರಿಶೀಲಿಸಿದಾಗ ಈ ಧಾರುಣ ಘಟನೆ ಬೆಳಕಿಗೆ ಬಂದಿದೆ.

ನಿಗೂಢ... ನಿಗೂಢ...

ಮಹದೇವಸ್ವಾಮಿ, ಅವರ ಪತ್ನಿ ಅನಿತಾ ಶವ ಹಾಲ್‌ನಲ್ಲಿ, ಪುತ್ರಿ ಧನಲಕ್ಷ್ಮಿ ಶವ ರೂಂನಲ್ಲಿದ್ದವು. ಆದರೆ ಮತ್ತೋರ್ವ ಪುತ್ರಿ ಚಂದ್ರಕಲಾ ಶವ ಮಾತ್ರ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಮನೆಯ ಮುಂಬಾಗಿಲನ್ನು ಒಳಗಿನಿಂದ ಲಾಕ್ ಮಾಡಿದ್ದರೆ, ಹಿಂದಿನ ಬಾಗಿಲಿಗೆ ಚಿಲಕ ಹಾಕಿರಲಿಲ್ಲ. ಟಿವಿ ಆನ್‌ನಲ್ಲೇ ಇತ್ತು. ಮೇಲ್ನೋಟಕ್ಕೆ ಆತ್ಮಹತ್ಯೆ ರೀತಿಯಲ್ಲಿ ಕಂಡುಬಂದರೂ ಅನುಮಾನವಂತೂ ಇದ್ದೇ ಇದೆ. ಒಂದು ವೇಳೆ ಆತ್ಮಹತ್ಯೆ ಮಾಡಿಕೊಂಡಿದ್ದರೆ ಓರ್ವ ಪುತ್ರಿ ಮಾತ್ರ ನೇಣು ಬಿಗಿದುಕೊಂಡಿದ್ದೇಕೆ? ಎಂಬ ಸಂಶಯ ಪೊಲೀಸರಿಗಿದೆ. ಮಹದೇವಸ್ವಾಮಿಗೆ ವ್ಯವಹಾರದಲ್ಲಿ ಏನಾದರೂ ಸಮಸ್ಯೆ ಇತ್ತೇ? ಅಥವಾ ಕೌಟುಂಬಿಕ ಕಾರಣವೇನಾದರೂ ಇದರ ಹಿಂದಿರಬಹುದೇ? ಹೀಗೆ ಎಲ್ಲಾ ಆಯಾಮಗಳಲ್ಲೂ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಡೆತ್‌ನೋಟ್ ಬಗ್ಗೆ ಪೊಲೀಸರು ಸ್ಪಷ್ಟಪಡಿಸಿಲ್ಲ. ಆದರೆ ಕೆಲ ಸಾಕ್ಷ್ಯಾಧಾರಗಳನ್ನು ಕಲೆ ಹಾಕಿ, ವಿಚಾರಣೆ ನಡೆಸುತ್ತಿದ್ದಾರೆ. ಈ ಸಂಬಂಧ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಿಧಿ ವಿಜ್ಞಾನ ಪ್ರಯೋಗಾಲಯ ಹಾಗೂ ಪೋಸ್ಟ್‌ಮಾರ್ಟಮ್ ವರದಿ ಬಂದ ಬಳಿಕ ತನಿಖೆ ಚುರುಕುಗೊಳ್ಳಲಿದೆ. ಇಡೀ ಕುಟುಂಬದ ಧಾರುಣ ಅಂತ್ಯದ ಹಿಂದಿರುವ ರಹಸ್ಯ ತನಿಖೆಯಿಂದಲೇ ಬಯಲಾಗಬೇಕಿದೆ.

> "ಚಾಮುಂಡಿಪುರಂ ಒಂದನೇ ಮುಖ್ಯರಸ್ತೆ, 3ನೇ ಕ್ರಾಸ್‌ನ ನಾರಾಯಣ ಅವರು ಬಾಡಿಗೆ ನೀಡಿರುವ ಮನೆಯಿಂದ ದುರ್ವಾಸನೆ ಬರುತ್ತಿದೆ ಎಂದು ಭಾನುವಾರ ಮಧ್ಯಾಹ್ನ '112'ಗೆ ಸಾರ್ವಜನಿಕರು ಕರೆ ಮಾಡಿ ತಿಳಿಸಿದ್ದಾರೆ. ಕೂಡಲೇ '112' ಸಿಬ್ಬಂದಿ ಸ್ಥಳಕ್ಕೆ ಬಂದು ಕಿಟಕಿಯಿಂದ ನೋಡಿದಾಗ ಒಬ್ಬರು ನೇಣು ಹಾಕಿಕೊಂಡಿರುವುದು ಕಾಣಿಸಿದೆ. ಕೂಡಲೇ ಕೃಷ್ಣರಾಜ ಠಾಣೆಗೆ ವಿಷಯ ತಿಳಿಸಿದ್ದಾರೆ. ಸ್ಥಳೀಯ ಇನ್ಸ್‌ಪೆಕ್ಟರ್ ಹಾಗೂ ನಾವು ಸ್ಥಳಕ್ಕೆ ಬಂದು ನೋಡಿದಾಗ ಮುಂಬಾಗಿಲು ಲಾಕ್ ಆಗಿತ್ತು. ಹಿಂಬಾಗಿಲು ಲಾಕ್ ಆಗಿರಲಿಲ್ಲ. ಅದರ ಮೂಲಕ ಒಳಹೋಗಿ ನೋಡಿದಾಗ ಮಹದೇವಸ್ವಾಮಿ, ಅವರ ಪತ್ನಿ ಹಾಗೂ ಇಬ್ಬರು ಮಕ್ಕಳ ಶವ ಪತ್ತೆಯಾಗಿವೆ. ಪರಿಸ್ಥಿತಿ ನೋಡಿದರೆ ಘಟನೆ ನಡೆದು 2–3 ದಿನಗಳಾಗಿರಬಹುದು. ಸಾವು ಹೇಗೆ ಸಂಭವಿಸಿದೆ ಎಂಬುದು ಎಫ್‌ಎಸ್‌ಎಲ್ ವರದಿ ಬಂದ ನಂತರವಷ್ಟೇ ತಿಳಿಯಬೇಕಿದೆ. ಎಫ್‌ಎಸ್‌ಎಲ್ ತಂಡ ಪರಿಶೀಲಿಸಲಿದೆ. ತನಿಖೆ ಮುಂದುವರೆಸಲಾಗಿದೆ. **–ಬಿ.ರಮೇಶ್, ನಗರ ಪೊಲೀಸ್ ಆಯುಕ್ತ**

ದೇವರಾಜ ಅರಸು ರಸ್ತೆಯಲ್ಲಿ ಕರ್ತವ್ಯನಿರತ ಪೌರಕಾರ್ಮಿಕನಿಗೆ ಕಾರು ಡಿಕ್ಕಿ

ಕಾಲು ಮುರಿತ; ಖಾಸಗಿ ಆಸ್ಪತ್ರೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ





ದೇವರಾಜ ಅರಸ್ ರಸ್ತೆಯಲ್ಲಿ ನಡೆದ ಅಪಘಾತದ ಸ್ಥಳದಲ್ಲಿ ಪೌರಕಾರ್ಮಿಕ ಮಹದೇವ ಅವರ ಕಾಲು ತುಂಡರಿಸಿ ಬಿದ್ದಿರುವುದು. ಬಲಚಿತ್ರದಲ್ಲಿ ಅಪಘಾತಕ್ಕೀಡಾದ ಕಾರು.

ಮೈಸೂರು, ಆ.27(ಎಂಟಿವೈ)– ವೇಗವಾಗಿ ಚಲಿಸುತ್ತಿದ್ದ ಕಾರೊಂದು ಚಾಲಕನ ನಿಯಂತ್ರಣ ಕಳೆದುಕೊಂಡು ಅಪ್ಪಳಿಸಿದ ಪರಿಣಾಮ ರಸ್ತೆಬದಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದ ಪೌರಕಾರ್ಮಿಕರೊಬ್ಬರ ಕಾಲುಗಳು ತುಂಡರಿಸಿ, ಗಂಭೀರವಾಗಿ ಗಾಯಗೊಂಡಿರುವ ಘಟನೆ ಭಾನುವಾರ ಬೆಳಗ್ಗೆ ಮೈಸೂರಿನ ದೇವರಾಜ ಅರಸ್ ರಸ್ತೆಯಲ್ಲಿ ನಡೆದಿದೆ.

ಮೈಸೂರಿನ ಅಶೋಕಪುರಂನ ಡಾ.ಬಿ.ಆರ್.ಅಂಬೇಡ್ಕರ್ ಕಾಲೋನಿ ನಿವಾಸಿ ಮಹದೇವ(36) ಗಂಭೀರವಾಗಿ ಗಾಯಗೊಂಡ ಪೌರಕಾರ್ಮಿಕನಾಗಿದ್ದು, ಇವರು ನಗರದ ಖಾಸಗಿ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೈಸೂರು ಮಹಾನಗರಪಾಲಿಕೆ 23ನೇ ವಾರ್ಡ್‌ನ ಸ್ವಚ್ಛತಾ ಕಾರ್ಮಿಕರಾಗಿ ಕಳೆದ ಕೆಲ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಮಹದೇವ, ಪಾಲಿಕೆ ಖಾಯಂ ಪೌರಕಾರ್ಮಿಕರಾಗಿದ್ದಾರೆ. ಎಂದಿನಂತೆ ದೇವರಾಜ ಅರಸು ರಸ್ತೆಯಲ್ಲಿ ಸ್ವಚ್ಛತಾ ಕಾರ್ಯ ನಡೆಸಿ, ರಸ್ತೆಬದಿ ಸಂಗ್ರಹಿಸಿದ್ದ ಕಸವನ್ನು ಎತ್ತುತ್ತಿದ್ದಾಗ ಕೆ.ಆರ್.ವೃತ್ತದ ಕಡೆಯಿಂದ ವೇಗವಾಗಿ ಬಂದ ಕೆಎ.09, ಎಂಸಿ.0184 ಸಂಖ್ಯೆ ಕಾರು ರಸ್ತೆಯ ಬಲಬದಿಯಲ್ಲಿ ಕೆಲಸ ಮಾಡುತ್ತಿದ್ದ ಮಹದೇವ ಅವರಿಗೆ ಡಿಕ್ಕಿ ಹೊಡೆದಿದೆ. ಕಾರು ವೇಗವಾಗಿ ಚಲಿಸುತ್ತಿದ್ದ ಹಿನ್ನೆಲೆಯಲ್ಲಿ ಡಿಕ್ಕಿ ಹೊಡೆದ ನಂತರ ಮಹದೇವ ಅವರನ್ನು ರಸ್ತೆ ಪಕ್ಕವಿದ್ದ ವಿದ್ಯುತ್ ಕಂಬಕ್ಕೆ ರಭಸವಾಗಿ ಅಪ್ಪಳಿಸಿದೆ. ಇದರಿಂದ ಮಹದೇವ ಅವರ ಬಲಗಾಲು ಸ್ಥಳದಲ್ಲೇ ತುಂಡರಿಸಿ ಬಿದ್ದಿದೆ. ▶ 8ನೇ ಪುಟಕ್ಕೆ

ಪೌರಕಾರ್ಮಿಕರ ಆತಂಕ

ಸ್ವಚ್ಛತಾ ಕಾರ್ಯ ಮಾಡುತ್ತಿದ್ದಾಗಲೇ ಅಪಘಾತಕ್ಕೀಡಾಗಿ ಗಂಭೀರವಾಗಿ ಗಾಯಗೊಂಡಿರುವ ಸಹೋದ್ಯೋಗಿ ಮಹದೇವರ ಸ್ಥಿತಿ ಕಂಡು ಪೌರಕಾರ್ಮಿಕರು ಮರುಗಿದರು. ಪಾಲಿಕೆ ಅಧಿಕಾರಿಗಳು ಸ್ಥಳಕ್ಕೆ ಬಂದು ಚಿಕಿತ್ಸೆ ಕೊಡಿಸುವ ಪ್ರಯತ್ನ ಮಾಡುತ್ತಿದ್ದರು. ಆಸ್ಪತ್ರೆ ಬಳಿ ಪೌರಕಾರ್ಮಿಕರು ಹಾಗೂ ಪೌರಕಾರ್ಮಿಕ ಸಂಘಟನೆಗಳ ಮುಖಂಡರು ಆಗಮಿಸಿ ಆರೋಗ್ಯ ವಿಚಾರಿಸಿದರು. ಅಲ್ಲದೆ, ಗಾಯಾಳು ಮಹದೇವ ಅವರ ಪತ್ನಿ ದ್ರುವಕುಮಾರಿ, ಇಬ್ಬರು ಗಂಡು, ಓರ್ವ ಪುತ್ರಿ ಆಸ್ಪತ್ರೆ ಮುಂದೆ ರೋದಿಸುತ್ತಿದ್ದ ದೃಶ್ಯ ಮನಕಲಕುವಂತಿತ್ತು. ಈ ವೇಳೆ ಪೌರಕಾರ್ಮಿಕರ ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಚಂದ್ರಯಾನ ನವಭಾರತದ ಚೈತನ್ಯದ ಸಂಕೇತ



ನವದೆಹಲಿ: ಚಂದ್ರಯಾನ ಬಾಹ್ಯಾಕಾಶ ಕಾರ್ಯಕ್ರಮವು ನವಭಾರತದ ಚೈತನ್ಯದ ಸಂಕೇತವೇ ಆಗಿದೆ. ಎಂಥದೇ ಪರಿಸ್ಥಿತಿ ಎದುರಾದರೂ ಹೇಗೆ ಗೆಲುವು ಸಾಧಿಸಬೇಕು ಎಂಬುದನ್ನು ಈ ಅಂತರಿಕ್ಷ ಸಾಹಸ ಯಾತ್ರೆ ತೋರಿಸಿಕೊಟ್ಟಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ತಮ್ಮ ಮಾಸಿಕ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ 'ಚಂದ್ರಯಾನ–3' ಯಶಸ್ಸನ್ನು ಮತ್ತೊಮ್ಮೆ ಮೆಲುಕು ಹಾಕಿರುವ ಅವರು, ಭಾರತೀಯ ಮಹಿಳೆಯರಿಗಿರುವ ಶಕ್ತಿಗೆ ಈ ಬಾಹ್ಯಾಕಾಶ ಕಾರ್ಯಕ್ರಮ ಜೀವಂತ ನಿದರ್ಶನವಾಗಿದೆ ಎಂದಿದ್ದಾರೆ. ಅಂತರಿಕ್ಷವನ್ನು ಆದಿ–ಅಂತ್ಯ ಇಲ್ಲದ ಅವಕಾಶ ಎಂದೇ ಪರಿಗಣಿಸಲಾಗುತ್ತದೆ. ಇಂತಹ ಅನಂತ ಆಕಾಶಕ್ಕೆ ಭಾರತದ ಪುತ್ರಿಯರು ಸವಾಲೆಸೆದಿದ್ದಾರೆ. ದೇಶದ ಪುತ್ರಿಯರು ಮಹತ್ವಾಕಾಂಕ್ಷಿಗಳಾದ ಮೇಲೆ ಭಾರತ ಅಭಿವೃದ್ಧಿ ಹೊಂದಿದ ▶ 8ನೇ ಪುಟಕ್ಕೆ

ನೆಲ ಕೊರೆದು ಇಸ್ರೋಗೆ ಮಾಹಿತಿ ರವಾನಿಸಿದ ಚೆಸ್ಟ್

ಬೆಂಗಳೂರು: ಚಂದ್ರಯಾನ–3 ಮಿಷನ್ ಸಾಫ್ಟ್ ಲ್ಯಾಂಡಿಂಗ್ ಬಳಿಕ ಚಂದ್ರನ ಮೇಲ್ಮೈನಲ್ಲಿ ಪ್ರಜ್ಞಾನ್ ರೋವರ್ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ನಡುವೆ ವಿಕ್ರಮ್ ಲ್ಯಾಂಡರ್‌ನಲ್ಲಿರುವ ಚೆಸ್ಟ್ ಪೇಲೋಡ್ ಚಂದ್ರನ ಮೇಲ್ಮೈನಿಂದ ಮೊದಲ ಮಹತ್ವದ ಮಾಹಿತಿಯನ್ನು ಇಸ್ರೋಗೆ ರವಾನಿಸಿದೆ.

ಚೆಸ್ಟ್ ಅಥವಾ 'ಚಂದ್ರಾಸ್ ಸರ್ಫೇಸ್ ಥರ್ಮೋಫಿಸಿಕಲ್ ಎಕ್ಸ್‌ಪೆರಿಮೆಂಟ್‌'ನಿಂದ ಮೊದಲ ಅವಲೋಕನಗಳು ಇಲ್ಲಿದೆ. ಚಂದ್ರನ ಮೇಲ್ಮೈಯ ತಾಪಮಾನ ಅರ್ಥ ಮಾಡಿಕೊಳ್ಳಲು ಚೆಸ್ಟ್ ಚಂದ್ರನ ಮೇಲ್ಪದರವನ್ನು 10 ಸೆಂಟಿಮೀಟರ್ ನಷ್ಟು ಕೊರೆದು ಅದರ ಮಾಹಿತಿಯನ್ನು ಇಸ್ರೋಗೆ ರವಾನೆ ಮಾಡಿದೆ ▶ 8ನೇ ಪುಟಕ್ಕೆ

ಮಂಗಳ, ಶುಕ್ರ ಗ್ರಹಕ್ಕೆ ಮಿಷನ್ ಕಳುಹಿಸುವ ಸಾಮರ್ಥ್ಯ ಭಾರತಕ್ಕಿದೆ

ಆದಿತ್ಯ ಎಲ್1 ಮುಂದಿನ ವಾರ ಉಡಾವಣೆ



ತಿರುವನಂತಪುರ: ಭಾರತವು ಚಂದ್ರ, ಮಂಗಳ ಮತ್ತು ಶುಕ್ರ ಗ್ರಹಗಳಿಗೆ ಪ್ರಯಾಣಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಅಧ್ಯಕ್ಷ ಎಸ್.ಸೋಮನಾಥ್ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ ದೂರದೃಷ್ಟಿಯನ್ನು ಈಡೇರಿಸಲು ಇಸ್ರೋ ಸಿದ್ಧವಾಗಿದೆ ಎಂದು ತಿರುವನಂತಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಹೇಳಿದರು. ಭಾರತವು ಚಂದ್ರ, ಮಂಗಳ ಮತ್ತು ಶುಕ್ರಕ್ಕೆ ▶ 8ನೇ ಪುಟಕ್ಕೆ

ಮಧ್ಯಮ ವರ್ಗಕ್ಕೆ ಆದಾಯ ತೆರಿಗೆ ರದ್ದುಪಡಿಸಿ



ಬೆಂಗಳೂರು: ಆದಾಯ ತೆರಿಗೆಯನ್ನು ರದ್ದುಪಡಿಸಬೇಕು. ಆದಾಯ ತೆರಿಗೆ ದೇಶದ ಮಧ್ಯಮ ಮತ್ತು ಸಂಬಳ ಆಧಾರಿತ ಕುಟುಂಬಗಳಿಗೆ ಹೊರೆಯಾಗುತ್ತಿದೆ. ದೇಶದ ಜಿಡಿಪಿಯಲ್ಲಿ ಶೇ.22ರಷ್ಟು ಪಾಲು ಹೊಂದಿರುವ ಕೃಷಿಗೆ ಆದಾಯ ತೆರಿಗೆ ಅನ್ವಯಿಸುವುದಿಲ್ಲ. ಇನ್ನು ಬೇರೆ ಕೆಲವು ವರ್ಗಗಳಿಗೆ ಸಾಕಷ್ಟು ವಿನಾಯಿತಿಗಳನ್ನು ನೀಡಲಾಗಿದೆ. ಆದರೆ, ಬಡ ಸಂಬಳ ಪಡೆಯುವ ವರ್ಗ ಮಾತ್ರ ಆದಾಯ ತೆರಿಗೆ ಕಟ್ಟುತ್ತಿದೆ ಎಂದು ಬಿಜೆಪಿ ನಾಯಕ, ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಹೇಳಿದರು.

ಬೆಂಗಳೂರಲ್ಲಿ ಮಾತನಾಡಿದ ಅವರು, ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಶೇ.9ಕ್ಕೆ ಏರಿಸಬೇಕು. ದೇಶದಲ್ಲಿನ ತೆರಿಗೆ ಸಂಗ್ರಹದ ಶೇ.75 ಲಕ್ಷುರಿ ವಸ್ತುಗಳ ತೆರಿಗೆಯಿಂದ ಸಂಗ್ರಹವಾಗುತ್ತದೆ. ಲಕ್ಷುರಿ ಉತ್ಪನ್ನಗಳ ವಹಿವಾಟು ಲಾಭದಾಯಕವಾಗಿರುವುದರಿಂದ ಇಂತಹ ಉತ್ಪನ್ನಗಳನ್ನು ನಿರ್ಮಿಸಲು ಕಂಪನಿಗಳು ಉತ್ಸಾಹ ತೋರುತ್ತವೆ. ಜೀವನ ಅಗತ್ಯ ಉತ್ಪನ್ನಗಳನ್ನು ತಯಾರಿಸುವ ಕಂಪೆನಿಗಳಿಗೆ ಒತ್ತು ನೀಡಬೇಕು. ಮಾರುಕಟ್ಟೆ ಆಧಾರಿತ ಆರ್ಥಿಕತೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಹೇಳಿದರು.

ಆ.31ರಂದು ಶಿರಡಿ ಸಾಯಿ ಗುರು ಸ್ಥಾನ ಪ್ರತಿಷ್ಠಾಪನಾ ಮಹೋತ್ಸವ



ಮೈಸೂರು, ಆ.27–ಮೈಸೂರಿನ ರಾಮಕೃಷ್ಣನಗರದ ಶ್ರೀ ಪ್ರಸನ್ನ ಗಣಪತಿ ಮತ್ತು ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ ಟ್ರಸ್ಟ್ ವತಿಯಿಂದ ಶ್ರೀ ಶಿರಡಿ ಸಾಯಿ ಗುರು ಸ್ಥಾನದ ಪ್ರತಿಷ್ಠಾಪನಾ ಮಹೋತ್ಸವವನ್ನು ಆ.31ರಂದು ರಾಮಕೃಷ್ಣನಗರದ ಸಾಯಿ ಮಂದಿರದಲ್ಲಿ ಏರ್ಪಡಿಸಲಾಗಿದೆ. ಶ್ರೀ ಕ್ಷೇತ್ರ ಶಿರಡಿಯ ಗ್ರಾಮದೇವತೆ ಖಂಡೋಬಾ ಮಂದಿರ, ಮಾರುತಿ ಮಂದಿರ, ಚಾವಡಿ ಗುರು ಸ್ಥಾನ ಹಾಗೂ ಬಾಬಾರವರ ಮಹಾ ಸಮಾಧಿ ಮಂದಿರದಲ್ಲಿ ಪೂಜಿಸಲ್ಪಟ್ಟ ಚರಣ ಪಾದುಕೆಯನ್ನು ಇದೇ ಸಂದರ್ಭದಲ್ಲಿ ಬಾಬಾ ಮಂದಿರದ ಆವರಣದಲ್ಲಿರುವ ನಿಂಬು ವೃಕ್ಷದ ಬುಡದಲ್ಲಿ ಪ್ರತಿಷ್ಠಾಪಿಸಲಾಗುವುದು ಎಂದು ಟ್ರಸ್ಟ್ ಪ್ರಕಟಣೆ ತಿಳಿಸಿದೆ.

ಶಿರಡಿಯ ಪ್ರಧಾನ ಅರ್ಚಕರಾದ ಶ್ರೀ ಸುಲಾಖೆ ಮಹಾರಾಜರ ಸಮ್ಮುಖದಲ್ಲಿ ಅಂದು ಬೆಳಗ್ಗೆಯಿಂದ ಕಾಕಡಾರತಿ, ಅಷ್ಟಧಾತು ಮೂರ್ತಿಗೆ ಷೋಡಶೋಪಚಾರ ಪೂಜೆ, ಪಾದುಕೆಗಳ ಪ್ರಾಕಾರೋತ್ಸವ, ಪಾದುಕೆಗೆ ಅಭಿಷೇಕಗಳು, ಪ್ರತಿಷ್ಠಾಪನಾ ಪೂಜೆ ಮತ್ತು ಮಧ್ಯಾಹ್ನದ ಆರತಿ ನಡೆಯಲಿದ್ದು, ನಂತರ ಮಹಾ ಪ್ರಸಾದ ವಿನಿಯೋಗವಿರುತ್ತದೆ.

ಟೆನಿಸ್‌ನಲ್ಲಿ ಅರಣ್ಯಾಧಿಕಾರಿ ದಂಪತಿ ಪುತ್ರಿ ಸಾಧನೆ



ಮೈಸೂರು,ಆ.27(ಎಂಟಿವೈ)–ಅಖಿಲ ಭಾರತ ಟೆನಿಸ್ ಕ್ಲಬ್ (ಎಐಟಿಎ) ಹೈದರಾಬಾದ್‌ನಲ್ಲಿ ಆ.21 ರಿಂದ 26ರವರೆಗೆ 12 ವರ್ಷದೊಳಗಿನ ರಾಷ್ಟ್ರೀಯ ಟೆನಿಸ್ ಪಂದ್ಯಾವಳಿಯಲ್ಲಿ ಮೈಸೂರಿನ ಅರಣ್ಯಾಧಿಕಾರಿ ದಂಪತಿ ಪುತ್ರಿ ಪದ್ಮಪ್ರಿಯ ರಮೇಶ್‌ಕುಮಾರ್ ಅವರು ಬಾಲಕಿಯರ ಸಿಂಗಲ್ಸ್‌ನ ವಿನ್ನರ್, ಡಬಲ್ಸ್‌ನಲ್ಲಿ ರನ್ನರ್ ಅಪ್ ಪ್ರಶಸ್ತಿ ಪಡೆದು ಎಲ್ಲರ ಗಮನ ಸೆಳೆದಿದ್ದಾರೆ.

ಹೈದರಾಬಾದ್‌ನಲ್ಲಿ ನಡೆದಂತಹ ಈ ಪಂದ್ಯಾವಳಿಯಲ್ಲಿ ಕರ್ನಾಟಕ, ತಮಿಳ್ನಾಡು, ತೆಲಂಗಾಣ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ಉತ್ತರ ಪ್ರದೇಶ, ಉತ್ತರಖಂಡ, ಮಧ್ಯಪ್ರದೇಶ, ಒಡಿಸ್ಸಾ, ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳಿಂದ 48 ಟೆನಿಸ್ ಪಟುಗಳು ಭಾಗವಹಿಸಿದ್ದರು. 12 ವರ್ಷದೊಳಗಿನ ಬಾಲಕಿಯರ ವಿಭಾಗದ ಟೆನಿಸ್ ಪಂದ್ಯಾವಳಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದಂತಹ ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆಯ 6ನೇ ತರಗತಿ ವಿದ್ಯಾರ್ಥಿನಿಯಾಗಿರುವ ಪದ್ಮಪ್ರಿಯ ರಮೇಶ್‌ಕುಮಾರ್ ಉತ್ತಮ ಪ್ರದರ್ಶನ ನೀಡುವ ಮೂಲಕ ಬಾಲಕಿಯರ ಸಿಂಗಲ್ಸ್‌ನಲ್ಲಿ ವಿಜೇತೆಯಾಗಿ ಗಮನ ಸೆಳೆದಿದ್ದಾರೆ. ಅಲ್ಲದೇ ಇದೇ ವಿಭಾಗದ ಡಬಲ್ಸ್‌ನಲ್ಲಿಯೂ ಸಹಆಟಗಾರ್ತಿ ಸೃಷ್ಟಿಕಿರಣ್ ಅವರೊಂದಿಗೆ ಅತ್ಯುತ್ತಮವಾದಂತಹ ಪ್ರದರ್ಶನ ನೀಡಿ ರನ್ನರ್ ಅಪ್ ಪ್ರಶಸ್ತಿಯನ್ನು ತನ್ನದಾಗಿಸಿಕೊಳ್ಳುವ ಮೂಲಕ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಆಲ್ ಇಂಡಿಯಾ ಟೆನಿಸ್ ಅಸೋಸಿಯೇಷನ್‌ನಲ್ಲಿ 12 ವರ್ಷದೊಳಗಿನ ವಿಭಾಗದಲ್ಲಿ ಪದ್ಮಪ್ರಿಯ 16ನೇ ರ್‍ಯಾಂಕ್ ಹೊಂದಿರುವ ಆಟಗಾರ್ತಿಯಾಗಿಯೂ ಸಾಧನೆ ಮೆರೆದಿದ್ದಾರೆ. ಅರಣ್ಯ ಇಲಾಖೆಯ ಮೈಸೂರು ವೃತ್ತದ ಸಿಎಫ್ ಆಗಿರುವ ಡಾ.ಮಾಲತಿಪ್ರಿಯ ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾಗಿರುವ ಡಾ.ಪಿ.ರಮೇಶ್ ಅವರ ಪುತ್ರಿಯಾಗಿರುವ ಪದ್ಮಪ್ರಿಯ ಅವರ ಸಾಧನೆಗೆ ಎಲ್ಲೆಡೆಯಿಂದ ಪ್ರಶಂಸೆ ವ್ಯಕ್ತವಾಗುತ್ತಿದೆ.

ರಾಜ್ಯ ವಿಧಾನಪರಿಷತ್ ಚುನಾವಣೆ

ಉಸ್ತುವಾರಿಗಳನ್ನು ನೇಮಿಸಿದ ಬಿಜೆಪಿ

ಬೆಂಗಳೂರು: 2024ರ ಜೂನ್ ತಿಂಗಳಲ್ಲಿ ನಡೆಯಲಿರುವ ಕರ್ನಾಟಕ ವಿಧಾನಪರಿಷತ್ ಚುನಾವಣೆಗೆ ಬಿಜೆಪಿ ಚುನಾವಣಾ ಉಸ್ತುವಾರಿ ನಾಯಕರನ್ನು ನೇಮಿಸಿದೆ. ರಾಜ್ಯ ಬಿಜೆಪಿ ಅಧ್ಯಕ್ಷ ನಳಿನ್‌ಕುಮಾರ್‌ಕಟೀಲ್ ಏಳು ಶಿಕ್ಷಕರ ಮತ್ತು ಪದವೀಧರ ಕ್ಷೇತ್ರಗಳಿಗೆ ಪ್ರಭಾರಿ ನಾಯಕರನ್ನು ನೇಮಿಸಿ ಆದೇಶ ಹೊರಡಿಸಿದ್ದಾರೆ.

ನಾಯಕರ ಪಟ್ಟಿ ಇಲ್ಲಿದೆ: ಬಿ.ಶ್ರೀರಾಮುಲು–ಈಶಾನ್ಯ ಪದವೀಧರ ಕ್ಷೇತ್ರ, ಸಿಟಿ ರವಿ–ನೈಋತ್ಯ ಪದವೀಧರ ಕ್ಷೇತ್ರ, ಆರ್.ಅಶೋಕ್–ಬೆಂಗಳೂರು ಪದವೀಧರ ಕ್ಷೇತ್ರ, ಡಿ.ವಿ.ಸದಾನಂದಗೌಡ–ಆಗ್ನೇಯ ಶಿಕ್ಷಕ ಕ್ಷೇತ್ರ, ಸಿಟಿ ರವಿ–ನೈಋತ್ಯ ಶಿಕ್ಷಕರ ಕ್ಷೇತ್ರ, ಕೆ.ಎಸ್.ಈಶ್ವರಪ್ಪ–ದಕ್ಷಿಣ ಶಿಕ್ಷಕರ ಕ್ಷೇತ್ರ, ಸಿ.ಎನ್.ಅಶ್ವತ್ಥ್ ನಾರಾಯಣ–ಬೆಂಗಳೂರು ಶಿಕ್ಷಕರ ಕ್ಷೇತ್ರ

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: ಸಾವಿನ ಸಂಖ್ಯೆ 5ಕ್ಕೆ ಏರಿಕೆ

ಕೋಲ್ಕತ್ತ ಪಶ್ಚಿಮ ಬಂಗಾಳದ ನಾರ್ತ್ 24 ಪರಗಣಾಸ್ ಜಿಲ್ಲೆಯ ಅಕ್ರಮ ಪಟಾಕಿ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ ಸಾವನ್ನಪ್ಪಿದವರ ಸಂಖ್ಯೆ 5ಕ್ಕೆ ಏರಿಕೆಯಾಗಿದೆ. ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿರುವ ಅಧಿಕಾರಿಗಳು ಸಾವಿನ ಸಂಖ್ಯೆಯನ್ನು ದೃಢಪಡಿಸಿದ್ದು, ಅವಶೇಷಗಳ ಅಡಿಯಿಂದ 5 ಮೃತದೇಹಗಳನ್ನು ಹೊರತೆಗೆದಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ದತ್ತ ಪುಕುರ್‌ನಲ್ಲಿನ ಪೊಲೀಸ್ ಮೂಲಗಳ ಪ್ರಕಾರ ಸಾವಿನ ಸಂಖ್ಯೆ ಹಾಗೂ ಗಾಯಾಳುಗಳ ಸಂಖ್ಯೆ ಇನ್ನೂ ಹೆಚ್ಚಳವಾಗುವ ಸಾಧ್ಯತೆ ಇದೆ. ರಕ್ಷಣಾ ಕಾರ್ಯಾಚರಣೆ ಪ್ರಗತಿಯಲ್ಲಿದ್ದು, ಬರಸತ್‌ನಲ್ಲಿರುವ ಆಸ್ಪತ್ರೆಗೆ ಗಾಯಾಳುಗಳನ್ನು ದಾಖಲಿಸಲಾಗಿದೆ.

ಸಿರಿಧಾನ್ಯ: ಚಿತ್ರಕಲೆ, ಅಡುಗೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ



ಮೈಸೂರು,ಆ.27–ಆಧುನಿಕ ಕೃಷಿಯ ಅಬ್ಬರದಲ್ಲಿ ಮೂಲೆಗುಂಪಾಗಿದ್ದ ಸಿರಿಧಾನ್ಯಗಳನ್ನು ಮತ್ತೆ ಜನಪ್ರಿಯಗೊಳಿಸಿ, ಗ್ರಾಹಕರಿಗೆ ಆರೋಗ್ಯಕರ ಆಹಾರ ಒದಗಿಸುತ್ತಿರುವ ಕೃಷಿ ಸ್ವಯಂಸೇವಾ ಸಂಸ್ಥೆಗಳ ಕೆಲಸ ಮಾದರಿಯಾಗಿದೆ ಎಂದು ಹಿರಿಯ ಪತ್ರಕರ್ತ ನಾಗೇಶ ಹೆಗಡೆ ಪ್ರಶಂಸಿಸಿದರು.

ಸಹಜ ಸಮೃದ್ಧ ಸಂಸ್ಥೆಯು ಐಸಿಎಆರ್–ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ ಸುತ್ತೂರಿನ ಸಹಯೋಗದಲ್ಲಿ ನಡೆದ 'ಸಿರಿಧಾನ್ಯ ಮೇಳ'ದ ಅಂಗವಾಗಿ ಇಲ್ಲಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಆಯೋಜಿಸಿದ್ದ ಚಿತ್ರಕಲೆ ಮತ್ತು ಅಡುಗೆ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಿ, ಮಾತನಾಡಿದರು.

ಸಿರಿಧಾನ್ಯಗಳು ಭೂಮಿ ಹಾಗೂ ಪರಿಸರದ ಆರೋಗ್ಯಕ್ಕೆ ಪೂರಕ. ಅತ್ತ ರೈತರಿಗೂ ಇತ್ತ ಗ್ರಾಹಕರಿಗೂ ಒಳಿತು ಮಾಡುವ ಸಿರಿಧಾನ್ಯಗಳು ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿವೆ. ಸಿರಿಧಾನ್ಯವನ್ನು ಮೌಲ್ಯವರ್ಧನೆಗೊಳಿಸಿ, ಎಷ್ಟೆಲ್ಲ ಬಗೆಯ ತಿನಿಸುಗಳನ್ನು ಮಾಡಬಹುದು ಎಂಬುದನ್ನು ಅಡುಗೆ ಸ್ಪರ್ಧೆಯ ಮೂಲಕ ತೋರಿಸಲಾಗಿದೆ. ಸಿರಿಧಾನ್ಯಗಳನ್ನು ಜನಪ್ರಿಯಗೊಳಿಸುವ ಇಂಥ ಮೇಳಗಳು ಹೆಚ್ಚೆಚ್ಚು ನಡೆಯಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ಕೃಷಿ ಸಲಹೆಗಾರ ಡಾ.ಎ.ಬಿ.ಪಾಟೀಲ ಮಾತನಾಡಿ, ಕೃಷಿ ಬೆಳೆಗಳ ಮೌಲ್ಯವರ್ಧನೆಯು ಅಗತ್ಯವಾಗಿದೆ. ಉತ್ಪಾದನೆ ಜತೆಗೆ ಪ್ಯಾಕಿಂಗ್ ಹಾಗೂ ರಫ್ತು ಮಾಡಲು ರೈತ ಗುಂಪುಗಳು ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ವೀರಗಾಸೆ ಕಲಾವಿದ ಅಂಬಾಳೆ ಶಿವಣ್ಣ, ಕೃಷಿ ವಿಜ್ಞಾನಿ ಎಚ್.ವಿ.ದಿವ್ಯಾ, ಸಹಜ ಆರ್ಗ್ಯಾನಿಕ್ ಸಿಇಓ ಸೋಮೇಶ, ಸಹಜ ಸಮೃದ್ಧದ ನಿರ್ದೇಶಕ ಜಿ.ಕೃಷ್ಣಪ್ರಸಾದ್ ಇತರರು ಉಪಸ್ಥಿತರಿದ್ದರು.

ಸ್ಪರ್ಧಾ ವಿಜೇತರು: ಸಿಹಿ ಅಡುಗೆ ಸ್ಪರ್ಧೆಯಲ್ಲಿ ಪದ್ಮಾ ನಾಗರಾಜು (ಪ್ರಥಮ), ಇಂದ್ರಮ್ಮ ತಿಮ್ಮೇಗೌಡ (ದ್ವಿತೀಯ) ಹಾಗೂ ಕೆಂಪಮ್ಮ ಚಂದ್ರಪ್ಪ (ತೃತೀಯ) ಬಹುಮಾನ ಪಡೆದರೆ, ಖಾರಸಹಿತ ಅಡುಗೆ ಸ್ಪರ್ಧೆಯಲ್ಲಿ ಸಾವಿತ್ರಿ ಕೊಡ್ಲಿ (ಪ್ರಥಮ), ಮಂಜುಳಾ ಆನಂದ (ದ್ವಿತೀಯ) ಹಾಗೂ ರಾಣಿ ಶಿವಪ್ಪ (ತೃತೀಯ) ಬಹುಮಾನ ಪಡೆದರು.

ಮಕ್ಕಳಿಗಾಗಿ ಚಿತ್ರಕಲೆ ಸ್ಪರ್ಧೆ ಏರ್ಪಡಿಸಲಾಗಿತ್ತು. ನಾಲ್ಕನೇ ತರಗತಿಯೊಳಗಿನ ಮಕ್ಕಳಿಗೆ ನಡೆದ ಸ್ಪರ್ಧೆಯಲ್ಲಿ ನಿಯತಿ (ಪ್ರಥಮ), ಪ್ರಾರ್ಥನಾ ರಮೇಶ್ (ದ್ವಿತೀಯ), ವಿಠ್ಠಲ ನರಸಿಂಹ (ತೃತೀಯ) ಹಾಗೂ 5ರಿಂದ 10ನೇ ತರಗತಿ ಮಕ್ಕಳಿಗೆ ನಡೆದ ಸ್ಪರ್ಧೆಯಲ್ಲಿ ಮಾನಸ (ಪ್ರಥಮ), ಅನಿರುದ್ಧ (ದ್ವಿತೀಯ) ಹಾಗೂ ಮಹೇಶ (ತೃತೀಯ) ಬಹುಮಾನ ತಮ್ಮದಾಗಿಸಿಕೊಂಡರು. ಚಿತ್ರಕಲಾ ಸ್ಪರ್ಧೆ ತೀರ್ಪುಗಾರರಾಗಿ ಕಲಾವಿದ ಶಿವು ಹಾಗೂ ಅಡುಗೆ ಸ್ಪರ್ಧೆಯ ತೀರ್ಪುಗಾರರಾಗಿ ಜಮುನಾ, ಭಾಗ್ಯಲಕ್ಷ್ಮೀ ಹಾಗೂ ಶ್ವೇತಾ ಭಾಗವಹಿಸಿದ್ದರು. ಎರಡು ದಿನಗಳ ಕಾಲ ನಡೆದ ಸಿರಿಧಾನ್ಯ ಮೇಳದಲ್ಲಿ ವಿವಿಧ ರಾಜ್ಯಗಳ ಸಿರಿಧಾನ್ಯ ಸಂರಕ್ಷಕರು, ಮೌಲ್ಯವರ್ಧಿತ ಉತ್ಪನ್ನಗಳ ತಯಾರಕರು, ದೇಸಿ ತಳಿ ಸಂರಕ್ಷಕರು, ರೈತ ಉತ್ಪಾದಕ ಕಂಪನಿಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಸೆಲೆಬ್ರೇಷನ್ ಮೈಸೂರು ಮ್ಯಾರಥಾನ್‌ನಲ್ಲಿ ಸಾವಿರಾರು ಮಂದಿ ಭಾಗಿ





ಮೈಸೂರು, ಆ.27(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಭಾನುವಾರ ಲೈಫ್ ಇಸ್ ಕಾಲಿಂಗ್ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಕಂಪನಿ ಆಯೋಜಿಸಿದ್ದ 'ಸೆಲೆಬ್ರೇಷನ್ ಮೈಸೂರು ಮ್ಯಾರಥಾನ್'ನಲ್ಲಿ 3 ಸಾವಿರಕ್ಕೂ ಹೆಚ್ಚು ಮಂದಿ ಕ್ರೀಡಾಸಕ್ತರು ಪಾಲ್ಗೊಂಡು ಗಮನ ಸೆಳೆದರು.

ಮೈಸೂರು ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗದ ಭಾನುವಾರ ಬೆಳಗ್ಗೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಮ್ಯಾರಥಾನ್‌ಗೆ ಚಾಲನೆ ನೀಡಿದರು. 30 ಕಿಮೀ, 21 ಕಿಮೀ, 10 ಕಿ.ಮಿ ಹಾಗೂ 5 ಕಿಮೀ ಓಟದಲ್ಲಿ ವಿವಿಧ ವಯೋಮಾನದ ಕ್ರೀಡಾಸಕ್ತರು, ಕ್ರೀಡಾಪಟುಗಳು ಪಾಲ್ಗೊಂಡು ಸಂಭ್ರಮಿಸಿದರು.

ಮೈಸೂರು ಅರಮನೆ ಮುಂಭಾಗದಿಂದ ಆರಂಭವಾದ ಸೆಲೆಬ್ರೇಷನ್ ಮೈಸೂರು ಮ್ಯಾರಥಾನ್ ಹಾಗೂ ಆಫ್ ಮ್ಯಾರಥಾನ್ ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾರಸ್ತೆ, ಸರಸ್ವತಿಪುರಂ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ ಸೇರಿದಂತೆ ವಿವಿಧ ರಸ್ತೆಗಳಲ್ಲಿ ಸಂಚರಿಸಿತು. ಪ್ರತ್ಯೇಕ ವಿಭಾಗಗಳಲ್ಲಿ ನಡೆದ ಓಟದ ಸ್ಪರ್ಧೆಯಲ್ಲಿ ಮಹಿಳೆಯರು, ಪುರುಷರು, ಯುವಕ–ಯುವತಿ, ಮಕ್ಕಳು, ಹಿರಿಯ ನಾಗರಿಕರು ಪಾಲ್ಗೊಂಡು ಗಮನ ಸೆಳೆದರು. ಈ ಸಂದರ್ಭದಲ್ಲಿ ಅಪೊಲೋ ಆಸ್ಪತ್ರೆಯ ಮುಖ್ಯಸ್ಥ ಡಾ. ಭಾರತೀಶ್ ರೆಡ್ಡಿ, ಜೆಎಸ್‌ಎಸ್ ಸಂಸ್ಥೆಯ ಶ್ರೀಹರಿ ಹಾಗೂ ಲೈಫ್ ಇಸ್ ಕಾಲಿಂಗ್ ಸಂಸ್ಥೆಯ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

10 ಕಿ.ಮೀ ಪುರುಷರ ಓಪನ್ ವಿಭಾಗದಲ್ಲಿ (16 ವರ್ಷದಿಂದ 45 ವರ್ಷ): ಕೆ.ಕಿರಣ್ ಪ್ರಥಮ, ದ್ವಿತೀಯ ಹೆಚ್.ಮೋನಿಶ್, ತೃತೀಯ ಕೆ.ಪಿ.ಅಭಿಷೇಕ್ ಸ್ಥಾನ ಪಡೆದರು. **10 ಕಿ.ಮೀ ಹಿರಿಯ ಪುರುಷರ ವಿಭಾಗ (46ರಿಂದ 60 ವರ್ಷ):** ಬಿ.ಕೆ.ಮಧು ಕರ್ ಪ್ರಥಮ, ದ್ವಿತೀಯ ಸ್ಥಾನ ಕೆಆರ್.ರಾಮಕೃಷ್ಣ, ತೃತೀಯ ಸ್ಥಾನ ಚಂದ್ರಶೇಖರನ್ ಸುಬ್ರಮಣಿಯನ್ ಪಡೆದರು.

10 ಕಿ.ಮೀ ಹಿರಿಯ ಪುರುಷರ ವಿಭಾಗ(61 ವರ್ಷ ಮೇಲ್ಪಟ್ಟವರು): ಪ್ರಥಮ ರವೀಂದ್ರ ಗುಂಡೂರಾವ್, ಎರಡನೇ ಸ್ಥಾನ ವೇದಮೂರ್ತಿ ಹಾಗೂ ಮುರಳೀಧರ ಕೆರಗೋಡು ರಾಮಮೂರ್ತಿ ಮೂರನೇ ಸ್ಥಾನ ತನ್ನದಾಗಿಸಿಕೊಂಡರು. **10 ಕಿ.ಮೀ ಮುಕ್ತ ಮಹಿಳೆಯರ ವಿಭಾಗ(16ರಿಂದ 45 ವರ್ಷ):** ಪ್ರೇರಣಾ ಶ್ರವಣ ಕುಮಾರ್ ಪ್ರಥಮ, ಎಂ.ರಾಜಶ್ರೀ ದ್ವಿತೀಯ, ಸ್ಯಾಂಡಿ ಸತ್ಯನ್ ಮೂರನೇ ಸ್ಥಾನ ಗಳಿಸಿದರು.

10 ಕಿ.ಮೀ ಹಿರಿಯ ಮಹಿಳೆಯರ ವಿಭಾಗ (46ರಿಂದ 60 ವರ್ಷ): ಡಾ.ಎ.ಸುಮಾ ಪ್ರಥಮ ಸ್ಥಾನ, ಎಂ.ಯು. ರಶ್ಮಿ ದ್ವಿತೀಯ, ರವಿ ಬಾಲ 3ನೇ ಸ್ಥಾನ ಪಡೆದರು. **10 ಕಿ.ಮಿ ಹಿರಿಯ ಮಹಿಳೆಯರ ವಿಭಾಗ(61 ವರ್ಷ ಮೇಲ್ಪಟ್ಟವರು):** ಶಾಮಲಾ ಪದ್ಮನಾಭನ್ ಪ್ರಥಮ, ಜ್ಯೋತ್ಸ್ನಾ ಅನಂತ ಕೃಷ್ಣ ದ್ವಿತೀಯ ಸ್ಥಾನ ಪಡೆದರು.

ಹಾಫ್ ಮ್ಯಾರಥಾನ್ ಪುರುಷರ ಮುಕ್ತ ವಿಭಾಗ (16ರಿಂದ 45 ವರ್ಷ): ಎಂ.ದಾಸ್ ಪ್ರಕಾಶ್ ಪ್ರಥಮ ಸ್ಥಾನ, ನಿಖಿಲ್ ಭಾರದ್ವಾಜ್ ದ್ವಿತೀಯ ಸ್ಥಾನ,


ಹಾಫ್ ಮ್ಯಾರಥಾನ್ ಹಿರಿಯ ಪುರುಷರ ವಿಭಾಗ (46ರಿಂದ 60 ವರ್ಷ): ಬಿ.ಎಸ್.ಭಾಸ್ಕರ್ ಪ್ರಥಮ, ಎಂ.ಚಂದ್ರರೆಡ್ಡಿ ದ್ವಿತೀಯ, ಪ್ರಶಾಂತ್ ಅರಸ್ ತೃತೀಯ ಸ್ಥಾನ ಪಡೆದರು. **ಹಾಫ್ ಮ್ಯಾರಥಾನ್ ಹಿರಿಯ ನಾಗರಿಕ ವಿಭಾಗ (61 ವರ್ಷ ಮೇಲ್ಪಟ್ಟವರು):** ಗಿರೀಶ್ ಗುಬ್ಬಿ ದಾಸಪ್ಪ ಪ್ರಥಮ, ಶ್ಯಾಮ ಸುಂದರ್ ದ್ವಿತೀಯ, ಚಂದ್ರಮೌಳಿ ಶರ್ಮಾ ತೃತೀಯ ಸ್ಥಾನ ಪಡೆದರು. **ಹಾಫ್ ಮ್ಯಾರಥಾನ್ ಮುಕ್ತ ಮಹಿಳಾ ವಿಭಾಗ (16 ರಿಂದ 45 ವರ್ಷ):** ಕೋಮಲ್ ಸಾಹ್ನಿ ಪ್ರಥಮ, ಅಮೃತ ದ್ವಿತೀಯ, ಆರ್.ಗಗನ ತೃತೀಯ ಸ್ಥಾನ ಪಡೆದರು.

ಹಾಫ್ ಮ್ಯಾರಥಾನ್ ಹಿರಿಯ ಮಹಿಳಾ ವಿಭಾಗ (46ರಿಂದ 60 ವರ್ಷ): ವಿದ್ಯಾಸುಂದರೇಶ್ವರ ಪ್ರಥಮ, ಅಭಾ ಅಗರ್‌ವಾಲ್ ದ್ವಿತೀಯ ಸ್ಥಾನ ಪಡೆದರು. **30 ಕಿ.ಮೀ. ಹಿರಿಯ ಪುರುಷರ ವಿಭಾಗ (46ರಿಂದ 60 ವರ್ಷ):** ವೆಂಕಟೇಶ್ ಅಡಿಗ ಪ್ರಥಮ, ವಿಶಾಲ್ ಜೈನ್ ದ್ವಿತೀಯ, ಗೋಕುಲ್ ಕಾಮತ್ ತೃತೀಯ ಸ್ಥಾನ ಪಡೆದರು. **30 ಕಿ.ಮೀ. ಹಿರಿಯ ನಾಗರಿಕರ ಪುರುಷರ ವಿಭಾಗ (61 ವರ್ಷ ಮೇಲ್ಪಟ್ಟವರು):** ರಾಮಕೃಷ್ಣ ಪ್ರಥಮ ಸ್ಥಾನ ಪಡೆದರು. **30 ಕಿ.ಮೀ. ಮಹಿಳಾ ಮುಕ್ತ ವಿಭಾಗ (16ರಿಂದ 45 ವರ್ಷ):** ದೇಬಶ್ರೀ ಘೋಷ್ ಪ್ರಥಮ, ಎನ್.ಎಸ್. ಆಶಾ ದ್ವಿತೀಯ, ಅಕ್ಷತಾ ಬಾಳಿಗ ತೃತೀಯ ಸ್ಥಾನ ಪಡೆದುಕೊಂಡರು.

30 ಕಿ.ಮೀ. ಹಿರಿಯ ಮಹಿಳಾ ವಿಭಾಗ (46 ರಿಂದ 60 ವರ್ಷ): ಜೂರಿದತ್ತ ಪ್ರಥಮ, ಡಾ. ಚಿಂತನಾ ಫಾಟ್ಕರ್ ದ್ವಿತೀಯ, ಮನೀಷಾ ಕೆಮ್ಕಾ ತೃತೀಯ ಸ್ಥಾನ ಪಡೆದರು. **30 ಕಿ.ಮೀ. ಹಿರಿಯ ಮಹಿಳಾ ವಿಭಾಗ (61 ವರ್ಷ ಮೇಲ್ಪಟ್ಟವರು):** ಲತಾ ಶ್ರೀನಿವಾಸ್ ಮೊದಲ ಸ್ಥಾನ ಪಡೆದರು.

ಕಳೆ ಗಿಡಗಳಿಗೂ ಪೋಷಕಾಂಶ, ಔಷಧೀಯ ಗುಣಗಳಿವೆ

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ



ಮೈಸೂರು, ಆ.27(ಎಂಟಿವೈ)– ಕಳೆಗಿಡಗಳಿಗೂ ಮಹತ್ವವಿದ್ದು, ಅವುಗಳೂ ನೈಸರ್ಗಿಕವಾಗಿ ಬೆಲೆ ಕಟ್ಟಲಾಗದ ಗಿಡಗಳಾಗಿ ಮಾರ್ಪಾಡಾಗಿವೆ. ಕಳೆ ಗಿಡದಲ್ಲೂ ಪೋಷಕಾಂಶ ಹಾಗೂ ಔಷಧೀಯ ಗುಣ ಕಂಡು ಬರುತ್ತಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದ್ದಾರೆ.

ಮೈಸೂರಿನ ಬೋಗಾದಿ ರಸ್ತೆಯಲ್ಲಿರುವ ಧ್ವನ್ಯಾಲೋಕದಲ್ಲಿ ಉಳುಮೆ ಪ್ರತಿಷ್ಠಾನವು ಭಾನುವಾರ ಆಯೋಜಿಸಿದ್ದ ಚೈತನ್ಯ ಕಳೆಗಿಡಗಳ ಪ್ರದರ್ಶನ, ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ. ಇದರಿಂದ ಕೃಷಿಯಲ್ಲಿ ಹಲವಾರು ಬದಲಾವಣೆಗಳನ್ನು ಕಾಣುವಂತಾಗಿದೆ. ಕಾಲ ಕಾಲಕ್ಕೆ ವಿನೂತನ ಸಂಶೋಧನೆಗಳು ನಡೆಯುತ್ತಿವೆ. ಯಾಂತ್ರಿಕೃತ ಯುಗದಲ್ಲಿ ಪ್ರತಿಯೊಂದು ವಿಷಯದಲ್ಲೂ ವಾಣಿಜ್ಯ ದೃಷ್ಟಿಕೋನ ಕಾಣಸಿಗುತ್ತದೆ ಎಂದರು.

ನಮ್ಮ ಹೊಲ ಗದ್ದೆಗಳಲ್ಲಿ ಬೆಳೆಯುವ ಕಳೆ ಗಿಡವೂ ಬೆಲೆ ಕಟ್ಟಲಾಗದ ಬೆಳೆಯಾಗಿದೆ. ಆದರೆ ಹಣ ತರುವಂತಹ ಬೆಳೆಗೆ ಮಹತ್ವ ನೀಡುತ್ತೇವೆ. ಆದರೆ, ಹಣ ತರದೇ ಇರುವ ಗಿಡಕ್ಕೆ ಕಳೆ ಎನ್ನುತ್ತೇವೆ. ಆದರೂ ಕೃಷಿಗೆ ಪೂರಕವಾದಂತಹ ಔಷಧಿಗಳು ಕಳೆಯಲ್ಲಿ ಇವೆ. ಕಳೆ ಇರುವ ತೋಟ ಯಾವಾಗಲು ತಣ್ಣನೆಯ ವಾತಾವರಣ ಹೊಂದಿರುತ್ತದೆ. ಕಳೆಗಿಡಗಳಿಂದ ಹಸಿರೀಕರಣ, ಭೂಮಿಯ ತೇವಾಂಶ, ಫಲವತ್ತತೆಯ ಸಂರಕ್ಷಣೆ, ಭೂಸವಕಳಿ ತಡೆ ಮತ್ತು ಹವಾಮಾನ ಸಮತೋಲನ ಕಾಯ್ದುಕೊಳ್ಳಲು ನೆರವಾಗುತ್ತದೆ.ಕಳೆಗಿಡಗಳನ್ನು ನಿಕೃಷ್ಟವಾಗಿ ಕಾಣುತ್ತವೆ. ಆದರೆ, ಆಡುಭಾಷೆಯಲ್ಲಿ ಕಳೆ ಎಂದರೆ ಆಕರ್ಷಣೆ, ವಿಕಾಸ ಎಂದಾಗುತ್ತದೆ. ನೈಸರ್ಗಿಕ ಕೃಷಿ ಪದ್ಧತಿಯನ್ನು ಅನುಸರಿಸಬೇಕಿದ್ದು, ವಿವಿಧ ಕಳೆ ಗಿಡಗಳು ಬೆಳೆಯಲು ಸಾಧ್ಯವಾಗುತ್ತದೆ. ಇದರಿಂದ ಕೃಷಿಗೂ ಸಹ ಚೈತನ್ಯ ದೊರೆಯಲಿದೆ ಎಂದು ತಿಳಿಸಿದರು.

ದೊಡ್ಡ ಕಂಪನಿಗಳು ತಮ್ಮ ಸ್ವಾರ್ಥಕ್ಕಾಗಿ ರೈತರನ್ನು ದಿಕ್ಕು ತಪ್ಪಿಸುತ್ತಿವೆ. ಸಂಶೋಧನೆ, ತಂತ್ರಜ್ಞಾನ ಬಳಕೆ, ಕೀಟನಾಶಕ, ರಸಗೊಬ್ಬರ ಬಳಕೆಗೆ ಉತ್ತೇಜನ ನೀಡುವ ಮೂಲಕ ಕೃಷಿಯನ್ನು ದಿಕ್ಕು ತಪ್ಪಿಸುತ್ತಿವೆ. ರೌಂಡ್ ಅಪ್ ಎಂಬ ಕೀಟನಾಶಕ ಬಳಕೆಯಿಂದ ಪರಿಸರ, ಕೃಷಿ ಸ್ನೇಹಿ ಕೀಟಗಳು, ಜೀವಾಣುಗಳು, ಭೂ ಫಲವತ್ತತೆಯೇ ಹಾಳಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಳೆನಾಶಕ ಬಳಕೆ ತಿರಸ್ಕರಿಸಬೇಕು ಎಂದು ಸಲಹೆ ನೀಡಿದರು.

ವ್ಯವಸಾಯದಲ್ಲಿ ನಿಸರ್ಗದ ಗುಣವಿದೆ. ಆದರೀಗ ಕೃಷಿ ಅನೇಕ ರೀತಿಯಲ್ಲೂ ಬದಲಾವಣೆ ಆಗಿ ರೂಪಾಂತರಗೊಂಡಿದೆ. ಅನೇಕ ಸಂಶೋಧನೆ, ಪರಿಷ್ಕರಣೆ ಮಾಡಲಾಗುತ್ತಿದೆ. ಇದರಿಂದ ಒಳ್ಳೆಯದಕ್ಕಿಂತ ಕೆಟ್ಟದ್ದು ಹೆಚ್ಚಾಗಿದೆ. ಜಾಗತಿಕ ಮಟ್ಟದಲ್ಲಿ ಭಾರತದ ಕೃಷಿ, ರೈತರ ಸಮಸ್ಯೆ ಏನೂ ಭಿನ್ನವಾಗಿಲ್ಲ ಎಂದರು.

ಇದೇ ವೇಳೆ ಕೃಷಿಕ, ಲೇಖಕ ಟಿ.ಜಿ.ಎಸ್.ಅವಿನಾಶ್ ಮಾತನಾಡಿ, ಕಳೆಗಿಡಗಳು ನಿರುಪಯುಕ್ತವಲ್ಲ. ಅವುಗಳು ಕೃಷಿಗೆ, ಪರಿಸರಕ್ಕೆ ಉಪಯುಕ್ತ ಸಸ್ಯಗಳಾಗಿವೆ. ಕಳೆಗಿಡಗಳ ಮಹತ್ವದ ಕುರಿತು ರೈತರಿಗೆ ಮನವರಿಕೆ ಮಾಡಿಕೊಡಬೇಕು. ಕೃಷಿ ಭೂಮಿಯಲ್ಲಿರುವ ಅನೇಕ ಸೂಕ್ಷ್ಮ ಜೀವಿಗಳು, ಕೀಟಗಳಿಗೆ ಕಳೆಗಿಡಗಳೇ ಆಸರೆಯಾಗಿವೆ. ಅವುಗಳು ಗಾಳಿ, ಬೆಳಕು, ಆಹಾರ ಒದಗಿಸುತ್ತದೆ. ಆದರೆ, ಅತಿಯಾದ ರಸಗೊಬ್ಬರ ಬಳಕೆಯಿಂದ ಈ ಜೀವಿಗಳೆಲ್ಲ ಸಾಯುತ್ತಿವೆ. ಇದರಿಂದ ಕೀಟಗಳು, ಜೀವಾಣುಗಳ ಮೂಲಕ ಗಿಡಗಳಲ್ಲಿ ನಡೆಯುವ ಪರಾಗಸ್ಪರ್ಶ ಕ್ರಿಯೆಯೂ ತಗ್ಗಿದೆ. ಇದುವೇ ಇಳುವರಿ ಕಡಿಮೆಯಾಗಲು ಕಾರಣವಾಗಿದೆ ಎಂದು ಹೇಳಿದರು.

ಬಿಳಿಗಿರಿರಂಗನಬೆಟ್ಟದ ಪಿಯುಸಿ ವಿದ್ಯಾರ್ಥಿನಿ ರಮ್ಯಾ ಹಾಗೂ ರೈತ ರಾಮೇಗೌಡ ಔಷಧ ಸಸ್ಯಗಳ ಪ್ರಾತ್ಯಕ್ಷಿಕೆ ನೀಡಿದರು. ಕಾರ್ಯಕ್ರಮದಲ್ಲಿ ಕೃಷಿಕರು, ಲೇಖಕ ಎ.ಪಿ.ಚಂದ್ರಶೇಖರ್, ಪರಿಸರ ಅಧ್ಯಯನ ಕೇಂದ್ರದ ಸಂಶೋಧಕ ಮುರಳೀಧರ ಗುಂಗರುಮಳೆ, ಯಗಚಿಹಳ್ಳಿ ಸಾವಯವ ಕೃಷಿ ರಾಮಕೃಷ್ಣಪ್ಪ, ಸಾಮಾಜಿಕ ಕಾರ್ಯಕರ್ತೆ ಎನ್.ಇಂದಿರಮ್ಮ ಇನ್ನಿತರರು ಉಪಸ್ಥಿತರಿದ್ದರು.

ಸಾವರ್ಕರ್ ವಿರೋಧಿಸಿದರೆ ದೇಶದ ಸಾರ್ವಭೌಮತ್ವವನ್ನು ವಿರೋಧಿಸಿದಂತೆ

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ರಘು ಕೌಟಿಲ್ಯ



ಮೈಸೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ಹಮ್ಮಿಕೊಂಡಿದ್ದ ಚಿತ್ರಕಲಾ ಸ್ಪರ್ಧೆ ವಿಜೇತರಿಗೆ ರಘು ಕೌಟಿಲ್ಯ ಬಹುಮಾನ ವಿತರಿಸಿದರು.

ಮೈಸೂರು,ಆ.27–ಸ್ವಾತಂತ್ರ್ಯ ಸೇನಾನಿ ಸಾವರ್ಕರ್ ಅವರನ್ನು ವಿರೋಧಿಸುವುದು ಭಾರತದ ಸಾರ್ವಭೌಮತ್ವವನ್ನು ವಿರೋಧಿಸಿದಂತೆ ಎಂದು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ರಘು ಕೌಟಿಲ್ಯ ಅಭಿಪ್ರಾಯಪಟ್ಟರು.

ಮೈಸೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಾವರ್ಕರ್ ಪ್ರತಿಷ್ಠಾನದ ವತಿಯಿಂದ ಹಮ್ಮಿಕೊಂಡಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಅಖಂಡ ಭಾರತವನ್ನು ಬ್ರಿಟಿಷರ ದಾಸ್ಯದ ಸಂಕೋಲೆಯಿಂದ ಮುಕ್ತಗೊಳಿಸಿ ಸ್ವಾತಂತ್ರ್ಯಕ್ಕಾಗಿ ಇಡೀ ಜೀವನ ಹಾಗೂ ಯೌವ್ವನವನ್ನು ಜೈಲಿನಲ್ಲೇ ಕಳೆದ ಏಕೈಕ ಅಪ್ರತಿಮ ಸ್ವಾತಂತ್ರ್ಯ ಸೇನಾನಿ ಸಾವರ್ಕರ್ ಎಂದರು.

ಅಂದು ದೇಶವನ್ನು ಬ್ರಿಟಿಷರ ದಾಸ್ಯ ಕಾಡುತ್ತಿದ್ದರೆ ಇಂದು ಭಯೋತ್ಪಾದಕರ ಸವಾಲನ್ನು ದೇಶ ಎದುರಿಸುವಂತಾಗಿದೆ ಎಂದ ಅವರು, ಇಂತಹ ಪರಿಸ್ಥಿತಿಯಲ್ಲಿ ಸಾವರ್ಕರ್ ಅವರ ಮಂತ್ರ ಮಾತ್ರ ಯುವಕರಲ್ಲಿ ರಾಷ್ಟ್ರಾಭಿಮಾನದ ಕಿಚ್ಚು ಹತ್ತಿಸಲು ಸಾಧ್ಯ ಎಂದರು. ವರ್ಷಪೂರ್ತಿ ಸಾವರ್ಕರ್ ಅವರನ್ನು ಸ್ಮರಿಸುವ ಕೆಲಸ ನಡೆದು ಭವಿಷ್ಯದ ಮಕ್ಕಳಲ್ಲಿ ಸಾವರ್ಕರ್ ಅವರ ದೇಶಪ್ರೇಮವನ್ನು ಬಿತ್ತಿದರೆ ಸದೃಢ ಭಾರತ ನಿರ್ಮಾಣ ಸಾಧ್ಯ ಎಂದು ಹೇಳಿದರು.

ರಾಮಾಯಣ, ಮಹಾಭಾರತದಂತಹ ಮಹಾನ್ ಗ್ರಂಥಗಳು ಚಿತ್ರಕಲೆಯ ಮೂಲಕವೇ ಜೀವಂತವಾಗಿವೆ. ಸಾವರ್ಕರ್ ಪ್ರತಿಷ್ಠಾನವು ಚಿತ್ರಕಲಾ ಸ್ಪರ್ಧೆ ಮೂಲಕ ಅವರ ಜೀವನ ಗಾಥೆಯನ್ನು ಮತ್ತೊಮ್ಮೆ ಮೆಲುಕು ಹಾಕುವ ಅವಕಾಶವನ್ನು ಕಲ್ಪಿಸಿದೆ ಎಂದು ತಿಳಿಸಿದರು.

ಚಿತ್ರಕಲಾ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ 75ಕ್ಕೂ ಹೆಚ್ಚು ಚಿತ್ರಕಲಾವಿದರು ಭಾಗವಹಿಸಿದ್ದರು. ಸ್ಪರ್ಧೆಯನ್ನು ಪಂಚವಟಿ ಹೋಟೆಲ್ ಮಾಲೀಕರಾದ ಎಸ್.ಸತೀಶ್, ಶಿವಕುಮಾರ್ ಚಿಕ್ಕಕಾನ್ಯ, ಸಾವರ್ಕರ್ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಎಸ್.ಯಶಸ್ವಿನಿ ಉದ್ಘಾಟಿಸಿದರು.

ಬಳ್ಳಾರಿಯ ಪಂಪಾವತಿ 10 ಸಾವಿರ ರೂ. ನಗದಿನೊಂದಿಗೆ ಪ್ರಥಮ ಬಹುಮಾನ, ಗದಗದ ವೀರೇಶ್ 7 ಸಾವಿರ ರೂ. ನಗದಿನೊಂದಿಗೆ ದ್ವಿತೀಯ ಬಹುಮಾನ, ಚಾಮರಾಜನಗರದ ಬಸವರಾಜ್ 5 ಸಾವಿರ ರೂ. ನಗದಿನೊಂದಿಗೆ ತೃತೀಯ ಬಹುಮಾನ ಪಡೆದರು.

ವಿನೋದ್, ಸಂಜಯ್, ಮನೀಷ್, ಭವ್ಯ, ತಿಲಕ್‌ಕುಮಾರ್, ತಾನ್ಯ, ಮಲ್ಲಿಕಾರ್ಜುನ, ತೇಜಸ್ವಿನಿ, ಸೋಮಶೇಖರ್, ಚಂದನ್ ಕುಮಾರ್ ಸಮಾಧಾನಕರ ಬಹುಮಾನಗಳನ್ನು ಪಡೆದರು. ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಪ್ರಶಂಸನಾ ಪತ್ರ ನೀಡಲಾಯಿತು. ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಕಾರ್ಯಕರ್ತರಾದ ಎಸ್.ಎಂ. ರಜತ್, ಹೆಚ್.ಕೆ.ಸಂದೇಶ್, ಎಸ್.ಅಶ್ವಿನ್, ರಾಕೇಶ್ ಭಟ್, ಯೋಗೇಶ್, ಹೇಮಂತ್, ರಾಮತೇಜಸ್ವಿ ಇನ್ನಿತರರು ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.8.2023 ಸೋಮವಾರ, ಮಳೆ ನಕ್ಷತ್ರ: ಮಖ 17.08.2023ರಿಂದ 30.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣ ಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನ ಆವರಣ, ಡಿ. ಬನುಮಯ್ಯ ರಸ್ತೆ, ಕೆಆರ್ ಮೊಹಲ್ಲಾ.

■ **ಆರ್.ಎಸ್.ನಾಯ್ಡು ಕಲೆ ಮತ್ತು ಸಾಂಸ್ಕೃತಿಕ ಕಲ್ಯಾಣ ಟ್ರಸ್ಟ್ :** ಸ್ವಾತಂತ್ರ್ಯ ಹೋರಾಟಗಾರ, ವ್ಯಂಗ್ಯರೇಖಾ ಚಿತ್ರಕಾರ, ಅಮರಶಿಲ್ಪಿ, ವಿಚಾರಶೀಲರಾದ ಕಲಾವಿದ ಆರ್.ಎಸ್.ನಾಯ್ಡುರವರ 118ನೇ ಜನ್ಮ ದಿನಾಚರಣೆ ಅಂಗವಾಗಿ 'ಆರ್‌ಎಸ್‌ಎನ್ ಶ್ರೇಷ್ಠ ಸೇವಾ ಪ್ರಶಸ್ತಿ' ಪ್ರದಾನ, ಪ್ರಶಸ್ತಿ ಪ್ರದಾನ: ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ, ಪ್ರಶಸ್ತಿ ಪುರಸ್ಕೃತರು: ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪುಟ್ಟಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬಾಸುದೇವ್ ಸೋಮಾನಿ ಕಾಲೇಜು, ಕುವೆಂಪುನಗರ, ಬೆಳಗ್ಗೆ 10.45ಕ್ಕೆ.

■ **ಮೈಸೂರು ರೇಸ್ ಕ್ಲಬ್ ಚಾರಿಟಬಲ್ ಟ್ರಸ್ಟ್:** ನೇತ್ರ ತಪಾಸಣೆ ಮತ್ತು ಮೂಲ ಉಪಕರಣಗಳ ಕಾರ್ಯಕ್ರಮ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಥಳ: ಎಂಆರ್‌ಸಿ ಐ ಹಾಸ್ಪಿಟಲ್, ಸಿದ್ಧಾರ್ಥನಗರ, ಸಂಜೆ 6 ಗಂಟೆಗೆ.

■ **ಜಿಲ್ಲಾಡಳಿತ:** ಮೈಸೂರು ಜಿಲ್ಲೆ ಕೆಡಿಪಿ ಸಭೆ, ಅಧ್ಯಕ್ಷತೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತಿ: ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಸ್ಥಳ: ಜಿಪಂ ಸಭಾಂಗಣ, ಬೆಳಗ್ಗೆ 11 ಗಂಟೆಗೆ.

■ **ನೆರಳು ಬೆಳಕು ಗ್ಯಾಲರಿ:** ಕಲಾವಿದ ಆರ್.ಪ್ರವೀಣ್ ಅವರ ಪೇಯಿಂಟ್ ಚಿತ್ರ ಪ್ರದರ್ಶನ, ಸ್ಥಳ: ನೆರಳು ಬೆಳಕು ಗ್ಯಾಲರಿ, ಕಾಫಿ ಸಿಟಿ, ಅಂಬರೀಶ್ ರಸ್ತೆ, ವಿಜಯನಗರ 2ನೇ ಹಂತ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಜೆಎಸ್‌ಎಸ್ ಮಹಾ ವಿದ್ಯಾಪೀಠ, ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಅವರಿಂದ. ವಾಚನ: ಕಾರ್ಯಪಾಲಕ ಅಭಿಯಂತಕರಾದ ವಿದ್ವಾನ್ ಕೃ.ರಾಮಚಂದ್ರ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ. ಸಾಮೂಹಿಕ ಪ್ರಾರ್ಥನೆ: ಸಂಜೆ 6 ಗಂಟೆಗೆ.

■ **ವನವಾಸಿ ಕಲ್ಯಾಣ, ಕರ್ನಾಟಕ ಪ್ರಾಂತ ಕಾರ್ಯಾಲಯ:** ವನಶ್ರೀ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಹ ಕಾರ್ಯವಾಹಕರಾದ ಮುಖಂಡ, ಅಧ್ಯಕ್ಷತೆ: ವನವಾಸಿ ಕಲ್ಯಾಣ, ಕರ್ನಾಟಕ ಅಧ್ಯಕ್ಷ ಮನು ಕಾವೇರಪ್ಪ ಚಕ್ಕೇರ, ಸ್ಥಳ: ನಂ.2889, ಬಸವೇಶ್ವರ ರಸ್ತೆ (ಅಕ್ಕಮ್ಮಣ್ಣಿ ಆಸ್ಪತ್ರೆ ಹಿಂಭಾಗ), ಚಾಮುಂಡಿಪುರಂ, ಬೆಳಗ್ಗೆ 11 ಗಂಟೆಗೆ.

■ **ಪ್ರಾಚ್ಯ ವಿದ್ಯಾ ಸಂಶೋಧನಾಲಯ (ಮೈಸೂರು ವಿಶ್ವವಿದ್ಯಾನಿಲಯ), ಮತ್ತು ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, (ಸ್ವಾಯತ್ತ ಸಂಸ್ಥೆ, ಸಂಸ್ಕೃತಿ ಸಚಿವಾಲಯ, ಭಾರತ ಸರ್ಕಾರ, ಪ್ರದೇಶಿಕ ಕೇಂದ್ರ, ಬೆಂಗಳೂರು):** ಶ್ರೀ ಶ್ರೀ 1008ನೇ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರಿಂದ 'ಶಬ್ದಶಾಸ್ತ್ರ' ವಿಶೇಷ ಉಪನ್ಯಾಸ ಕಾರ್ಯಕ್ರಮ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸ ಗಂಗೋತ್ರಿ, ಮಧ್ಯಾಹ್ನ 3 ಗಂಟೆಗೆ.

■ **ಸನಾತನ ಸಭಾ, ಮೈಸೂರು:** ರಾಮಾಯಣ ಪ್ರವಚನ ಮಾಲಿಕೆ (ಕಿಷ್ಕಿಂದಾ ಕಾಂಡ, ಪ್ರವಚನ ಏಳನೆಯ ಸರಣಿ), ವಿಮರ್ಶಕ ಚಿಂತಕ ವಿದ್ವಾನ್ ಗ.ನಾ. ಭಟ್ಟ ಅವರಿಂದ, ಸ್ಥಳ: ನಾದಬ್ರಹ್ಮ, ಸಂಗೀತಸಭಾ ಕೆ.ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಡಾ. ಮಹೇಶ್ ಭಟ್, 6.15 ಗೀತಾರಾಧನ, 6.35 ಹಾಗೂ ಸಂಜೆ 6.10ಕ್ಕೆ "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ–ಡಾ.ಗಜಾನನ ಶರ್ಮ, 6.40 ಪದಸಂಸ್ಕೃತಿ: ಪ್ರಸ್ತುತಿ–ಡಾ.ಜಿ.ಎಂ.ಹೆಗಡೆ, 7.15 ಕರುನಾಡ ಕಲ್ಪವೃಕ್ಷ: ಪ್ರಾಯೋಜಿತ ಕಾರ್ಯಕ್ರಮ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನೆನಪಿನಂಗಳ: ಕನ್ನಡ ಸಾಹಿತ್ಯ ಲೋಕದ ಹಿರಿಯ ವಿದ್ವಾಂಸರು, ಸಂಶೋಧಕರು ಹಾಗೂ ಭಾಷಾ ಶಾಸ್ತ್ರಜ್ಞ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅವರೊಂದಿಗೆ ಜಿ.ಕೆ.ರವೀಂದ್ರಕುಮಾರ್ ಅವರು ನಡೆಸಿದ್ದ ಸಂವಾದ, 10.00 ಲಯ ಸಂಭ್ರಮ: ತಾಳ, ಲಯ ರಸಾಸ್ವಾದ. ವಿಷಯ–ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಗಳಲ್ಲಿ ಮೃದಂಗದ ಪಾತ್ರವನ್ನು ತಿಳಿಸಿಕೊಡುತ್ತಾರೆ ಸಂಗೀತ ವಿದ್ವಾಂಸರಾದ ಡಾ.ಸುಕನ್ಯಾ ಪ್ರಭಾಕರ್ ಪರಿಕಲ್ಪನೆ ಹಾಗೂ ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ–ಸಿ.ವಿಜಯಲಕ್ಷ್ಮಿ ಶರ್ಮ, ಆರ್.ವೇದವಲ್ಲಿ, 12.45 ನಮ್ಮ ಆರೋಗ್ಯ: ಕಂಜಕ್ಟಿವಿಟೀಸ್ ಅಥವಾ ಮದ್ರಾಸ್ ಐ 'ಕಣ್ಣಿನ ಬೇನೆ' ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ.ಪ್ರಕಾಶ್ ಅವರೊಂದಿಗೆ ಮಾತುಕತೆ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ–ಎನ್.ವೈಷ್ಣವಿ, 3.00 ಆರ್.ಚಂದ್ರಿಕಾ–ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ–ವಿಷಯ– ಪಂಚಕರ್ಮ ಚಿಕಿತ್ಸೆ, ಭಾಗವಹಿಸುವವರು–ಡಾ.ಶಶಿರೇಖಾ, 4.45 ಹಿಂದಿ ಪಾಠ: ಎಸ್.ಈಶ್ವರಭಟ್, 6.50 ಕೃಷಿರಂಗ: ಟಿ.ನರಸೀಪುರ ತಾಲೂಕು ರಂಗಸಮುದ್ರ ಗ್ರಾಮದಲ್ಲಿ ನಡೆದ ಬಾನುಲಿ ಕೃಷಿ ಬೆಳಗು ಕಾರ್ಯಕ್ರಮ ಬಾನುಲಿ ವರದಿ, ಪ್ರಸ್ತುತಿ–ಎನ್.ಕೇಶವಮೂರ್ತಿ, **ರಾತ್ರಿ:** 9.30 ಹಳ್ಳಿ ಹಾಡು: ಪ್ರಸ್ತುತಿ–ಅಬ್ದುಲ್ ರಶೀದ್.

ದೇಶದಲ್ಲೇ ಗಜಗಳ ಬೀಡು ನಮ್ಮ ಕರುನಾಡು

■ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಆ.27 – ಗಜರಾಜ ಸಂತತಿ ಸಂರಕ್ಷಣೆಯಲ್ಲಿ ಕರ್ನಾಟಕದಲ್ಲಿ ಕೈಗೊಂಡ ಕಟ್ಟುನಿಟ್ಟಿನ ಕ್ರಮದಿಂದಾಗಿ ದೇಶದಲ್ಲೇ ಅತಿ ಹೆಚ್ಚು ಆನೆ ಹೊಂದಿರುವ ರಾಜ್ಯ ಎಂಬ ಗೌರವ ದಕ್ಕಿದೆ. ವಿಶ್ವ ಆನೆಗಳ ದಿನದಂದು ಕರ್ನಾಟಕಕ್ಕೆ ಇಂದು ಖುಷಿ ತಂದರೆ ಮತ್ತೊಂದೆಡೆ ಆತಂಕದ ವಿಚಾರ ಎಂದರೆ ಆನೆಗಳ ಅಸಹಜ ಸಾವಿನ ಪ್ರಕರಣಗಳು.

ರಾಜ್ಯದಲ್ಲಿ ಆನೆಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರೊಂದಿಗೆ ಅಸಹಜ ಸಾವಿನ ಪ್ರಕರಣ ಕಡಿವಾಣಕ್ಕೆ ಕಾಡಂಚಿನ ಗ್ರಾಮಗಳ ಜನರ ಸಹಕಾರದ ನಿರೀಕ್ಷೆಯಲ್ಲಿ ಅರಣ್ಯ ಇಲಾಖೆ ಮಗ್ನವಾಗಿದೆ.

ವಿಶ್ವದಲ್ಲೇ ಹುಲಿ ಹಾಗೂ ಆನೆಗಳ ಸಂತತಿಯಲ್ಲಿ ಭಾರತ ತನ್ನದೇ ಆದ ಛಾಪು ಮೂಡಿಸಿದ್ದು, ವನ್ಯಜೀವಿಗಳ ಸಂರಕ್ಷಣೆಯಲ್ಲಿ ವಿಶ್ವದ ಗಮನ ಸೆಳೆಯಲಾರಂಭಿಸಿದೆ. ಜು.29ರಂದು ಆಚರಿಸಲ್ಪಟ್ಟ ವಿಶ್ವ ಹುಲಿ ದಿನ ಕಾರ್ಯಕ್ರಮದಲ್ಲಿ ಭಾರತ ಪಾರುಪತ್ಯ ಹೊಂದಿತ್ತು. ಇದೀಗ ಏಷ್ಯಾ ಆನೆಗಳ ಸಂತತಿಯಲ್ಲೂ ಭಾರತವೂ ಅಗ್ರಪಂಕ್ತಿಯಲ್ಲಿ ಮುನ್ನಡೆಯುತ್ತಿದೆ. ಇದರೊಂದಿಗೆ ದೇಶದಲ್ಲಿ ಕರ್ನಾಟಕವೇ ಹೆಚ್ಚು ಆನೆಗಳನ್ನು ಹೊಂದಿರುವ ರಾಜ್ಯವಾಗಿದೆ. ಆ ಮೂಲಕ ಕರುನಾಡು ಗಜಗಳ ನೆಲೆವೀಡು ಆಗಿದೆ. ಹುಲಿಗಳ ಸಂಖ್ಯೆಯಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದೆ.

ದೇಶದಲ್ಲಿ 32 ಸಾವಿರ ಆನೆಗಳು: ದೇಶದಲ್ಲಿ ಈ ಬಾರಿ ಆನೆ ಗಣತಿಯಲ್ಲಿ 32 ಸಾವಿರ ಆನೆಗಳಿರುವುದು ಕಂಡುಬಂದಿದೆ. ಅದರಲ್ಲಿ ಕರ್ನಾಟಕದಲ್ಲಿ 6,395, ಅಸ್ಸಾಂನಲ್ಲಿ 5,719, ತಮಿಳು ನಾಡಿನಲ್ಲಿ 2961, ಕೇರಳದಲ್ಲಿ 1920 ಆನೆಗಳಿರುವುದು ಗಣತಿಯಲ್ಲಿ ಪತ್ತೆಯಾಗಿದೆ. ದಕ್ಷಿಣ ಭಾರತದ ಕರ್ನಾಟಕ, ಕೇರಳ, ತಮಿಳುನಾಡಿನಲ್ಲಿ ಏಕಕಾಲದಲ್ಲಿ 2023ರ ಮೇ.17ರಿಂದ 19ರವರೆಗೆ ಗಣತಿ ನಡೆಸಲಾಗಿತ್ತು. ಕೇವಲ ಅರಣ್ಯ ಸಿಬ್ಬಂದಿಗಳನ್ನು ಬಳಸಿಕೊಂಡು ಗಣತಿ ನಡೆಸಲಾಗಿತ್ತು.

ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ತಾಂತ್ರಿಕ ನೆರವಿನೊಂದಿಗೆ ಅರಣ್ಯ ಇಲಾಖೆ ಮೂರು ವಿಧಾನದಲ್ಲಿ ಗಣತಿ ನಡೆಸಿತು. ಮೇ 17ರಂದು 5.0 ಚ.ಕಿ.ಮಿ ವ್ಯಾಪ್ತಿಯ ಬ್ಲಾಕ್‌ಗಳಲ್ಲಿ ಹಾಗೂ ಬೀಟ್ ಸಂಖ್ಯೆಯಲ್ಲಿ ಶೇ.30ರಿಂದ 50ರಷ್ಟು ಪ್ರದೇಶದಲ್ಲಿ ನೇರ ಎಣಿಕೆ ಕಾರ್ಯ ನಡೆಸಲಾಗಿತ್ತು. ಮೇ 18ರಂದು 2 ಕಿ.ಮಿ ಉದ್ದದ ಟ್ರಾಂಜಾಕ್ಟ್ ರೇಖೆಗಳಲ್ಲಿ ಸಮೀಕ್ಷೆ ನಡೆಸಿ, ಲದ್ದಿ ಸಮೀಕ್ಷೆ ನಡೆಸಲಾಗಿತ್ತು. ಮೇ 19ರಂದು ಕೆರೆ, ಕಟ್ಟೆ (ವಾಟರ್ ಹೋಲ್) ಬಳಿ ಸಮೀಕ್ಷೆ ನಡೆಸಿ, ಆನೆಗಳ ಗಣತಿ, ಅವುಗಳ ಚಲನವಲನ, ಲಿಂಗದ ಬಗ್ಗೆ ಮಾಹಿತಿ ಕಲೆ ಹಾಕಲಾಗಿತ್ತು. ಗಜಗಣತಿ ವರದಿಯಂತೆ ಕರುನಾಡಿನಲ್ಲಿ ಗಜಸಂತತಿ ಹೆಚ್ಚಾಗಿದ್ದು, ಅಗ್ರಸ್ಥಾನ ಕಾಯ್ದುಕೊಂಡಿದೆ. ರಾಜ್ಯದಲ್ಲಿ 23 ವಿಭಾಗದಲ್ಲಿ ನಡೆದ ಆನೆ ಗಣತಿಯಲ್ಲಿ 5914ರಿಂದ 6877 ಆನೆಗಳು ಕಂಡುಬಂದಿತ್ತು. ರಾಜ್ಯದ ಆನೆಗಳ ಸಂಖ್ಯೆ 6,395 ಎಂದು ತಿಳಿಸಲಾಗಿದೆ. ರಾಜ್ಯಮಟ್ಟದ ಆನೆ ಗಣತಿ ವರದಿಯಲ್ಲಿ ಬಂಡೀಪುರದಲ್ಲಿ 1,116 ಆನೆ, ನಾಗರಹೊಳೆಯಲ್ಲಿ 831, ಮಲೆ ಮಹಾದೇಶ್ವರ ಬೆಟ್ಟ ವನ್ಯಧಾಮದಲ್ಲಿ 706, ಬಿಳಿಗಿರಿರಂಗನಾಥ ಹುಲಿ ಸಂರಕ್ಷಿತ ಪ್ರದೇಶದಲ್ಲಿ 619, ಭದ್ರಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ 445, ಕಾವೇರಿ ವನ್ಯದಾಮ ದಲ್ಲಿ 236, ಮಡಿಕೇರಿ ಪ್ರಾದೇಶಿಕ ವಿಭಾಗದಲ್ಲಿ 214, ಬನ್ನೇರುಘಟ್ಟ ಪ್ರದೇಶದಲ್ಲಿ 127 ಆನೆಗಳಿವೆ.

ಸಾವಿನ ಸರಣಿ: ಆನೆಗಳ ಸಂಖ್ಯೆಯಲ್ಲಿ ಹೆಚ್ಚಳದ ಸಿಹಿ ಸುದ್ದಿಯ ಬೆನ್ನಲ್ಲೇ ಅಸಹಜ ಸಾವಿನ ಸರಣಿ ಸುದ್ದಿಗಳು ಅರಣ್ಯ ಇಲಾಖೆ ಮಾತ್ರವಲ್ಲದೆ, ವನ್ಯಜೀವಿಗಳ ತಜ್ಞರಲ್ಲಿ ತಲ್ಲಣವನ್ನುಂಟು ಮಾಡಿದೆ. ರಾಜ್ಯದಲ್ಲಿ 2021ರಲ್ಲಿ 83 ಆನೆಗಳು ಸಾವನ್ನಪ್ಪಿದ್ದು, ಅದರಲ್ಲಿ 16 ಆನೆ ವಿದ್ಯುತ್ ಸ್ಪರ್ಶ, 1 ಆನೆ ಮರಿ ಉರುಳಿಗೆ ಸಿಲುಕಿ ಸಾವನ್ನಪ್ಪಿದ್ದರೆ, ಎರಡು ಆನೆಗಳು ಗುಂಡೇಟಿಗೆ ಬಲಿಯಾಗಿದ್ದವು. 2022ರಲ್ಲಿ 72 ಆನೆಗಳು ಸಾವನ್ನಪ್ಪಿದ್ದು, ಅವುಗಳಲ್ಲಿ 2 ಆನೆ ಗುಂಡೇಟಿಗೆ ಬಲಿಯಾಗಿದ್ದರೆ, 15 ಆನೆಗಳು ವಿದ್ಯುತ್ ಸ್ಪರ್ಶದಿಂದ ಉಸಿರು ಚೆಲ್ಲಿದ್ದವು. 2023ರಲ್ಲಿ ಜನವರಿಯಿಂದ ಜೂ.4ರವರೆಗೆ 21 ಆನೆಗಳು ಮೃತಪಟ್ಟಿದ್ದು, ಅವುಗಳಲ್ಲಿ 5 ಆನೆಗಳು ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿವೆ. ಮೂರು ವರ್ಷದಿಂದ 36 ಆನೆಗಳು ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿವೆ. 4 ಆನೆಗಳು ಗುಂಡೇಟಿಗೆ ಬಲಿಯಾಗಿವೆ.

ಅರಿವು ಮೂಡಿಸುವುದೇ ಸಾವು ತಡೆಗೆ ಮಾರ್ಗ: ಕಾಡಂಚಿನ ಗ್ರಾಮಗಳಲ್ಲಿ ಹೊಲ, ಗದ್ದೆ, ತೋಟಗಳಿಗೆ ರೈತರು ಅಳವಡಿಸಿರುವ ಬೇಲಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ನೀಡುತ್ತಿರುವುದೇ ಕಾಡಾನೆ ಸೇರಿದಂತೆ ವನ್ಯಜೀವಿಗಳ ಸಾವಿಗೆ ಕಾರಣವಾಗುತ್ತಿದೆ. ಈ ನಿಟ್ಟಿನಲ್ಲಿ ಸೋಲಾರ್ ಬೇಲಿ ಬಳಸುವಂತೆ ಮನವರಿಕೆ ಮಾಡಿಕೊಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆಯೂ ಮುಂದಾಗಿದೆ.



■ಗಜಗಳ ಸಂಖ್ಯೆ ಹೆಚ್ಚಳದೊಂದಿಗೆ ನಿಯಂತ್ರಣಕ್ಕೆ ಬಾರದ ಅಸಹಜ ಸಾವಿನ ಪ್ರಕರಣ
■ಜಾಗೃತಿಯಿಂದ ಮಾತ್ರ ಆನೆಗಳ ರಕ್ಷಣೆ ಸಾಧ್ಯ
■ಮೂರು ವರ್ಷದಲ್ಲಿ 36 ಆನೆ ವಿದ್ಯುತ್ ಸ್ಪರ್ಶದಿಂದ ಸಾವು, 4 ಆನೆಗಳು ಗುಂಡೇಟಿಗೆ ಬಲಿ

ವನ್ಯಜೀವಿಗಳ ಸಂರಕ್ಷಣೆಯಲ್ಲಿ ಕೆಲವು ಕಾರ್ಯಕ್ರಮ ರೂಪಿಸಿ ಕಾಡಂಚಿನ ಗ್ರಾಮಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಇದರ ಫಲವಾಗಿ ವನ್ಯಜೀವಿಗಳ ಸಂರಕ್ಷಣೆಯಲ್ಲಿ ದೇಶದ 53 ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಬಂಡೀಪುರ ಅರಣ್ಯಕ್ಕೆ ಅತ್ಯುತ್ತಮ ಅಂಕ ದೊರೆತು ಎರಡನೇ ಸ್ಥಾನ ಪಡೆದುಕೊಂಡಿದೆ. ರಾಜ್ಯದಲ್ಲೇ ಅತಿ ಹೆಚ್ಚು ಆನೆ (1116) ಹಾಗೂ 191 ಹುಲಿಗಳನ್ನು ಹೊಂದುವ ಮೂಲಕ ರಾಜ್ಯದ ಮೊದಲ ಹಾಗೂ ದೇಶದ ಎರಡನೇ ಹುಲಿ ಸಂರಕ್ಷಿತ ಪ್ರದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅರಣ್ಯ ಸಂರಕ್ಷಣೆಯಲ್ಲಿ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.
–ಡಾ.ಪಿ.ರಮೇಶ್ ಕುಮಾರ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಮೈಸೂರು ಮತ್ತು ಕೊಡಗು ಜಿಲ್ಲೆ ವ್ಯಾಪ್ತಿಗೆ ಒಳಪಡುವ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಈ ಸಾಲಿನಲ್ಲಿ ಒಂದು ಆನೆ ಅಸಹಜ ಸಾವಿಗೆ ತುತ್ತಾಗಿದೆ. ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.
– ಹರ್ಷಕುಮಾರ್, ನಿರ್ದೇಶಕ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ

ಹಿರಿಯ ಜಾನಪದ ವಿದ್ವಾಂಸ ಜಿ.ಎಸ್.ಭಟ್ಟರಿಗೆ ಪ್ರೊ.ಮಳಲಿ ವಸಂತಕುಮಾರ್ ದತ್ತಿ ಪ್ರಶಸ್ತಿ ಪ್ರದಾನ



ಮೈಸೂರು, ಆ.27(ಜಿಎ)–ಹಿರಿಯ ಜಾನಪದ ವಿದ್ವಾಂಸ ಜಿ.ಎಸ್. ಭಟ್ಟ ಅವರಿಗೆ ಪ್ರೊ.ಮಳಲಿ ವಸಂತಕುಮಾರ್ ನೆನಪಿನ ದತ್ತಿ ಪ್ರಶಸ್ತಿಯನ್ನು ಭಾನುವಾರ ಪ್ರದಾನ ಮಾಡಲಾಯಿತು.

ನಗರದ ಸರಸ್ವತಿಪುರಂನ ಕಾಮಾಕ್ಷಿ ಆಸ್ಪತ್ರೆ ಬಳಿ ಇರುವ ಜಿ.ಎಸ್. ಭಟ್ಟರ ಸ್ವಗೃಹದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಏರ್ಪಡಿಸಿದ್ದ ಸರಳ ಸಮಾರಂಭದಲ್ಲಿ ಹಿರಿಯ ಸಾಹಿತಿಗಳಾದ ಪ್ರೊ.ಸಿ.ಪಿ. ಕೃಷ್ಣಕುಮಾರ್ ಹಾಗೂ ಡಾ.ಕೆ. ಅನಂತರಾಮು ಪ್ರಶಸ್ತಿ ಪ್ರದಾನ ಮಾಡಿದರು.

ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರೂ ಆದ ಖ್ಯಾತ ಸಾಹಿತಿ ಡಾ.ಮಳಲಿ ವಸಂತಕುಮಾರ್ ಅವರ ಹೆಸರಿನಲ್ಲಿ ಕಸಾಪದಲ್ಲಿ ಶಾಂತಾ ಮಳಲಿ ಅವರು ದತ್ತಿ ಪ್ರಶಸ್ತಿ ಸ್ಥಾಪಿಸಿದ್ದಾರೆ. ಇತ್ತೀಚೆಗೆ ಜಿಲ್ಲಾ ಕಸಾಪ ಭವನದಲ್ಲಿ ಮಳಲಿ ಸ್ಮರಣಾ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಜಿ.ಎಸ್. ಭಟ್ಟ ಅವರು ವೈಯಕ್ತಿಕ ಕಾರಣಗಳಿಂದ ಸಮಾರಂಭಕ್ಕೆ ಹಾಜರಾಗಿರಲಿಲ್ಲ. ಹೀಗಾಗಿ ಇಂದು ಮನೆಯಲ್ಲಿಯೇ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ವೇಳೆ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿಜ್ಞಾನ ಲೇಖಕ ಪ್ರೊ.ಎಸ್.ಎನ್. ಹೆಗ್ಡೆ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಡಾ.ವೈ.ಡಿ. ರಾಜಣ್ಣ, ಎಂ. ಚಂದ್ರಶೇಖರ್, ದತ್ತಿ ದಾನಿಗಳಾದ ಶಾಂತ ಮಳಲಿ ವಸಂತಕುಮಾರ್, ಸಮಾಜ ಸೇವಕ ಕೆ. ರಘುರಾಂ, ರಂಗಕರ್ಮಿ ರಾಜಶೇಖರ ಕದಂಬ, ಸಾಹಿತಿಗಳಾದ ಡಾ.ಎಚ್.ಟಿ. ಶೈಲಜಾ. ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಡಾ.ಎಂ.ಪಿ. ಮಂಜಪ್ಪಶೆಟ್ಟಿ ಮಸಗಲಿ, ಕನ್ನಡ ಹೋರಾಟಗಾರ ಬಿ.ಎ. ಶಿವಶಂಕರ್, ಜಯಪ್ಪಗೌಡ, ಕುಲಕರ್ಣಿ, ವೆಂಕಟೇಶ್, ಎನ್. ಅನಂತ, ಉಮೇಶ್, ಕುಮುದಾ, ದಿವಾಕರ ಹೆಗ್ಡೆ, ಹೇರಂಭ ಭಟ್ಟ, ಮೋಹನಕುಮಾರ್, ರಂಗನಾಥ್ ಮೈಸೂರು, ಶ್ರೀಧರ ಹೆಗ್ಡೆ, ನೀತಾ ಭಟ್, ಮೋಹನ ಪಾಳೇಗಾರ್, ಅಣ್ಣಾಜಿಗೌಡ, ವಸಂತಕುಮಾರಯ್ಯ, ಜಿಲ್ಲಾ ಕಸಾಪ ಕಾರ್ಯದರ್ಶಿ ಮ.ನ. ಲತಾ ಮೋಹನ್ ಜಂಟಿ ಕಾರ್ಯದರ್ಶಿ ಕೆ. ಕೆಂಪಣ್ಣ ಉಪಸ್ಥಿತರಿದ್ದರು.

ಮುಂಬೈನ ಗ್ಯಾಲಕ್ಸಿ ಹೋಟೆಲ್‌ನಲ್ಲಿ ಭಾರೀ ಅಗ್ನಿ ಅವಘಡ


ಮುಂಬೈ, ಆ.27– ದೇಶದ ಆರ್ಥಿಕ ರಾಜಧಾನಿ ಮುಂಬೈನ ಸಾಂತಾಕ್ರೂಜ್ ಪ್ರದೇಶದಲ್ಲಿರುವ ಗ್ಯಾಲಕ್ಸಿ ಹೋಟೆಲ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು ಅವಘಡದಲ್ಲಿ ಮೂವರು ಸಾವನ್ನಪ್ಪಿದ್ದಾರೆ. ಬೆಂಕಿಯಿಂದಾಗಿ ಇಬ್ಬರಿಗೆ ಗಾಯಗಳಾಗಿವೆ. ಅಗ್ನಿ ಅವಘಡದ ಕುರಿತು ಮಾಹಿತಿ ಪಡೆದ ಅಗ್ನಿಶಾಮಕ ದಳದ ವಾಹನಗಳು ಸ್ಥಳಕ್ಕೆ ಆಗಮಿಸಿ ಸಾಕಷ್ಟು ಪ್ರಯತ್ನದ ನಂತರ ಬೆಂಕಿಯನ್ನು ನಂದಿಸಿವೆ. ಮಧ್ಯಾಹ್ನ ಒಂದು ಗಂಟೆ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ ಎಂದು ಹೇಳಲಾಗುತ್ತಿದೆ. ಬೆಂಕಿ ಅವಘಡದ ಮಾಹಿತಿ ಬಂದ ತಕ್ಷಣ ಹೋಟೆಲ್‌ನಲ್ಲಿ ಕಾಲ್ತುಳಿತ ಉಂಟಾಗಿತ್ತು. ಹೋಟೆಲ್ ಸಿಬ್ಬಂದಿ ತರಾತುರಿಯಲ್ಲಿ ಹೋಟೆಲ್ ಖಾಲಿ ಮಾಡಿದರು. ಬೆಂಕಿ ಅವಘಡ ದಲ್ಲಿ ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಗೊಂಡವರಲ್ಲಿ ಇಬ್ಬರ ಸ್ಥಿತಿ ಚಿಂತಾಜನಕವಾಗಿದ್ದು, ಉತ್ತಮ ಚಿಕಿತ್ಸೆಗಾಗಿ ವಿ.ಎನ್.ದೇಸಾಯಿ ಆಸ್ಪತ್ರೆಗೆ ದಾಖಲಿಸಲಾಗಿದೆ.



ಬಸ್ ಹತ್ತುವಾಗ ಶಿಕ್ಷಕಿ ಸರ ಕಳವು

ಮೈಸೂರು, ಆ.27–ಬಸ್ ಹತ್ತುವಾಗ ಶಿಕ್ಷಕಿ ಯೊಬ್ಬರ ಕತ್ತಿನಲ್ಲಿದ್ದ ಚಿನ್ನದ ಸರ ಕಳವು ಮಾಡಿರುವ ಘಟನೆ ಮೈಸೂರಿನ ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದಿದೆ.

ಹೆಚ್.ಡಿ.ಕೋಟೆ ತಾಲೂಕು ಬೀರಂಬಳ್ಳಿ ಗ್ರಾಮದ ಶಿಕ್ಷಕಿ ರುಕ್ಮಿಣಮ್ಮ(63) ಸರ ಕಳೆದು ಕೊಂಡವರಾಗಿದ್ದು, ಇವರು ಮೈಸೂರಿನ ಮಗನ ಮನೆಗೆ ಬಂದು ಗ್ರಾಮಕ್ಕೆ ಹಿಂತಿರುಗಲು ಆ.24ರಂದು ಸಂಜೆ 4 ಗಂಟೆಗೆ ಕೆಎಸ್‌ಆರ್ ಟಿಸಿ ಬಸ್ ನಿಲ್ದಾಣದ ಪ್ಲಾಟ್‌ಫಾರಂ ನಂ.6ರಲ್ಲಿ ನಿಂತಿದ್ದ ಹೆಚ್.ಡಿ.ಕೋಟೆ ಕಡೆಗೆ ತೆರಳುವ ಬಸ್‌ಗೆ ಹತ್ತುತ್ತಿದ್ದ ವೇಳೆ ಖದೀಮರು ಅವರ ಕತ್ತಿನಲ್ಲಿದ್ದ 30 ಗ್ರಾಂ ತೂಕದ ಚಿನ್ನದ ಸರ ವನ್ನು ಕಳವು ಮಾಡಿದ್ದಾರೆ. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್ ವತಿಯಿಂದ ಮೈಸೂರಿನ ಕುಂಬಾರಕೊಪ್ಪಲಿನ ಶ್ರೀಮತಿ ಲಲಿತಮ್ಮ ವಿಷಕಂಠೇಗೌಡರ ಅಧ್ಯಕ್ಷತೆಯಲ್ಲಿ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಮೈಸೂರು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಕ್ಕೆ 2022–23ನೇ ಸಾಲಿನ ಪ್ರಶಸ್ತಿ ಸಂದಿದ್ದು, ಈ ಹಿನ್ನೆಲೆಯಲ್ಲಿ ಸಂಘದ ಪದಾಧಿಕಾರಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರೂ ಆದ ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ, ಉಪಾಧ್ಯಕ್ಷ ಅಂದಾನಿ, ನಿರ್ದೇಶಕರಾದ ಶೇಖರ್ ಪ್ರಕಾಶ್, ಮಂಜುನಾಥ್, ರೇಣುಕಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಚಾಮುಂಡಿ ರಸ್ತೆ ಓಟದ ಸ್ಪರ್ಧೆ



ಮೈಸೂರು, ಆ.27(ಜಿಎ)–ಚಾಮುಂಡಿ ರಸ್ತೆ ಓಟ ಸ್ಪರ್ಧೆಯಲ್ಲಿ ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ನಾನಾ ವಿಭಾಗದ ಸ್ಪರ್ಧೆಯಲ್ಲಿ ಪಾಲ್ಗೊಂಡು ಕ್ರೀಡಾಸಕ್ತಿ ತೋರಿದರು.

77ನೇ ಸ್ವಾತಂತ್ರ್ಯೋತ್ಸವ ಹಾಗೂ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ಕುವೆಂಪುನಗರದ ಪ್ಯಾಲೇಸ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಭಾನುವಾರ ರಾಮಕೃಷ್ಣ ಪರಮಹಂಸ ವೃತ್ತದ ಬಳಿ ನಡೆದ 10ನೇ ವರ್ಷದ ಜಿಲ್ಲಾ ಮಟ್ಟದ ಚಾಮುಂಡಿ ರಸ್ತೆ ಓಟ ಸ್ಪರ್ಧೆಯನ್ನು ಆಯೋಜಿಸಲಾಗಿತು.

ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಚಾಲನೆ ನೀಡಿ ಮಾತನಾಡಿ, ಕ್ರೀಡೆ ಮಕ್ಕಳ ಜೀವನದ ಅವಿಭಾಜ್ಯ ಅಂಗವಾಗಬೇಕು. ಈ ರೀತಿಯ ಸ್ಪರ್ಧೆಗಳನ್ನು ಆಯೋಜಿಸಿದಾಗ ಮಾತ್ರ ಪಾಲ್ಗೊಂಡು ನಂತರದ ದಿನಗಳಲ್ಲಿ ಕ್ರೀಡೆಯಿಂದ ದೂರ ಉಳಿಯಬಾರದು. ಶಿಕ್ಷಣದೊಂದಿಗೆ ಪ್ರತಿಯೊಬ್ಬ ವಿದ್ಯಾರ್ಥಿಯು ಒಂದಲ್ಲಾ ಒಂದು ಕ್ರೀಡೆಯನ್ನು ಅಭ್ಯಾಸ ಮಾಡಬೇಕು. ಕೇವಲ ಬಹುಮಾನ ಪಡೆಯುತ್ತೇನೆ ಎಂಬುದಕ್ಕೆ ಅಭ್ಯಾಸ ಮಾಡದೇ ಆರೋಗ್ಯಕ್ಕಾಗಿ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಇದೇ ವೇಳೆ ಅಂತಾರಾಷ್ಟ್ರೀಯ ಗುಂಡು ಎಸೆತ ಪಟು ಅಂಬಿಕಾ ಅವರನ್ನು ಸನ್ಮಾನಿಸಲಾಯಿತು. ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ. ಸುಬ್ರಹ್ಮಣ್ಯ, ಸಹಕಾರ ಇಲಾಖೆಯ ಡಾ ಶಶಿಧರ್ ಅವರು ವಿಜೇತ ಸ್ಪರ್ಧಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಓಟದ ಸ್ಪರ್ಧೆಯಲ್ಲಿ ಪ್ರೌಢಶಾಲೆ ಬಾಲಕರು (4 ಕಿ.ಮೀ. ಓಟ) ವಿಭಾಗದಿಂದ ಎಚ್.ಪಿ. ದೊರೆ(ಕನಿಕಾ ಕಾವೇರಿ ಶಾಲೆ)ಪ್ರಥಮ, ಆರ್.ಕೃಷ್ಣ (ಡಿಎಂಎಸ್ ಶಾಲೆ)ದ್ವಿತೀಯ, ಬಿ. ಅಮೋಘ್(ಮರಿಮಲ್ಲಪ್ಪ ಶಾಲೆ)ತೃತೀಯ ಸ್ಥಾನ ಪಡೆದುಕೊಂಡರು. ಪ್ರೌಢಶಾಲೆ ಬಾಲಕಿಯರು (4 ಕಿ.ಮೀ. ಓಟ) ವಿಭಾಗದಿಂದ ಎಸ್. ಅಂಕಿತಾ(ಕುರುಬೂರು ಶಾಲೆ, ತಿ.ನರಸೀಪುರ)ಪ್ರಥಮ, ಎನ್. ಮಾನಸಾ (ಕುರುಬೂರು ಶಾಲೆ, ತಿ.ನರಸೀಪುರ)ದ್ವಿತೀಯ, ಎಂ. ಅನನ್ಯ(ಕುರುಬೂರು ಶಾಲೆ, ತಿ.ನರಸೀಪುರ) ತೃತೀಯ ತಮ್ಮದಾಗಿಸಿಕೊಂಡರು.

ಪ್ರಾಥಮಿಕ ಶಾಲೆ ಬಾಲಕರು(2 ಕಿ.ಮೀ. ಓಟ) ವಿಭಾಗದಿಂದ ಅಜಯ್ ಪೃಥ್ವಿರಾಜ್ (ಟೆರಿಷಿಯನ್ ಶಾಲೆ)ಪ್ರಥಮ, ಮೊಹಮ್ಮದ್ ಅಬಿದಿನ್ ಜೈಮುಲ್(ದೆಲ್ಲಿ ಪಬ್ಲಿಕ್ ಶಾಲೆ) ದ್ವಿತೀಯ, ವಿಶಾಲ್ ಉತ್ತಪ್ಪ(ಪ್ರಗತಿ ಎಲೈಟ್ ಪಬ್ಲಿಕ್ ಶಾಲೆ)ತೃತೀಯ. ಪ್ರಾಥಮಿಕ ಶಾಲೆ ಬಾಲಕಿಯರು(2 ಕಿ.ಮೀ. ಓಟ) ವಿಭಾಗದಿಂದ ಎಸ್. ಜಯಶ್ರೀ(ಪುಟ್ಟಸ್ವಾಮಿ ಶಾಲೆ)ಪ್ರಥಮ, ಹರ್ಷಿಕಾ(ಪ್ರಗತಿ ಎಲೈಟ್ ಪಬ್ಲಿಕ್ ಶಾಲೆ)ದ್ವಿತೀಯ, ಇಂಚರಾ(ಕುರುಬೂರು ಶಾಲೆ, ತಿ.ನರಸೀಪುರ)ತೃತೀಯ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಪೊಲೀಸ್ ಇಲಾಖೆಯ ಅರುಣ್, ನಗರ ಪಾಲಿಕೆ ಸದಸ್ಯೆ ಲಕ್ಷ್ಮಿ ಕಿರಣ್, ಶ್ರೀನಿವಾಸ್, ಪ್ರಕಾಶ್, ದಿನೇಶ್, ಕುಮಾರ್, ಅರುಣ್, ಪ್ಯಾಲೇಸ್ ಸ್ಪೋರ್ಟ್ಸ್ ಕ್ಲಬ್‌ನ ಉಪಾಧ್ಯಕ್ಷ ಎಂ.ಎನ್. ರಮೇಶ್, ಕಾರ್ಯದರ್ಶಿ ಪ್ರಕಾಶ್, ಜಂಟಿ ಕಾರ್ಯದರ್ಶಿ ಕೆ.ವಿ.ರಾಘವೇಂದ್ರಪ್ಪ, ಖಜಾಂಚಿ ಎಸ್. ಶಿವಕುಮಾರ್ ಹಾಗೂ ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.





ಶ್ರೀ ವಿಶ್ವಕರ್ಮ ಸೇವಾ ಟ್ರಸ್ಟ್ ವತಿಯಿಂದ ನಡೆದ ವಾರ್ಷಿಕೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಕಾರ್ಯದರ್ಶಿ ಕೆಂಡಗಣ್ಣ ವಿಶ್ವಕರ್ಮ, ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಜಿ.ಡಿ ಹರೀಶ್ ಗೌಡ, ಶ್ರೀವತ್ಸ ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಗೆಳೆಯ : ರಾತ್ರಿ ಮಲಗಬೇಕಾದ್ರೆ ಸೊಳ್ಳೆ
ಕಡಿತವನ್ನು ಹೇಗೆ ತಡೆಯಬೇಕು...!
ಗುಂಡ : ಸಿಂಪಲ್, ಸೊಳ್ಳೆಂಯೆಲ್ಲ ಮಲಗಿದ ಮೇಲೆ
ನೀವು ಮಲಗಿ ಅಷ್ಟೇ...!

ಮೈಸೂರು ಮಿತ್ರ

ಸೋಮವಾರ, 28 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

'ಕಣ್ಮುಚ್ಚಿಕೊಂಡು ಸತ್ಯದ ಜೊತೆ ನಿಂತುಬಿಡಿ, ಸುಳ್ಳು ಅದನ್ನು ಎಷ್ಟು ಮಣಿಸುವ ಪ್ರಯತ್ನ ಮಾಡಿದರೂ ಕೊನೆಗೆ ಸತ್ಯ ಗೆದ್ದೇ ಗೆಲ್ಲುತ್ತದೆ. ಅದರೊಟ್ಟಿಗೆ ನಿಂತಿದ್ದರಿಂದ ನೀವು ಗೆಲ್ಲುವಿರಿ'.

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು { ಬೆಟ್ಟ ಅಗೆದು ಇಲಿ ಹಿಡಿದ ಹಾಗೆ.

ನಿಮ್ಮ ಪತ್ರಗಳು

ಮರೆಯದ ಅಮೂಲ್ಯ ರತ್ನ ಪೂಜ್ಯ ರಾಜೇಂದ್ರ ಶ್ರೀಗಳು...

ಮಾನ್ಯರೆ,

'ಜಾತಸ್ಯ ಮರಣಂ ಧ್ರುವಂ' ಎಂಬಂತೆ ಹುಟ್ಟಿದವರಿಗೆ ಸಾವು ತಪ್ಪದು, ಹುಟ್ಟು ಸಾವುಗಳ ನಡುವೆ, ಮಾನವರು ಸಮಾಜಕ್ಕೆ ಏನಾದರೂ ಕೊಡುಗೆಯನ್ನು ನೀಡಿ, ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡರೆ, ಅಂಥವರ ಬದುಕು ಅಮೂಲ್ಯವೂ, ಅಮರವೂ ಆಗುತ್ತದೆ, ಅಂಥವರನ್ನು ಸಮಾಜವು ಸೂರ್ಯ, ಚಂದ್ರ ಇರುವವರೆಗೂ ಸದಾ ಸ್ಮರಿಸುತ್ತದೆ, "ಪರೋಪಕಾರಾರ್ಥ ಇದಂ ಶರೀರಂ" ಎಂಬ ಸೂಕ್ತಿಯಂತೆ ತಮ್ಮ ಲೌಕಿಕ ಹಾಗೂ ಆಧ್ಯಾತ್ಮಿಕ ಸಾಮರ್ಥ್ಯವನ್ನು ಮನುಕುಲದ ಉನ್ನತಿಗಾಗಿ ಶ್ರಮಿಸಿದ,



ಶಿಕ್ಷಣದಿಂದಲೇ ಸಮುದಾಯದ ಸರ್ವಾಂಗೀಣ ಅಭಿವೃದ್ಧಿ ಎಂಬ ಮಂತ್ರವನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡು ಅನುಷ್ಠಾನಗೊಳಿಸಿದವರು ಶ್ರೇಷ್ಠ ಸಂತ, ಕಾಯಕ ತಪಸ್ವಿ, ಜ್ಞಾನಾನ್ನದಾಸೋಹಿ, ಕರುಣಾಮಯಿ, ಬಡ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಸದಾ ಮಿಡಿಯುತ್ತಿದ್ದ, ಗ್ರಾಮೀಣ ಭಾಗದಲ್ಲಿ ಅಕ್ಷರ ದೀಪವನ್ನು ಹಚ್ಚಿಸಿ ಕೋಟ್ಯಾನುಕೋಟಿ ಮನೆ, ಮನಗಳಿಗೆ ಬೆಳಕನ್ನು ಚೆಲ್ಲಿದ, ಭಕ್ತರ ಹೃನ್ಮನಗಳಲ್ಲಿ ಅಜರಾಮರವಾಗಿ ನೆಲೆಸಿರುವ ಜಗದ ಜಂಗಮರಾಗಿ, ಸುತ್ತೂರ ಸುರದೇನು, ಮಹಾ ಮಾನವತಾವಾದಿಗಳಾದ ಸುತ್ತೂರು ಮಠದ 23ನೆಯ ಗುರು ಪರಂಪರೆಯ ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಸಕಲ ಜೀವಾತ್ಮರಿಗೂ ಲೇಸನ್ನು ಬಯಸಿದ ಪೂಜ್ಯ ಶ್ರೀಗಳ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ, ಶ್ರೀಗಳದು ಸರಳತೆಯ ದ್ಯೋತಕವಾಗಿ ಕಾವಿ ಉಡುಗೆಯನುಟ್ಟು, ಕಪ್ಪು ಕನ್ನಡಕ, ತಲೆಯ ಮೇಲೆ ಅದೇ ಮುಸುಕು, ಕೊರಳಲ್ಲಿ ನಿರ್ಮಲ ರುದ್ರಾಕ್ಷಿ ಮಾಲೆ, ಹಣೆಯಲ್ಲಿ ವಿಭೂತಿ, ಕಾಲಿನಲ್ಲಿ ಮರದ ಹಾವುಗೆ, ಮುಖದಲ್ಲಿ ಮಂದಹಾಸ, ಮರುಗದ ಗಿಡದಂತೆ ಕರುಣೆಯ ಪರಿಮಳವನ್ನು ವಿಶ್ವದಾದ್ಯಂತ ಪಸರಿಸಿದ ಮಹಾ ಚೇತನರು,

"Lives of great men all remind us
We can make our lives sublime"

ಎಂಬ ಇಂಗ್ಲೀಷಿನ ಕವಿವಾಣಿಯಂತೆ ಇಂತಹ ಮಹಾಪುರುಷರ ಸಾರ್ಥಕ ಜೀವನವು ನಮ್ಮನ್ನು ಪದೇ ಪದೆ ನೆನಪಿಸುತ್ತದೆ, ಇಂತಹ ಮಹಾತ್ಮರ ಜನ್ಮ ದಿನವನ್ನು ನಾವೆಲ್ಲರೂ ಆಚರಿಸುತ್ತಾ, ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಸಾಗೋಣ ಎಂದು ಸಂಕಲ್ಪ ಮಾಡಿ, ನಿಜ ಜೀವನದಲ್ಲಿ ಅಳವಡಿಸಿಕೊಂಡು ಜಗತ್ತಿಗೆ ನಮ್ಮದೇ ಆದ ಉತ್ತಮ ಕೊಡುಗೆಗಳನ್ನು ನೀಡೋಣ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾಲೂಕು.

ಬೇಲಿಯೇ ಎದ್ದು ಹೊಲ ಮೇಯ್ದಂತೆ

ಮಾನ್ಯರೆ,


ಮೈಸೂರು ನಗರದ ರಿಂಗ್ ರೋಡ್‌ನಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರೊಬ್ಬರ ಪುತ್ರ ದ್ವಿಚಕ್ರ ವಾಹನದಲ್ಲಿ ವ್ಹೀಲಿಂಗ್ ಮಾಡುತ್ತಿದ್ದಾಗ ಪೊಲೀಸರು ತಮ್ಮ ವಶಕ್ಕೆ ಪಡೆದು, ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ, ಕೆಲವು ಪೊಲೀಸರು ತಮ್ಮ ಮಕ್ಕಳಿಗೆ ಬುದ್ಧಿ ಹೇಳಲು ಅಸಮರ್ಥರೇ ಅಥವಾ ಇದು ಪೊಲೀಸ್‌ರ ಮಕ್ಕಳ ದುರಹಂಕಾರದ ವರ್ತನೆಯೇ, ಇದು ಹೇಗಿದೆ ಎಂದರೆ, "ಬೇಲಿಯೇ ಎದ್ದು ಹೊಲ ಮೇಯ್ದಂತೆ". ಮತ್ತೊಂದು ಪ್ರಕರಣದಲ್ಲಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕಾಲೇಜು ವಿದ್ಯಾರ್ಥಿಯೊಬ್ಬ, ಬುದ್ಧಿವಾದ ಹೇಳಿದ ಕಾಲೇಜು ಉಪನ್ಯಾಸಕರೊಬ್ಬರಿಗೆ ಲಾಂಗ್ ತೋರಿಸಿ ಜೀವ ಭಯ ಉಂಟು ಮಾಡಿದ್ದಾನೆ. ಈ ವಿದ್ಯಾರ್ಥಿಯನ್ನು ಪೊಲೀಸ್ ಠಾಣೆಗೆ ಕರೆ ತಂದು, ತಪ್ಪೊಪ್ಪಿಗೆ ಪತ್ರ ಬರೆಸಿಕೊಂಡು ಮನೆಗೆ ಕಳುಹಿಸಿದ್ದಾರೆ, ಪೊಲೀಸರು ಇಷ್ಟೊಂದು ಮೃದುವಾಗಿ ಬಿಟ್ಟರಾ ಅಥವಾ ಈ ವಿದ್ಯಾರ್ಥಿ ಭಾರಿ ಪ್ರಭಾವಿ ಹಿನ್ನೆಲೆ ಉಳ್ಳವನಾಗಿರಬೇಕು, ಈ ಪ್ರಕರಣ ಹೇಗಿದೆ ಎಂದರೆ, ಪಾಠ ಹೇಳಿ ಕೊಡುವ ಮೇಷ್ಟ್ರುಗಳಿಗೆ, ಲಾಂಗು ಮಚ್ಚು ತೋರಿಸಿ ಹೆದುರಿಸಿದರೂ, ನಮಗೇನು ಶಿಕ್ಷೆಯಾಗುವುದಿಲ್ಲ ಎಂಬ ಆತ್ಮವಿಶ್ವಾಸ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಮರೆಯಾದ ಮಾಣಿಕ್ಯ ಸಿ.ಆರ್.ರಾವ್

ಮಾನ್ಯರೆ,

ಭಾರತ ದೇಶ ಜಗತ್ತಿನ ಪ್ರತಿಯೊಂದು ಕ್ಷೇತ್ರಕ್ಕೂ ತನ್ನದೇ ಆದ ಕೊಡುಗೆ ನೀಡಿದೆ, ಇದೇ ಹಾದಿಯಲ್ಲಿ ಗಣಿತ ಮತ್ತು ಸಂಖ್ಯೆ ಕ್ಷೇತ್ರಕ್ಕೆ "0" ; ಸೊನ್ನೆ ಭಾರತದ ಕೊಡುಗೆ ಎಂದರೆ ತಪ್ಪಾಗಲಾರದು. ಸೊನ್ನೆಯಿಲ್ಲದ ಯಾವ ಅಂಕೆಯು ಪರಿಪೂರ್ಣವಾಗಲಾರದು. ಗಣಿತ ಮತ್ತು ಸಂಖ್ಯಾಕ್ಷೇತ್ರಕ್ಕೆ ಭಾರತದ ಮತ್ತೊಂದು ಕೊಡುಗೆ ಸಿ.ಆರ್.ರಾವ್ ಎಂದು ಖ್ಯಾತರಾದ ಕಲ್ಯಂಪುಡಿ ರಾಧಾಕೃಷ್ಣರಾವ್ ಅವರು ಮೂಲತಃ ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್‌ರಾಗಿದ್ದ ಸಿ.ಡಿ.ನಾಯ್ಡು ಮತ್ತು



ಎ.ಲಕ್ಷ್ಮೀಕಾಂತಮ್ಮ ಎಂಬ ತೆಲುಗು ದಂಪತಿಯ ಕುಟುಂಬದಲ್ಲಿ ಜನಿಸಿದ್ದರು.

ಸಿ.ಆರ್. ರಾವ್‌ರವರು ಗುಡೂರು, ನಂದಿಗ್ರಾಮ ಮತ್ತು ವಿಶಾಖಪಟ್ಟಣದಲ್ಲಿ ಶಾಲಾ ಶಿಕ್ಷಣ ಮುಗಿಸಿದ್ದರು. ಬಳಿಕ ಆಂಧ್ರ ವಿಶ್ವವಿದ್ಯಾಲಯದಲ್ಲಿ ಎಂಎಸ್ಸಿ (ಗಣಿತಶಾಸ್ತ್ರ) ಮತ್ತು 1943ರಲ್ಲಿ ಕೋಲ್ಕತ್ತ ವಿಶ್ವವಿದ್ಯಾಲಯದಲ್ಲಿ ಸಂಖ್ಯಾಶಾಸ್ತ್ರದಲ್ಲಿ ಎಂಎ ಪದವಿ ಪಡೆದಿದ್ದರು. 1948ರಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಕಿಂಗ್ಸ್ ಕಾಲೇಜಿನಲ್ಲಿ ಪಿಎಚ್.ಡಿ ಪದವಿ ಪಡೆದಿದ್ದರು. ಗಣಿತ ಮತ್ತು ಸಂಖ್ಯಾಶಾಸ್ತ್ರ ಕ್ಷೇತ್ರದಲ್ಲಿ ರಾವ್ ಅವರು ಮಾಡಿರುವ ಸಾಧನೆಗಾಗಿ 1968ರಲ್ಲಿ ಪದ್ಮಭೂಷಣ, 2001ರಲ್ಲಿ ಕೇಂದ್ರ ಸರ್ಕಾರ ಭಾರತದ ಅತ್ಯುನ್ನತ ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. 75 ವರ್ಷಗಳ ಹಿಂದೆ ಸಂಖ್ಯಾಶಾಸ್ತ್ರದಲ್ಲಿ ಕ್ರಾಂತಿಯನ್ನು ಮಾಡಿದ್ದ ರಾವ್ ಅವರ ಅಪಾರ ಕೊಡುಗೆಯ ಸ್ಮರಣಾರ್ಥ 2023ರ ಸಾಲಿನ ನೊಬೆಲ್ ಪ್ರಶಸ್ತಿಗೆ ಸಮಾನವಾದ 'ಇಂಟರ್‌ನ್ಯಾಷನಲ್ ಪ್ರೈಜ್ ಆಫ್ ಸ್ಟ್ಯಾಟಿಸ್ಟಿಕ್ಸ್ 2023' ಅಂತರರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದರು. ಸಿ.ಆರ್. ರಾವ್ ಅವರು 19 ದೇಶಗಳಿಂದ 39 ಡಾಕ್ಟರೇಟ್ ಪದವಿ ಪಡೆದಿದಿದ್ದರು ಮತ್ತು 477 ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದು, 15 ಪುಸ್ತಕಗಳನ್ನು ಬರೆದಿದ್ದಾರೆ. ಇವರ ಸಂಖ್ಯಾ ಕ್ಷೇತ್ರದಲ್ಲಿನ ಸಾಧನೆಯನ್ನು ಪರಿಗಣಿಸಿ ಅಮೆರಿಕ ಅಧ್ಯಕ್ಷರಾಗಿದ್ದ ಜಾರ್ಜ್ ಬುಷ್ ಅವರು 2002ರಲ್ಲಿ ದೇಶದ ಅತ್ಯುನ್ನತ ಪ್ರಶಸ್ತಿ 'ನ್ಯಾಷನಲ್ ಮೆಡಲ್ ಆಫ್ ಸೈನ್ಸ್' ಅನ್ನು ನೀಡಿ ಗೌರವಿಸಿದ್ದರು. ಸಿ.ಆರ್.ರಾವ್‌ರವರ ನಿಧನ ಭಾರತ ಮತ್ತು ಪ್ರಪಂಚದ ಗಣಿತ ಮತ್ತು ಸಂಖ್ಯಾ ಕ್ಷೇತ್ರಕ್ಕೆ ತುಂಬಲಾರದ ನಷ್ಟವೆಂದರೆ ತಪ್ಪಾಗಲಾರದು, ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸೋಣ.

–ರಾಸುಮ ಭಟ್, ಚಿಕ್ಕಮಗಳೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಧರೆಯನ್ನುದ್ಧರಿಸಿದ ಮಹಾನುಭಾವರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು



ಗರ್ವಪಡದುಪಕಾರಿ ದರ್ಪಬಿಟ್ಟಧಿಕಾರಿ
ನಿರ್ವಿಕಾರದ ನಯನದಿಂ ನೋಳ್ಪುದಾರಿ
ಸರ್ವಧರ್ಮಾಧಾರಿ ನಿರ್ವಾಣಸಂಚಾರಿ
ಉರ್ವರೆಗೆ ಗುರುವವನು ಮಂಕುತಿಮ್ಮ॥

ಡಿ.ವಿ.ಜಿ. ಈ ಪದ್ಯವನ್ನು ಬರೆದಾಗ ಯಾರನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೋ ತಿಳಿಯದು. ನಿಜಗುರುವಿನ ಲಕ್ಷಣವನ್ನಂತೂ ಇಲ್ಲಿ ಹೇಳಿದ್ದಾರೆ. ನೂರು ಜನಕ್ಕೆ, ಸಾವಿರ ಮಂದಿಗೆ ಉಪಕಾರ ಮಾಡಿದ್ದರೂ 'ನಾನು ಮಾಡಿದೆ' ಎಂದು ಗರ್ವವನ್ನು ತಾಳದವರು, ಏನೇ ಅಧಿಕಾರವಿದ್ದರೂ ಅದರಿಂದ ದರ್ಪವನ್ನು ತೋರದವರು, ದೊಡ್ಡವರನ್ನು ಚಿಕ್ಕವರನ್ನು, ಶ್ರೀಮಂತರನ್ನು ಬಡವರನ್ನು, ಪ್ರಾಜ್ಞರನ್ನು ಅಜ್ಞರನ್ನು, ಉನ್ನತಾಧಿಕಾರಿಗಳನ್ನು ಸೇವಕರನ್ನು ನಿರ್ವಿಕಾರವಾಗಿ ಸಮದೃಷ್ಟಿಯಿಂದ ಕಾಣುವ ಉದಾರಮನೋಭಾವವನ್ನು ಉಳ್ಳವರು, ತಮ್ಮ ಧರ್ಮದಲ್ಲಿ ಅಚಲ ನಿಷ್ಠೆಯನ್ನು ಹೊಂದಿದವರಾದರೂ ಸರ್ವಧರ್ಮಗಳಲ್ಲಿರುವ ಉತ್ತಮ ತತ್ತ್ವಗಳನ್ನು ಕಂಡು ಎಲ್ಲಕ್ಕೂ ಆಧಾರವಾಗಿರುವವರು, ಲೋಕದಲ್ಲಿ ಬೆರೆತಿದ್ದರೂ ಧ್ಯಾನಕಾಲದಲ್ಲಿ ಅದನ್ನೆಲ್ಲ ಮರೆತು ಬ್ರಹ್ಮನಿರ್ವಾಣದಲ್ಲಿ ಮಾತ್ರ ಸಂಚರಿಸುವವರು ಸಮಸ್ತ ಜಗತ್ತಿಗೆ ಗುರುಗಳು. ಅಂತಹವರು ಕೇವಲ ಕವಿಕಲ್ಪನೆ ಯಲ್ಲಿ ಇರುವುದಕ್ಕೆ ಸಾಧ್ಯ, ಈ ಲೋಕದಲ್ಲಿರಲು ಸಾಧ್ಯವಿಲ್ಲ ಎಂದು ಕೆಲವರು ಹೇಳಬಹುದು. ಅಂತಹ ಗುರುಗಳು ಕೃತಯುಗದಲ್ಲೋ ತ್ರೇತಾಯುಗದಲ್ಲೋ ಇದ್ದಿರಬಹುದು, ಕಲಿಯುಗದಲ್ಲಿ ಅದು ಶಕ್ಯವಲ್ಲ ಎಂದು ಮತ್ತೆ ಕೆಲವರು ನುಡಿಯಬಹುದು. ಆದರೆ ಆ ಎಲ್ಲ ಗುಣಗಳನ್ನು ಮೈಗೂಡಿಸಿಕೊಂಡು ಬದುಕಿದ, ಬಾಳಿದ, ಜಗವನ್ನು ಶಿವ ಪಥದೆಡೆಗೆ ನಡೆಸಿದ ಗುರುವನ್ನು ನಾವು ಇಪ್ಪತ್ತನೆಯ ಶತಮಾನದಲ್ಲೆ ಕಣ್ಣಾರೆ ಕಂಡೆವು. ಅವರೇ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು.

ಆ ಮಹಾನುಭಾವರ ನಿಕಟಪಾರ್ಶ್ವದಲ್ಲಿ ಓಡಾಡಿ ಬದುಕಿನ ದಾರಿಯನ್ನು ಕಂಡುಕೊಂಡ ಸುಕೃತಿಗಳು, ಅವರ ಅನುಗ್ರಹದಿಂದ ವಿದ್ಯೆಯನ್ನೂ ಉದ್ಯೋಗವನ್ನೂ ಪಡೆದು ಬಾಳಿನ ಹಾದಿಯನ್ನು ಸುಗಮಗೊಳಿಸಿಕೊಂಡ ಧನ್ಯರು, ಅವರಿಂದ ಅಧ್ಯಾತ್ಮದ ಅರಿವನ್ನು ಹೊಂದಿ ಭಕ್ತಿಮಾರ್ಗದಲ್ಲಿ ಮೇಲೇರಿ ಭಗವದನುಭವದ ಸವಿಯನ್ನು ಸಾಕ್ಷಾತ್ಕರಿಸಿಕೊಂಡ ಸಾರ್ಥಕಜೀವಿಗಳು ಅವರ ಬಗೆಗೆ ಗ್ರಂಥಗಳನ್ನು ರಚಿಸಿದ್ದಾರೆ, ಲೇಖನಗಳನ್ನು ಬರೆದಿದ್ದಾರೆ, ಭಾಷಣಗಳನ್ನು ಮಾಡಿದ್ದಾರೆ. ನಾನಷ್ಟು ಪುಣ್ಯ ಮಾಡಿದವನಲ್ಲ. ಎಷ್ಟೋ ಕೋಟಿ ಮೈಲಿ ದೂರದಲ್ಲಿರುವ ಸೂರ್ಯನಿಗೆ ಭಕ್ತಿಯಿಂದ ಅರ್ಘ್ಯನೀಡುವಂತೆ, ಎಷ್ಟೋ ದೂರದಿಂದ ಹಿಮಾಲಯವನ್ನು ನೋಡಿ ಬೆರಗಿನಿಂದ ಕೈ ಮುಗಿಯುವ ಮಗುವಿನಂತೆ, ವಿಶಾಲವಾದ ಸಮುದ್ರದ ಅಲೆಗಳ ನೋಟದಿಂದ ಅದರ ವಿಸ್ತಾರವನ್ನೂ ಊಹಿಸಲಾಗದೆ ವಿಸ್ಮಯದಿಂದ ಮೈ ಮರೆಯುವ ಮುಗ್ಧನಂತೆ ನಾಲ್ಕು ನುಡಿಗಳನ್ನು ಆಡುತ್ತಿದ್ದೇನೆ. ಈ ಬಗೆಗೆ ಡಿ.ವಿ.ಜಿ. ಅವರ ಇನ್ನೊಂದು ಪದ್ಯವನ್ನು ಉದಾಹರಿಸಬಹುದು.

ತರಣಿ ದರ್ಶನಕ್ಕಿಂತ ಕಿರಣಾನುಭವ ಸುಲಭ
ಪರಮಶಾಸ್ತ್ರಕ್ಕಿಂತ ಸರಿಯುದಾಹರಣೆ ।
ಪರಮತತ್ತ್ವವ ಕಂಡ ಗುರುವನರಸುವುದೆಲ್ಲಿ
ದೊರೆತಂದು ನೀ ಧನ್ಯ ಮಂಕುತಿಮ್ಮ ॥

ಸೂರ್ಯನ ಬಳಿಗೆ ಹೋಗಿ ಮುಟ್ಟುವುದು ಅಸಾಧ್ಯ, ಅವನ ಕಿರಣಗಳ ಅನುಭವವೇ ನಮಗೆ ಸಾಕು. ಶಾಸ್ತ್ರಗಳ ಆಳವನ್ನು ನಾವರಿಯಲಾರೆವು, ಅವು ಕೊಟ್ಟ ಉದಾಹರಣೆಯಿಂದಲೇ ನಾವು ವಿಷಯವನ್ನು ತಿಳಿಯುವುದು ಲೇಸು. ಹಾಗೆ ದೊಡ್ಡವರ ಪ್ರಭಾವವೇ ನಮಗೆ ಸಾಕು.

" ಜನರ ಮನ್ನಣೆಯನ್ನು ಪಡೆಯುವುದಕ್ಕಾಗಿ ಮಾಡುವ ಸಾಧನೆ ನಟನೆಗೆ ಸಮಾನವಾಗಿಬಿಡುತ್ತದೆ. ರಾಜೇಂದ್ರ ಶ್ರೀಗಳು ಎಂದೂ ಅಂತಹ ಗೌರವ–ಸಂಮಾನ–ಮನ್ನಣೆಗಳನ್ನು ಅಪೇಕ್ಷಿಸಿದವರಲ್ಲ. ಒಮ್ಮೆ ಅವರು ಶಿಷ್ಯರೊಡನೆ ಬೊಂಬಾಯಿಗೆ (ಇಂದಿನ ಮುಂಬಯಿಗೆ) ಹೋಗಿದ್ದಾಗ 'ಗಣೇಶಪುರಿ ಆಶ್ರಮಕ್ಕೆ ಹೋಗಿ ನೋಡಿಕೊಂಡು ಬರೋಣ' ಎಂದು ಹೇಳಿದರಂತೆ. ಶಿಷ್ಯರು ಹೇಳಿದರು "ಅಲ್ಲಿರುವ ಸ್ವಾಮಿಗಳು ವಿಚಿತ್ರ ಸ್ವಭಾವದವರು– ಬಂದವರನ್ನು ಗೌರವದಿಂದ ಮಾತನಾಡಿಸುವುದಿಲ್ಲ. ಅಲ್ಲಿಗೆ ಹೋಗದಿರುವುದೇ ಲೇಸು." ಆಗ ರಾಜೇಂದ್ರ ಶ್ರೀಗಳು "ನಾವು ಹೋಗುತ್ತಿರುವುದು ಆಶ್ರಮವನ್ನು ನೋಡುವುದಕ್ಕೆ, ಸಂಮಾನ ಮಾಡಿಸಿಕೊಳ್ಳುವುದಕ್ಕಲ್ಲ. ಅವಕಾಶ ಆದರೆ ನಾವೇ ಆ ಸ್ವಾಮಿಗಳಿಗೆ ಗೌರವವನ್ನು ಅರ್ಪಿಸೋಣ" ಎಂದು ಹೊರಟೇ ಬಿಟ್ಟರು. ಸುಂದರವಾದ ಗಣೇಶಪುರಿ ಆಶ್ರಮವನ್ನು ನೋಡಿ ಸಂತೋಷ ಪಟ್ಟರು. ಅಷ್ಟು ಹೊತ್ತಿಗೆ ಗಣೇಶಪುರಿ ಆಶ್ರಮದ ಸ್ವಾಮಿಗಳು ತಮ್ಮ ಕೋಣೆಯಿಂದ ಹೊರಗೆ ಬಂದು ನೇರವಾಗಿ ರಾಜೇಂದ್ರ ಶ್ರೀಗಳ ಬಳಿಗೆ ತಾವೇ ಬಂದು ಕೈ ಹಿಡಿದುಕೊಂಡು ಒಳಗೆ ಕರೆದುಕೊಂಡು ಹೋಗಿ ಗೌರವ ಸೂಚಿಸಿದರು.

ನಾನು ಮಹಾರಾಜ ಸಂಸ್ಕೃತ ಮಹಾಪಾಠ ಶಾಲೆಯಲ್ಲಿ ವಿದ್ಯಾರ್ಥಿಯಾಗಿ ಅಧ್ಯಯನ ಮಾಡುತ್ತಿದ್ದಾಗ ನನ್ನ ವಿದ್ಯಾಗುರುಗಳಾಗಿದ್ದ ಪ್ರಾತಃಸ್ಮರಣೀಯ ವಿದ್ವಾನ್ ಜಿ. ವಿಷ್ಣುಮೂರ್ತಿಭಟ್ಟರಿಗೆ ಗೌರವಾರ್ಪಣೆಯ ಸಮಾರಂಭವು ನಡೆದದ್ದು ನೆನಪಿನಲ್ಲಿದೆ. ಆ ಸಮಾರಂಭಕ್ಕೆ ಪೂಜ್ಯ ರಾಜೇಂದ್ರ ಶ್ರೀಗಳು ಆಗಮಿಸಿದ್ದರು. ಅಲ್ಲಿ ನಾನು ಗುರುಗಳ ಬಗೆಗೆ ಸಂಸ್ಕೃತದಲ್ಲಿ ಮಾತನಾಡಿದೆ. ಅದನ್ನು ಶ್ರೀಗಳು ಮೆಚ್ಚಿ ಪ್ರೋತ್ಸಾಹದ ನುಡಿಗಳನ್ನು ಹೇಳಿದರು. ಯಾರು ಒಳ್ಳೆಯ ಕೆಲಸವನ್ನು ಮಾಡಿದರೂ, ಅದು ಎಷ್ಟೇ ಚಿಕ್ಕದಾಗಿರಲಿ, ಅದನ್ನು ಮೆಚ್ಚಿ ಬೆನ್ನು ತಟ್ಟಿ ಪ್ರೋತ್ಸಾಹಿಸುವ ಹೃದಯ ವೈಶಾಲ್ಯ ಅವರದು. ಭಾಸನುಸ್ವಪ್ನವಾಸವದತ್ತ ನಾಟಕದಲ್ಲಿ ಒಂದು ಮಾತನ್ನಾಡಿದ್ದಾನೆ.

ಗುಣಾನಾಂ ವಾ ವಿಶಾಲಾನಾಂ
ಸತ್ಕಾರಾಣಾಂ ಚ ಸರ್ವಶಃ ।
ಕರ್ತಾರಃ ಸುಲಭಾ ಲೋಕೇ
ವಿಜ್ಞಾತಾರಸ್ತು ದುರ್ಲಭಾಃ ॥

(ಒಳ್ಳೆಯ ಗುಣಗಳನ್ನು ಹೊಂದಿರುವವರು, ದೊಡ್ಡ ಸತ್ಕಾರ್ಯಗಳನ್ನು ಮಾಡಿದವರು ಈ ಲೋಕದಲ್ಲಿ ಎಷ್ಟೋ ಜನ ಇದ್ದಾರೆ, ಆದರು ಅದನ್ನು ಗುರುತಿಸಿ ಪ್ರೋತ್ಸಾಹಿಸುವವರು ದುರ್ಲಭ). ಒಳ್ಳೆಯದನ್ನು ಕಂಡಾಗ ಮೆಚ್ಚಿಕೊಳ್ಳುವ ವಿರಳಾತಿವಿರಳರಲ್ಲಿ ಒಬ್ಬರಾಗಿದ್ದರು ಶ್ರೀ ರಾಜೇಂದ್ರ ಸ್ವಾಮಿಗಳು. ವಿದ್ವಾನ್ ಜಿ. ವಿಷ್ಣುಮೂರ್ತಿಭಟ್ಟರು, ವಿದ್ವಾನ್ ಕೆ. ಕೃಷ್ಣಶಾಸ್ತ್ರಿಗಳು ಇತ್ಯಾದಿ ಪಂಡಿತರನ್ನು ಅವರು ಮನಸಾರೆ ಹೊಗಳುತ್ತಿದ್ದರು, ಅವರ ವಿದ್ವತ್ಕಾರ್ಯಗಳಿಗೆ ಪ್ರೋತ್ಸಾಹವನ್ನು ನೀಡುತ್ತಿದ್ದರು. ಅವರು ಆದರ್ಶವೆಂದು ಪರಿಗಣಿಸಿದ್ದ ಶ್ರೀ ಗೌರಿಶಂಕರ ಸ್ವಾಮಿಗಳಂತಹ ವಿದ್ವಾಂಸರು, ಕವಿಗಳು ಮೈಸೂರಿನಲ್ಲಿ ತಯಾರಾಗಬೇಕೆಂಬುದು ಶ್ರೀ ರಾಜೇಂದ್ರ ಶ್ರೀಗಳ ಮನದಾಳದ ಆಶೆಯಾಗಿತ್ತು.

'ಆತ್ಮನೋ ಮೋಕ್ಷಾಯ ಜಗದ್ಧಿತಾಯ ಚ' ಎಂಬುದು ಅಧ್ಯಾತ್ಮ ಜೀವಿಗಳಿಗೆ ಸ್ವಾಮಿ ವಿವೇಕಾನಂದರು ಉಪದೇಶಿಸಿದ ತತ್ತ್ವ. ಆಧ್ಯಾತ್ಮಿಕ ಕ್ಷೇತ್ರದಲ್ಲಿರುವವರು ಆತ್ಮ ಚಿಂತನೆಯಲ್ಲಿ ತೊಡಗಿ ಮೋಕ್ಷವನ್ನು ಸಾಧಿಸಿಕೊಳ್ಳಬೇಕು, ಜಗತ್ತಿನ ಹಿತಕ್ಕಾಗಿಯೂ ದುಡಿಯುತ್ತಿರಬೇಕು ಎಂಬುದು ವಿವೇಕಾನಂದರ ಉಪದೇಶದ ಸಾರ. ಇದರ ಅನುಷ್ಠಾನವನ್ನು ರಾಜೇಂದ್ರ ಶ್ರೀಗಳಲ್ಲಿ ನಾವು ಕಾಣಬಹುದಾಗಿತ್ತು. ಲೋಕ ವ್ಯಾಪಾರದಲ್ಲಿ ಮುಳುಗಿ ಅವರು ತತ್ತ್ವ ಸಾಧನೆಯನ್ನು ಮರೆಯಲಿಲ್ಲ, ತತ್ತ್ವ ಸಾಧನೆಯಲ್ಲೇ ತೊಡಗಿ ಲೋಕದ ಹಿತವನ್ನು ಕಡೆಗಣಿಸಲಿಲ್ಲ ಎರಡನ್ನೂ ಸಾಧಿಸಿದರು. ಈ ಬಗೆಗೆ ಹಿಂದಿನ ಕಾಲದ ಉದಾಹರಣೆಯನ್ನು ನಾವು ನೋಡಬೇಕೆಂದರೆ, ಅದು ವಿದ್ಯಾರಣ್ಯರದು. ಅದ್ವೈತ ತತ್ತ್ವ ಸಾಧನೆಯಿಂದ ಅವರು ಜೀವನ್ಮುಕ್ತರಾದರು, ಲೋಕಹಿತಕ್ಕಾಗಿ ವಿಜಯನಗರ ಸಾಮ್ರಾಜ್ಯವನ್ನೂ ಸ್ಥಾಪಿಸಲು ಮಾರ್ಗದರ್ಶನವನ್ನು ಮಾಡಿದರು. ಅವರ ಮಾತನ್ನೇ ಇಲ್ಲಿ ಉದ್ಧರಿಸಬೇಕು.

'ಜ್ಞಾನಿನಾಚರಿತುಂ ಶಕ್ಯಂ ಸಮ್ಯಗ್ ರಾಜ್ಯಾದಿ ಶಾಸನಮ್.' (ಜ್ಞಾನಿಯು ರಾಜ್ಯವೇ ಮುಂತಾದವುಗಳ ಶಾಸನವನ್ನೂ ನಡೆಸಲು ಶಕ್ತನು) ಆದ್ದರಿಂದ ಇಲ್ಲಿ ಪರಸ್ಪರ ವಿರೋಧವಿಲ್ಲ. ಲೋಕಹಿತವನ್ನು ಸಾಧಿಸುತ್ತಾ ಆತ್ಮದರ್ಶನವನ್ನೂ ಪಡೆಯಬಹುದು. ಅದನ್ನು ಮಾಡಿ ತೋರಿಸಿದರು ಶ್ರೀ ರಾಜೇಂದ್ರ ಸ್ವಾಮಿಗಳು. ನಿಜ ಸಾಧಕರು ಎಲ್ಲರೂ ತಮ್ಮನ್ನು ಗೌರವಿಸಬೇಕು, ತಮಗೆ ಸಂಮಾನ ಮಾಡಬೇಕು ಎಂದು ನಿರೀಕ್ಷಿಸುವುದಿಲ್ಲ. ಜನರ ಮನ್ನಣೆಯನ್ನು ಪಡೆಯುವುದಕ್ಕಾಗಿ ಮಾಡುವ ಸಾಧನೆ ನಟನೆಗೆ ಸಮಾನವಾಗಿಬಿಡುತ್ತದೆ. ರಾಜೇಂದ್ರ ಶ್ರೀಗಳು ಎಂದೂ ಅಂತಹ ಗೌರವ–ಸಂಮಾನ–ಮನ್ನಣೆಗಳನ್ನು ಅಪೇಕ್ಷಿಸಿದವರಲ್ಲ. ಒಮ್ಮೆ ಅವರು ಶಿಷ್ಯರೊಡನೆ ಬೊಂಬಾಯಿಗೆ (ಇಂದಿನ ಮುಂಬಯಿಗೆ) ಹೋಗಿದ್ದಾಗ 'ಗಣೇಶಪುರಿ ಆಶ್ರಮಕ್ಕೆ ಹೋಗಿ ನೋಡಿಕೊಂಡು ಬರೋಣ' ಎಂದು ಹೇಳಿದರಂತೆ. ಶಿಷ್ಯರು ಹೇಳಿದರು "ಅಲ್ಲಿರುವ ಸ್ವಾಮಿಗಳು ವಿಚಿತ್ರ ಸ್ವಭಾವದವರು– ಬಂದವರನ್ನು ಗೌರವದಿಂದ ಮಾತನಾಡಿಸುವುದಿಲ್ಲ. ಅಲ್ಲಿಗೆ ಹೋಗದಿರುವುದೇ ಲೇಸು." ಆಗ ರಾಜೇಂದ್ರ ಶ್ರೀಗಳು "ನಾವು ಹೋಗುತ್ತಿರುವುದು ಆಶ್ರಮವನ್ನು ನೋಡುವುದಕ್ಕೆ, ಸಂಮಾನ ಮಾಡಿಸಿಕೊಳ್ಳುವುದಕ್ಕಲ್ಲ. ಅವಕಾಶಆದರೆ ನಾವೇ ಆ ಸ್ವಾಮಿಗಳಿಗೆ ಗೌರವವನ್ನು ಅರ್ಪಿಸೋಣ" ಎಂದು ಹೊರಟೇಬಿಟ್ಟರು. ಸುಂದರವಾದ ಗಣೇಶಪುರಿ ಆಶ್ರಮವನ್ನು ನೋಡಿ ಸಂತೋಷಪಟ್ಟರು. ಅಷ್ಟು ಹೊತ್ತಿಗೆ ಗಣೇಶಪುರಿ ಆಶ್ರಮದ ಸ್ವಾಮಿಗಳು ತಮ್ಮ ಕೋಣೆಯಿಂದ ಹೊರಗೆ ಬಂದು ನೇರವಾಗಿ ರಾಜೇಂದ್ರ ಶ್ರೀಗಳ ಬಳಿಗೆ ತಾವೇ ಬಂದು ಕೈ ಹಿಡಿದುಕೊಂಡು ಒಳಗೆ ಕರೆದುಕೊಂಡು ಹೋಗಿ ಗೌರವ ಸೂಚಿಸಿದ್ದಲ್ಲದೆ ಅವರನ್ನು ತಮ್ಮ ಪೀಠದಲ್ಲಿ ಕುಳ್ಳಿರಿಸಿ ರೇಷ್ಮೆಯ ವಲ್ಲಿಯನ್ನು ಹೊದಿಸಿದರು. ಆಧ್ಯಾತ್ಮಿಕ ವಿಷಯದಲ್ಲಿ ಮಾತನಾಡಿದರು. ಅನಂತರ ಶ್ರೀಗಳ ಜೊತೆಯಲ್ಲೇ ಆಶ್ರಮದ ಹೆಬ್ಬಾಗಿಲಿನವರೆಗೆ ಬಂದು ಬೀಳ್ಕೊಟ್ಟರು. (ಈ ಘಟನೆಯ ಬಗೆಗೆ ಹೆಚ್ಚು ವಿವರಗಳನ್ನು ಅಪೇಕ್ಷಿಸುವ ವಾಚಕರು ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ಕಾಯಕ ತಪಸ್ವಿ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಎಂಬ ಪುಸ್ತಕದ 144–145ನೇ ಪುಟಗಳನ್ನು ನೋಡಬಹುದು.) ಗೌರವವನ್ನು ನಿರೀಕ್ಷಿಸಬಾರದು, ಅದು ತಾನಾಗಿ ಬರಬೇಕು ಎಂಬ ಪಾಠವನ್ನು ಅವರಿಂದ ಎಲ್ಲರೂ ಕಲಿಯಬೇಕು. ರಾಜೇಂದ್ರ ಶ್ರೀಗಳಿಗೆ ಭಗವಂತನಲ್ಲಿ ಅಚಲವಾದ ವಿಶ್ವಾಸವಿತ್ತು. ಈಶ್ವರನು ಎಲ್ಲ ಮನುಷ್ಯರ ಹೃದಯದಲ್ಲೂ ಇದ್ದಾನೆ. ಅವನು ಆಡಿಸುವ ಗೊಂಬೆಗಳಂತೆ ಎಲ್ಲರೂ ನಡೆದುಕೊಳ್ಳುತ್ತಾರೆ ಎಂಬುದನ್ನು ಅಚಲವಾಗಿ ನಂಬಿದ್ದರು.

ಈಶ್ವರಃ ಸರ್ವಭೂತಾನಾಂ
ಹೃದ್ದೇಶ್ಯೇರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ
ಯಂತ್ರಾರೂಢಾನಿ ಮಾಯೆಯಾ ॥

ಎಂಬ ಭಗವದ್ಗೀತಾ ವಾಕ್ಯಾನುಸಾರವಾಗಿ ಅವರು ಈಶ್ವರ ಪ್ರೇರಣೆಯಿಂದ ಅಸಾಧ್ಯವಾದುದನ್ನೂ ಆರಂಭಿಸಿ ಸಾಧ್ಯವನ್ನಾಗಿ ಮಾಡಿ ತೋರಿಸಿ ಎಲ್ಲವನ್ನೂ ಈಶ್ವರಾರ್ಪಿತವನ್ನಾಗಿ ಮಾಡಿದರು. ಅದರಿಂದಲೇ ಜೆಎಸ್‌ಎಸ್ ಸಂಸ್ಥೆಗಳು ಇಂದು ವಿಶ್ವವ್ಯಾಪಿಯಾಗಿ ಬೆಳೆದಿವೆ.

ನೂರಾರು ಸಂಸ್ಥೆಗಳನ್ನು ನಡೆಸುವ ಭಾರವನ್ನು ಹೆಗಲ ಮೇಲೆ ಹೊತ್ತಿದ್ದರೂ ಅವರು ಯಾವ ವಿಷಯವನ್ನೂ ಮರೆತುಹೋಗುವವರಲ್ಲ. ಶ್ರೀ ಶಿವರಾತ್ರೀಶ್ವರ ಸುಪ್ರಭಾತವನ್ನು ಸಂಸ್ಕೃತದಲ್ಲಿ ಬರೆಸಬೇಕೆಂಬ ಸಂಕಲ್ಪ ಮೂಡಿದಾಗ ಕುಂದೂರು ಮಠದ ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳ ಮೂಲಕ ನನಗೆ ಹೇಳಿ ಕಳುಹಿಸಿದರು. ಎಂದೋ ನನ್ನ ಸಂಸ್ಕೃತ ಭಾಷಣವನ್ನು ಕೇಳಿದ್ದುದರ ನೆನಪು ಶ್ರೀಗಳ ಮನಸ್ಸಿನಲ್ಲಿತ್ತು. 'ನೀವು ಸುಪ್ರಭಾತವನ್ನು ರಚಿಸಿಕೊಡಿ' ಎಂದು ಅಪ್ಪಣೆಯನ್ನಿತ್ತರು. ಕೆಲವು ವಿಷಯಗಳನ್ನು ಅರಿತುಕೊಳ್ಳಲು ನಾನು ಸುತ್ತೂರಿಗೆ ಹೋಗಲು ವ್ಯವಸ್ಥೆ ಮಾಡಿದರು. ಅವರ ಅಪೇಕ್ಷೆಯ ಮೇರೆಗೆ ಭಗವದನುಗ್ರಹದಿಂದ ಅದನ್ನು ರಚಿಸಲು ನನಗೆ ಸಾಧ್ಯವಾಯಿತು. ಭಕ್ತಿಯಿಂದ ಅವರಿಗೆ ಅರ್ಪಿಸಿದೆ. ಈಗ ವಿರಾಜಮಾನರಾಗಿರುವ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಕಾಲದಲ್ಲಿ ಅದು ಧ್ವನಿಮುದ್ರಿಕೆಯಾಗಿ ಹೊರಬಂದಿದೆ.

1986ರ ಆಗಸ್ಟ್ ನಾಲ್ಕರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ವಿದೇಶ ಪ್ರವಾಸವನ್ನು ಮಾಡಿ ಹಿಂದಿರುಗಿದಾಗ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಜರುಗಿದ ದಿವ್ಯ ಭವ್ಯ ಸಮಾರಂಭ ಅವಿಸ್ಮರಣೀಯ. ಹೇಗೋ ಒಳಗೆ ಒಂದು ಸೀಟನ್ನು ಗಿಟ್ಟಿಸಿಕೊಂಡು ನಾನೂ ಕುಳಿತಿದ್ದೆ. ಅಂದು ಅಲ್ಲಿ ಸೇರಿದ್ದ ಜನಸಂದಣಿ ದಸರಾ ಸಂಭ್ರಮವನ್ನು ನೆನಪಿಗೆ ತರುತ್ತಿತ್ತು. ತುಲ್ಯನಿಂದಾಸ್ತುತಿರ್ಮೌನೀ ಎಂದು ಎಲ್ಲವನ್ನೂ ನಿರ್ವಿಕಾರವಾಗಿ ಸ್ವೀಕರಿಸಿದ ಶ್ರೀಗಳ ಮಂದಹಾಸ ಅವರ ಸ್ಥಿತಪ್ರಜ್ಞೆಯನ್ನು ಸಾರುತ್ತಿತ್ತು.

ಜಯಿಸು ವಿಶ್ವದ ಗುರುವೆ ಜಯಿಸು ಶರಣಪ್ರಭುವೆ
ಜಯಿಸು ಶ್ರೀ ರಾಜೇಂದ್ರ ಕಲ್ಪತರುವೆ
ಜಯಿಸು ಸಜ್ಜನಬಂಧು ಜಯಿಸು ಕರುಣಾಸಿಂಧು
ಜಯಿಸು ಶಿವನೊಲುಮೆಯಲಿ ನೀನು ನಿಂದು.

* * * *

ಆದಿಕರ್ನಾಟಕ ಮಹಾಸಂಸ್ಥೆಯಿಂದ ಗರಡಿ ಮನೆಗೆ ಮಟ್ಟಿ ಮೆರವಣಿಗೆ

ಮೈಸೂರು, ಆ.27– ಮೈಸೂರಿನ ಅಶೋಕಪುರಂನ ಆದಿಕರ್ನಾಟಕ ಮಹಾಸಂಸ್ಥೆ ಹಾಗೂ ದೊಡ್ಡಗರಡಿ ಮತ್ತು ಚಿಕ್ಕಗರಡಿ ಸಂಘಗಳ ವತಿಯಿಂದ ಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಸಂವಿಧಾನ ಶಿಲ್ಪಿ ಡಾ॥ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ ಗರಡಿ ಮನೆಗಳಿಗೆ ಹೊಸದಾಗಿ ತೆಗೆದುಕೊಂಡು ಹೋಗುವ ಮಟ್ಟಿ (ಮಣ್ಣು) ಪೂಜೆ ಹಾಗೂ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮಾಜಿ ಮೇಯರ್, ಪೈ.ಪುರುಷೋತ್ತಮ ಮಾತನಾಡಿ, ದ್ರಾವಿಡರ ಮೂಲ ಸಂಸ್ಕೃತಿಯಿಂದ ಬೆಳೆದು ಬಂದ ಈ ಕಲೆ ಗಂಡುಮೆಟ್ಟಿದ ಅಪರೂಪದ ಕಲೆ. ಗರಡಿಗಳಲ್ಲಿ ಪೈಲ್ವಾನರುಗಳೇ ಅತ್ಯಂತ ಪ್ರಮುಖ ಆಕರ್ಷಣೆ. ಗರಡಿ ಮನೆಯಲ್ಲಿ ಅತ್ಯಂತ ಪ್ರಧಾನವಾದ ಭಾಗ ಮಟ್ಟಿ (ಕುಸ್ತಿ ಮಾಡುವ ಸ್ಥಳದ ಮಣ್ಣು). ಇದನ್ನು ಅಖಾಡ ಎಂದು ಕೂಡ ಕರೆಯಲಾಗುತ್ತದೆ.



ಗರಡಿ ಮಾಡುವುದೆಂದರೆ ಅಂಗ ಸಾಧನೆ, ವ್ಯಾಯಾಮ ಮಾತ್ರವಲ್ಲ, ಕುಸ್ತಿ ಮಾಡುವುದು ಎಂಬ ವಿಶೇಷ ಅರ್ಥವೂ ಇದೆ. ಮೈಸೂರಿನ 28 ಗರಡಿಗಳಲ್ಲೂ ಇಂದು ವಿಶೇಷ ಪೂಜೆ ನಡೆಸಿ ಪ್ರಾಚೀನ ಕಲೆಯಾದ ಗರಡಿ ತರಬೇತಿಯನ್ನು ಬೆಳೆಸುತ್ತಿರುವುದು ಅತ್ಯಂತ ಸಂತೋಷದ ವಿಷಯವಾಗಿದೆ ಇಂಥ ಇತಿಹಾಸ ಇರುವ ಕಲೆಯನ್ನು ಇಂದಿನ ಯುವಕರು ಗರಡಿಗಳಲ್ಲಿ ಪ್ರತಿದಿನವೂ ತರಬೇತಿ ಹೊಂದಬೇಕು, ಸಮಾನತೆಯನ್ನು ಸಾರುವ ಈ ಗರಡಿ ಮನೆಯಲ್ಲಿ ಜಾತಿ–ಭೇದ–ಭಾವ ಇರುವುದಿಲ್ಲ. ನಾವೆಲ್ಲರೂ ಒಂದು ಎಂಬ ಭಾವನೆಯನ್ನು ಪ್ರತಿಬಿಂಬಿಸುತ್ತದೆ. ಭಾರತೀಯರಾದ ನಾವು ಗರಡಿ ಉತ್ಸವಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಕಲೆಯನ್ನು ಪ್ರೋತ್ಸಾಹಿಸಬೇಕೆಂದು ಯುವಕರು ಭಾಗವಹಿಸುವುದರಿಂದ ಆರೋಗ್ಯವನ್ನು ಕೂಡ ಸಮತೋಲನದಲ್ಲಿ ಇಟ್ಟುಕೊಳ್ಳಬಹುದೆಂದು ತಿಳಿಸಿದರು.

ನಿವೃತ್ತ ಪ್ರಾಂಶುಪಾಲರು ಹಾಗೂ ಗರಡಿ ಮನೆಯ ಸದಸ್ಯರಾದ ಶಾಂತರಾಜು ಮಾತನಾಡಿ, ವಿಜಯನಗರ ಸಾಮ್ರಾಜ್ಯದಿಂದಲೂ ಈ ಕಲೆಗೆ ವಿಶೇಷ ಗೌರವವಿದೆ ನಾಡಿನ ಮಹಾರಾಜರುಗಳು ಪ್ರೋತ್ಸಾಹವನ್ನು ನೀಡಿ ತಮ್ಮ ಸೈನಿಕರುಗಳಿಗೆ ಕಡ್ಡಾಯವಾಗಿ ಗರಡಿ ಶಿಕ್ಷಣದ ಬಗ್ಗೆ ತರಬೇತಿಯನ್ನು ನೀಡುತ್ತಿದ್ದರು. ಅಷ್ಟೇ ಏಕೆ, ಸ್ವತಃ ರಾಜರೇ ಕುಸ್ತಿ ಕಲೆಗಳಲ್ಲಿ ಪರಿಣಿತರಾಗಿದ್ದರು. ಅದರಲ್ಲಿ ಮುಖ್ಯವಾಗಿ ಕೃಷ್ಣದೇವರಾಯ, ರಣಧೀರ ಕಂಠೀರವ, ನರಸಿಂಹರಾಜ ಒಡೆಯರ್, ಮದಕರಿನಾಯಕ, ಸಂಗೊಳ್ಳಿ ರಾಯಣ್ಣ ಇನ್ನು ಮುಂತಾದವರು ಈ ಕಲೆಯಲ್ಲಿ ಅಸಾಧಾರಣ ಚತುರತೆ, ಪ್ರಾವಿಣ್ಯತೆಯನ್ನು ಹೊಂದಿ, ಗರಡಿ ಕಲೆಯನ್ನು ಬೆಳೆಸಿದ ಉದಾಹರಣೆ ಇತಿಹಾಸದಲ್ಲಿ ಕಾಣಬಹುದೆಂದು ಅಭಿಪ್ರಾಯಿಸಿದರು.

ಆದಿಕರ್ನಾಟಕ ಮಹಾಸಂಸ್ಥೆಯ ಅಧ್ಯಕ್ಷ ಸಿದ್ದರಾಜು.ಪಿ (ಸುನಿಲ್), ಉಪಾಧ್ಯಕ್ಷರಾದ ಶಿವಸ್ವಾಮಿ, ಗರಡಿ ಉಸ್ತಾದ್ ಪೈಲ್ವಾನ್ ಪುಟ್ಟಸ್ವಾಮಿ, ಕಲೀಫ್ ಬಿ.ಸಿದ್ದಯ್ಯ, ಮುಖಂಡರಾದ ವಿ.ರಾಮಸ್ವಾಮಿ, ರಾಜ್‌ಮೊಗ, ಕೃಷ್ಣಮೂರ್ತಿ, ಜೋಗಿ ಮಹೇಶ್, ಚಿನ್ನಗಿರಿ, ಚಿಕ್ಕಗರಡಿ ಅಧ್ಯಕ್ಷ ಪಿ.ಗಂಗಾಧರ್, ದೊಡ್ಡಗರಡಿ ಸಂಘದ ಅಧ್ಯಕ್ಷ ಗೋವಿಂದರಾಜು ಹಾಗೂ ಸಂಘ–ಸಂಸ್ಥೆಗಳ ಸದಸ್ಯರು, ಪದಾಧಿಕಾರಿಗಳು ಉಪಸ್ಥಿತರಿದ್ದರು. ಮಟ್ಟಿ ಮೆರವಣಿಗೆಯೂ ಮೈಸೂರಿನ ವಿದ್ಯಾರಣ್ಯಪುರಂ, ಜೆ.ಪಿ.ನಗರದ ಮುಖ್ಯರಸ್ತೆ ಅಶೋಕಪುರಂನ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಗರಡಿ ಮನೆ ತಲುಪಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೇಟಿಕುಪ್ಪೆ ಹಾಡಿಯಲ್ಲಿ ಕಾನೂನು ಅರಿವು-ನೆರವು



ಹೆಚ್.ಡಿ.ಕೋಟೆ ತಾಲೂಕು ಮೇಟಿಕುಪ್ಪೆ ಹಾಡಿಯ ಸರ್ಕಾರಿ ಬುಡಕಟ್ಟು ಆಶ್ರಮ ಶಾಲೆಯಲ್ಲಿ ನಡೆದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜಿ.ಎಸ್.ಸಂಗ್ರೇಶಿ ಉದ್ಘಾಟಿಸಿದರು.

ಮೈಸೂರು, ಆ.27-ಮೈಸೂರು ಜಿಲ್ಲಾ ವಕೀಲರ ಸಂಘ ಮೈಸೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಮೈಸೂರು ವಿವಿ ಸಮಾಜಸೇವಾ ಕಾರ್ಯ ಅಧ್ಯಯನ ವಿಭಾಗದ ವತಿಯಿಂದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲೂಕು ಮೇಟಿಕುಪ್ಪೆ ಹಾಡಿಯ ಸರ್ಕಾರಿ ಬುಡಕಟ್ಟು ಆಶ್ರಮ ಶಾಲೆಯಲ್ಲಿ ನಡೆದ ಕಾರ್ಯಕ್ರಮವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜಿ.ಎಸ್. ಸಂಗ್ರೇಶಿ ಉದ್ಘಾಟಿಸಿದರು. ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ ಸೇರಿ ಹಲವರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಶೈನಾ ಖಿಮ್ರೋಜ್ ಅವರಿಂದ ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ ಕುರಿತು ಉಪನ್ಯಾಸವನ್ನು ಆಯೋಜಿಸಲಾಗಿತ್ತು. ಇದೇ ವೇಳೆ ಮಾತನಾಡಿದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜಿ.ಎಸ್. ಸಂಗ್ರೇಶಿ ಹಾಡಿ ಜನರ ಮಹತ್ವದ ಬಗ್ಗೆ ವಿವರಿಸಿದರು. ಹಾಡಿ ಜನ ನಮ್ಮ ಸಂಸ್ಕೃತಿಯ ಬಹುಮುಖ್ಯ ಭಾಗವಾಗಿದ್ದು ಅವರಿಗೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಸಿಗುವಂತೆ ನೋಡಿಕೊಳ್ಳಬೇಕು. ಕಾನೂನು ಸದಾ ಅವರ ಹಕ್ಕುಗಳ ರಕ್ಷಣೆಗೆ ಕಟಿಬದ್ಧವಾಗಿರುತ್ತದೆ ಎಂದು ತಿಳಿಸಿದರು. ಇನ್ನು ಹಾಡಿ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

ತಕ್ಷಣ ಬೇಕಾಗಿದ್ದಾರೆ
Apollo ಹಾಸ್ಪಟಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು ವಯೋಮಿತಿ : 45 ವರ್ಷದೊಳಗೆ ಸಂಬಳ: 18800/- ESI & PF ಹಾಗೂ ಊಟ, ತಿಂಡಿ ಸೌಲಭ್ಯವಿರುತ್ತದೆ
9620667819
9620777819

CAR DRIVER
ಕೆಲಸಕ್ಕೆ ಬೇಕಾಗಿದ್ದಾರೆ ಆಕರ್ಷಕ ಸಂಬಳ ಊಟ-ವಸತಿ ವ್ಯವಸ್ಥೆ ಇರುತ್ತದೆ.
7259137119

ಬೇಕಾಗಿದ್ದಾರೆ
ಕಂಪ್ಯೂಟರ್ ಜ್ಞಾನವಿರುವ ಮಹಿಳಾ ಕೆಲಸಗಾರರು ಬೇಕಾಗಿದ್ದಾರೆ. ವಿಚಾರಿಸಿ: ಚೇತನ ಬುಕ್‌ಹೌಸ್ ಲಕ್ಷ್ಮಿ ಟಾಕೀಸ್ ಹಿಂಭಾಗ, ಮೈಸೂರು
9844094100

ಬೇಕಾಗಿದ್ದಾರೆ
ಕಂಪನಿ ಕೆಲಸಕ್ಕೆ ಕಾರ್ಪೆಂಟರ್ ಹಾಗೂ ಎಲೆಕ್ಟ್ರಿಷಿಯನ್ ಬೇಕಾಗಿದ್ದಾರೆ. ESI & PF ನೊಂದಿಗೆ ಉತ್ತಮ ಸಂಬಳ ಕೊಡಲಾಗುವುದು ಸಂಪರ್ಕಿಸಿ: ಹರೀಶ್
9663311557

ಶ್ರೀ ಗೌರಿಶಂಕರ ಟ್ರಾವೆಲ್ಸ್
24-9-2023 (1 ದಿನ): ಈಶಾ ಫೌಂಡೇಷನ್
30-9-2023 (13 ದಿನ): ಹರಿದ್ವಾರ್, ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರ್‌ನಾಥ್, ದೆಹಲಿ.
15-10-2023 (4 ದಿನ): ದೆಹಲಿ, ಆಗ್ರಾ, ಜೈಪುರ.
28-10-23 (7 ದಿನ): ಅಯೋಧ್ಯೆ, ಕಾಶಿ, ಬಾಬಾ ಬೈದ್ಯನಾಥ್.
ವಿಮಾನ / ಎಸಿ ಬಸ್ / ಊಟ / ರೂಂ.
Mob: 9620002114

ಮುಡಾ ಅಪ್ರೂವ್ಡ್ ಸೈಟು ಮಾರಾಟಕ್ಕಿದೆ
ಬ್ರಾಹ್ಮಿನ್ಸ್ ಲೇಔಟ್ 'A' ಬ್ಲಾಕ್ 60 ಅಡಿರಸ್ತೆ, (ಪೂ-ಪ 46 ಅಡಿ, ದ-ಉ 127 ಅಡಿ) 2 ವಿಸ್ತೀರ್ಣ 2900 Sq.ft. ಚದರ ಅಡಿಗೆ 1600/-
8618644886
9880280299

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಉಚಿತ ತರಬೇತಿ
ಮನೆಯಿಂದಲೇ ಬತ್ತಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್ & ಸರ್ವಿಸ್
10 years Guarantee
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

HOUSE FOR LEASE
Newly Built 2BHK Independent House, Fully Furnished with Solar Ground Floor Only @ Lalithadri Nagar, Near Ring Road Behind Indian Oil Petrol Bunk
9964414484

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್ ಮತ್ತು ಶ್ರೀನಗರ ಹಿಂಭಾಗ ಮತ್ತು ಹೊಸ ಮನೆ ಮಾರಾಟಕ್ಕಿದೆ. ಮೈಸೂರು.
Mob: 8050345574

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

ಬೋಳು ತಲೆಯ ಸಮಸ್ಯೆಯೇ?
SMART HAIR FIXING
574, 9th Cross, Aniketana Road, kuvempunagar, Mysuru
MYSURU 9611028523 MANGALORE 9343142258

WANTED
Experienced Sales Boys and Sales Girls for Textile Shop. Attractive salary + ESI, PF + Incentive. Gandhi Circle, Mysore
Mob: 9740309995
Call after 10.30 am

WANTED
ಮೈಸೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಲು ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ.
9845028614

ಕೆಲಸಕ್ಕೆ ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ (ಪುರುಷರು): ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ. ಕೆ.ಆರ್.ಎಸ್. ರಸ್ತೆ, ಚಾಮುಂಡಿಪುರಂ, ಲಲಿತಾದ್ರಿಪುರ, ಉತ್ತನಹಳ್ಳಿ, ಸಿದ್ದಾರ್ಥ ಲೇಔಟ್, ನಂಜನಗೂಡು, ಸಿಂಧುವಳ್ಳಿ, ಬೇಗೂರು ಹತ್ತಿರ
8310098788

ಬೇಕಾಗಿದ್ದಾರೆ
ಮೈಸೂರಿನಲ್ಲಿ ಇರುವ ಸೆಕ್ಯೂರಿಟಿ ಏಜೆನ್ಸಿಯಲ್ಲಿ ಕೆಲಸ ಮಾಡಲು ಕನಿಷ್ಠ 01 ವರ್ಷ ಅನುಭವ ಇರುವ, SSLC/PUC ಯಾವುದೇ ಪದವಿ ಆಗಿರುವ 25 ರಿಂದ 45 ವರ್ಷದೊಳಗಿನ ಸಿಬ್ಬಂದಿಗಳು ಬೇಕಾಗಿದ್ದಾರೆ.
1) ಸೆಕ್ಯೂರಿಟಿ ಗಾರ್ಡ್
2) ಸೆಕ್ಯೂರಿಟಿ ಸೂಪರ್‌ವೈಸರ್
3) ಸೆಕ್ಯೂರಿಟಿ ಫೀಲ್ಡ್ ಆಫೀಸರ್
ಉತ್ತಮ ಸಂಬಳ, ESI & PF ಸೌಲಭ್ಯಗಳು ಸಂಪರ್ಕಿಸಿ:
9739199355
9844235981

ಗ್ರಾಫಿಕ್ ಡಿಸೈನರ್ಸ್ ಬೇಕಾಗಿದ್ದಾರೆ
ಕೋರಲ್ ಡ್ರಾ, ಫೋಟೋಶಾಪ್ ಡಿ.ಟಿ.ಪಿ. ಕಲಿತಿದ್ದು, ಅನುಭವಿಗಳಾಗಿರಬೇಕು. ಆಕರ್ಷಕ ಸಂಬಳ ನೀಡಲಾಗುವುದು ಸಂಪರ್ಕಿಸಿ :
9980049505

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ+ಓಟಿ 15,200/- to 86,000/-
9740733021, 9535028750

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶ ಪಾರಂಪರ್ಯ ಜೋತಿಷ್ಯರು ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ
9663466548

(ಉಚಿತ ಭವಿಷ್ಯ)
ಶ್ರೀ ಮಂಜುನಾಥ ಸ್ವಾಮಿ ಜ್ಯೋತಿಷ್ಯಂ ಪಂಡಿತ್ ವಿಷ್ಣುಕಾಂತ್ ಜೋಶಿ
8549998630
ನಿಮ್ಮ ಧ್ವನಿಯ ಮೂಲಕ ನಿಮ್ಮ ಸಮಸ್ಯೆಗಳಾದ ಸಾಲದ ಬಾಧೆ, ದಂಪತ್ಯ ಸಮಸ್ಯೆ, ಕೋರ್ಟ್ ಕೇಸ್ ಸಮಸ್ಯೆ, ಪ್ರೀತಿಯಲ್ಲಿ ನಂಬಿ ಮೋಸ ಇನ್ನು ಅನೇಕ ಸಮಸ್ಯೆಗಳಿಗೆ ಕೇವಲ 2 ದಿನಗಳಲ್ಲಿ ಪರಿಹಾರ ತಿಳಿಸುತ್ತಾರೆ. ಫೋನಿನ ಮುಖಾಂತರ ಅಥವಾ ನೇರವಾಗಿ ಚಾಮರಾಜನಗರಕ್ಕೆ ಬಂದು ಭೇಟಿ ಮಾಡಿ.

ಸೈಟುಗಳನ್ನು ಕೊಳ್ಳಲು/ಮಾರಲು
and 2BHK, 20x30 ಹೊಸ ಮನೆ ಶಾಂತವೇರಿ ಗೋಪಾಲಗೌಡ ಲೇಔಟ್‌ನಲ್ಲಿ ಮಾರಾಟಕ್ಕಿದೆ
9538412881

For Sale
FUTURE COMMERCIAL SITES
60 Ft Road Near Defence Apartment attch Brahmins layout E Block attch HD Kote Road , 20x30 House Ramakrishna Nagar Kuvempu Nagar 40x60 Commercial Hootagalli
95386 90359
90359 90359

ಶಾದಿ ಗುರೂಜಿ.ಕಾಂ
ವಧುವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆಮಾಡಿ
6361740552

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM ® 10yrs WARRANTY
ISO 9001:2015 Certified Depot
CALL 9731291267
9901291267

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

100% TEAK WOOD FACTORY FINISH DOORS
@ DEPOT RATES
10 YEARS WARRANTY
www.ssbuildmart.com
9731291267
9901291267

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಎಲ್ಲಾ ಜಾತಿಯ ವಧು-ವರರ ಮಾಹಿತಿ ಕೇಂದ್ರ
SSLC, PUC, Degree Master Degree, Eng., Doctore ಎಲ್ಲಾ ವಿವಾಹ ನೊಂದಣಿಗೆ ಕರೆ ಮಾಡಿ (II Marriage Also)
9164743059

ಬೇಕಾಗಿದ್ದಾರೆ
ಮನೆಗೆ ಅಡುಗೆ ಮಾಡಲು ಹೆಂಗಸರು (ನಾರ್ತ್ & ಸೌತ್ ಇಂಡಿಯನ್) ವಯಸ್ಸು: 45 ವರ್ಷ ಒಳಗೆ ಸಮಯ: ಸಂಜೆ 4.30 ರಿಂದ 6.30 ರವರೆಗೆ, ಸಂಬಳ: 6000/- ವಿಳಾಸ: ಚಾಮರಾಜಪುರಂ
8618025721

WANTED
Office incharge: Accounts with Tally or Computer basic. Salary Rs. 12,000 & above. ITI, Fitter, Electrician for helper for fitting of curtain rods & pipe. Salary: Rs. 12,000 & above.
Mob: 9900377786

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿಚ್ಚಾತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾದೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:- ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

AFFIDAVIT
I, Smt. Bibi Hajira, W/o Abdul Waheed, aged about 47 years, residing at No. 53/2, 1st Floor, 2nd Cross, Mahadevapura Extension, Udayagiri, Mysuru. In my passport, my name is wrongly entered as Smt. Bibi Hajira Abdul Waheed. Bibi Hajira is the correct name belongs to me only and I request to renew my name in the passport as Smt. Bibi Hajira. I swear on oath before Notary Akbar Shariff, Mysore, on 14-8-2023.
Sd/- Bibi Hajira

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

HOUSE FOR SALE
30x50 ft N/F, House No.31, GF Kergalli, Jayapura Hobali, Mysuru MUDA APPROVED
9902485343
8105709918

RENT/SALE
Bhk Flat @Yagadagiri
Commercial Building 33x59 N/F Mysore-Hunsuru Highway 6 Line Road, Baying / Selling
9844511289
9353533188

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
87490 98879

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409
ಮೈಸೂರು ಅಗ್ರಹಾರ.
9449774835
ಚಾಮರಾಜನಗರ

ಮನೆಯನ್ನು ಕಟ್ಟಿಕೊಡಲಾಗುವುದು
ಒಂದು ಚದುರಕ್ಕೆ ರೂ.1,70,000/- ನಂತೆ ಎಲ್ಲಾ ನಗರ (ಸಿಟಿ) ಹಾಗೂ ಎಲ್ಲಾ ಹಳ್ಳಿಗಳಲ್ಲಿ ಕಟ್ಟಿಕೊಡಲಾಗುವುದು
9620377533

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ ITI, 8th to 2nd PUC ವರೆಗೆ. ಊಟ ವಸತಿ ESI & PF, ಮಹಿಳೆಯರಿಗೆ ವಾಹನ ಸೌಲಭ್ಯವಿರುತ್ತದೆ. ಸಂಬಳ 11400 to 18000 ಇರುತ್ತದೆ.
8951869646
9902645646

ಸಂಪರ್ಕಿಸಿ
1. ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡುಗಳು
ಸ್ಥಳಗಳು: 1) ಗಂಗೋತ್ರಿ ಬಡಾವಣೆ
2) ಆರ್. ಗೇಟ್
3) ಗುಂಡ್ಲುಪೇಟೆ
ಊಟ ವಸತಿ, ಊಟದ ವ್ಯವಸ್ಥೆಯಿದೆ.
9686422400
9242406261

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿಗಾರ್ಡ್ ಹಾಗೂ ಸೂಪರ್‌ವೈಸರ್‌ಗಳು
Salary : 10,000 to 13,000
Location: ಬೋಗಾದಿ ಹಾಗೂ ಮೈಸೂರಿನ ಸುತ್ತಾಮುತ್ತಾ
8792089512
9945291877

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

100% ವಾಟರ್ ಪ್ರೂಫಿಂಗ್ ವರ್ಕ್ & ಸೆಲ್ಯೂಷನ್
ನಿಮ್ಮ ಬಿಲ್ಡಿಂಗ್ & ಗೋಡೆಗಳು ಬಿರುಕು ಬಿಟ್ಟಿವೆಯೇ? ಬಾತ್‌ರೂಮ್, ಟ್ಯಾಂಕ್ & ಟಾಯ್ಲೆಟ್‌ಗಳಿಂದಾಗಿ ವಸ್ತಿ ಬರುತ್ತಿದೆಯೇ? ಶಾಶ್ವತ ಪರಿಹಾರಕ್ಕಾಗಿ ಸಂಪರ್ಕಿಸಿ
9739333346

ಈ ತಕ್ಷಣವೇ ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು, ಸ್ವೀಪರ್‌ಗಳು ಹಾಗೂ ಆನ್‌ಲೈನ್ ಮಾರ್ಕೆಟಿಂಗ್‌ಗೆ ಇಂಗ್ಲಿಷ್ ಮಾತನಾಡಲು ಬಲ್ಲ ಮಹಿಳೆಯರು ತಕ್ಷಣವೇ ಬೇಕಾಗಿದ್ದಾರೆ.
7795285485,8105249880

HOUSE FOR RENT
5 BHK House available for Rent. Suitable for office cum Residence/ Company guest House. (Brokers Excuse)
9611231251
9686327815

ಬೇಕಾಗಿದ್ದಾರೆ
PUC ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ತರಬೇತಿಗಾಗಿ ಬೇಕಾಗಿದ್ದಾರೆ. ತರಬೇತಿ ಅವಧಿಯಲ್ಲಿ ಮಾಹೆ 12,000/- ನೀಡಲಾಗುವುದು. ಸಂಸ್ಥೆಯಲ್ಲಿ ವಾಸಿಸಲು ಸಿದ್ಧರಿರಬೇಕು. ಡ್ರೈವಿಂಗ್ ಲೈಸೆನ್ಸ್ ಇರುವವರಿಗೆ ಆದ್ಯತೆ. ಉಚಿತ ವಸತಿ + ಸಸ್ಯಾಹಾರಿ ಊಟ
ದಿವ್ಯ ದೀಪ ಚಾರಿಟಬಲ್ ಟ್ರಸ್ಟ್
ಮಾನಂದವಾಡಿ ರಸ್ತೆ, ಮೈಸೂರು-08
9341369901, 9538499901, 8088586087
www.divyadeepatrust.org

HOUSE FOR SALE
30X40 East Facing 3 BHK, Ground Floor Vijayanagar 2nd Stage, Mysore
SHOP FOR SALE
Shop No.25, MUDA Complex, New Kalidasa Road, Mysore
93436667777

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಬೇಕಾಗಿದ್ದಾರೆ. ಮಹಿಳೆಯರು ಮತ್ತು ಹುಡುಗಿಯರು ಸ್ಥಳ: ಕುವೆಂಪುನಗರ ಡಿಪೋ, ಮೈಸೂರು
8861732326
8277512141

HOUSE FOR SALE
2+1 Room 33x40 North Facing Near Sangam Circle 2nd Stage, Vijayanagar
9919917519

ಮನೆ ಭೋಗ್ಯಕ್ಕೆ ಇವೆ
ಮೈಸೂರಿನ ಶಾರದದೇವಿನಗರದಲ್ಲಿ 2 ಬೆಡ್ ರೂಮಿನ ಮನೆ ಲಲಿತಾದ್ರಿಪುರದಲ್ಲಿ 2 ಬೆಡ್ ರೂಮಿನ ಮನೆ ದಟ್ಟಗಳ್ಳಿಯಲ್ಲಿ 1 ಬೆಡ್ ರೂಮಿನ ಮನೆ, ಖಾಲಿ ಇವೆ ಆಸಕ್ತರು ಸಂಪರ್ಕಿಸಿ: ಸುರೇಶ್
9206470833

URGENT REQUIREMENT
HYBRID ECO SOLAR
- Marketing Executives (Males)
- Accountant (Female)
- Solar Technicians
Good Salary with Incentive more than 15 K Statutory benefits
9606083801
9606083802

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ನೈಟ್ ಶಿಫ್ಟ್ ಕೆಲಸ ಮಾಡಲು ಹುಡುಗರು/ಪುರುಷರು ಬೇಕಾಗಿದ್ದಾರೆ. ಸಂಬಳ: 12,000/-
7899754149

ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ, ವಿದ್ಯಾರಣ್ಯಪುರಂನಲ್ಲಿ ವಾಸಿಸುತ್ತಿರುವ ಆರ್ಯ ವೈಶ್ಯ ಮತ್ತು ಬ್ರಾಹ್ಮಣ ಸಮಾಜದವರಿಗೆ ಮಾತ್ರ ಅವಕಾಶ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
9900520298
8197393199

JOB'S FOR YOU
Impulse Expansion
Age (18-24), Only Fresher's 10th, PUC, BBM, ITI & Diploma ಯಾದ Earn (10500/- ರಿಂದ 16500/-) PM * NO FEE* ತಮ್ಮ ವಿವರಗಳೊಂದಿಗೆ ನೇರಸಂಪರ್ಕಿಸಿ 11AM to 3PM
ಕಾವ್ಯ 9342827788

ಬೇಕಾಗಿದ್ದಾರೆ
ಮೈಸೂರಿನ ಜೆಕೆ ಟೈರ್ಸ್, ಕೆ.ಆರ್.ಎಸ್ ರಸ್ತೆ, ಇಲ್ಲಿಗೆ ಸಮೀಪವಿರುವ ಕೆಮಿಕಲ್ ಕಾರ್ಖಾನೆಗೆ ಓದುಬರಹ ಇರುವ ಅಥವಾ ಓದಿಲ್ಲದಿರುವ 40 ವರ್ಷ ಒಳಗಿರುವ, 8 ಗಂಟೆಯ (ಪಾಳಿ) Shift ನ ಕೆಲಸ ವಾರದ ರಜಾ (ESI ಮತ್ತು PF) ಇದ್ದು ಹೆಲ್ಪರ್ (Helper ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವೇತನ ಮಾಸಿಕ 11,750 ರೂ.ಗಳು
9731976148

ಯಾವುದೇ ಜಾತಿಯ ವಧು ಬೇಕಾಗಿದೆ
ದೇವಾಂಗ ಜಾತಿಯ ಸುಂದರ ಹುಡುಗನಿಗೆ ಯಾವುದೇ ಜಾತಿಯಾದರೂ, ಶಿಕ್ಷಣವಿಲ್ಲದಿದ್ದರೂ ವಿಧವೆಯಾದರೂ, ಅನಾಥ ಹುಡುಗಿಯರು ಒಳ್ಳೆಯ ಮನೆತನ, ಸೌಮ್ಯ ನಡತೆಯುಳ್ಳ ಹುಡುಗಿ ಇದ್ದರೆ ದಯವಿಟ್ಟು ಸಂಪರ್ಕಿಸಿ
7026416466

ವಧು ಬೇಕಾಗಿದೆ
ಮೈಸೂರಿನಲ್ಲಿ ಸ್ವಂತ ವ್ಯಾಪಾರ ಮಾಡಿಕೊಂಡಿರುವ 43 ವರ್ಷದ ವರನಿಗೆ ವಧು ಬೇಕಾಗಿದೆ. ವಿಧವೆ ಅಥವಾ ವಿಚ್ಛೇದಿತೆಯಾದರು ಪರವಾಗಿಲ್ಲ. ಹಾಗೂ ಯಾವುದೇ ಜಾತಿಯ ಅಭ್ಯಂತರವಿಲ್ಲ.
6364825038

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ Showroom, Office, Companys ಗಳಿಗೆ 7th, SSLC, PUC, ITI, Diploma, Any Degree Pass/Fail ಆದವರಿಗೆ Helper, Packing, Production Line, Maintenance Store Dept., Billing, Receptionist, Cashier ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 15,000 ರಿಂದ 38,000/- (ESI+PF+OT).
9739857142
9035143190

ತಕ್ಷಣ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ ಕಂಪನಿಗಳಿಗೆ ಆಫೀಸ್‌ಗಳಿಗೆ ಮತ್ತು ಶೋರೂಂಗಳಿಗೆ ಕೆಲಸ ಮಾಡಲು 10th, PUC, ITI, Diploma, B.Com, BBA, MSC, MCA, (Any Degree) Pass /Fail ಆದ ಯುವ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ Quality, Helper, Manufacturing, CNC & VMC, Machine Operator & Frontoffice, Typing Data Entry, Sales Manager, Cashier, Telephone attender ಇತ್ಯಾದಿ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,500 ರಿಂದ 39,000/- (ESI+PF+OT)
6364103418,9036548905

ತಕ್ಷಣ ಸಂಪರ್ಕಿಸಿ
1. ಸೆಕ್ಯೂರಿಟಿ ಗಾರ್ಡ್
2. ಸೆಕ್ಯೂರಿಟಿ ಸೂಪರ್‌ವೈಸರ್
3. ಸೆಕ್ಯೂರಿಟಿ ಲೇಡಿ ಗಾರ್ಡ್
4. ಡ್ರೈವರ್ ಸೆಕ್ಯೂರಿಟಿ ಗಾರ್ಡ್
5. ಸೆಕ್ಯೂರಿಟಿ ಎಕ್ಸ್ ಸರ್ವಿಸ್ ಮೆನ್
6. ಅಕೌಂಟೆಂಟ್ (ಟ್ಯಾಲಿ ಗೊತ್ತಿರಬೇಕು)
7204930058
9606970941,9606970943

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 40 ವರ್ಷ ವಿದ್ಯಾರ್ಹತೆ : 7 ರಿಂದ PUC ಮತ್ತು ITI (Fitter)
9480404036

ಬೇಕಾಗಿದ್ದಾರೆ
ಮಾರ್ಕೆಟಿಂಗ್ ಎಕ್ಸಿಕ್ಯೂಟೀವ್ ಮೈಸೂರು ಮತ್ತು ಇತರ ಜಿಲ್ಲೆಗಳ ಪರಿಚಯವಿರಬೇಕು. ಮತ್ತು ಕಾರ್ಖಾನೆಗೆ ಲೇಬರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
9740788263
7829665715

ಶಾದಿಗುರೂಜಿ.ಕಾಂ
ಒಕ್ಕಲಿಗ ಸುಂದರ ಶ್ರೀಮಂತ ಕೋಟ್ಯಾಧೀಶ್ವರಿ ಒಬ್ಬಳೇ ವಿಧವೆಗೆ ಸುಂದರ ಶ್ರೀಮಂತ ಕೋಟ್ಯಾಧೀಶ್ವರ ವರ ವಿಧುರ ವಿಚ್ಛೇದಿತರು, ಲೈಫ್ ಪಾರ್ಟ್‌ನರ್ ಬೇಕು. ಜಾತಿ ಅಭ್ಯಂತರ ಇಲ್ಲ ನೇರ ಸಂಪರ್ಕಿಸಿ:
6361740552

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. ಸಂಬಳ: 12000 ದಿಂದ 18000 (ESI, PF ಸೌಲಭ್ಯ ಇರುತ್ತದೆ)
8050699742,7760043596

ಕೆಲಸಕ್ಕೆ ಬೇಕಾಗಿದ್ದಾರೆ
ದೇವರಾಜು ಅರಸು ರಸ್ತೆಯಲ್ಲಿರುವ ಗ್ರಾಹಿಗೆ ಪನ್ಸಾರಿ ಅಂಗಡಿ ಮೈಸೂರು, ಈ ಅಂಗಡಿಯಲ್ಲಿ ಕೆಲಸ ಮಾಡಲು ಮೈಸೂರಿನಲ್ಲೆ ವಾಸಿಸುವ ಮದುವೆ ಆದ ಹುಡುಗರು ಕಂಪ್ಯೂಟರ್ ಮತ್ತು ಅಂಗಡಿ ಕೆಲಸ ಮಾಡುವ ಅನುಭವ ಇರುವವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಇರುವುದು ಮತ್ತು ಸಂದರ್ಶನಕ್ಕೆ ಖುದ್ದಾಗಿ ಅಂಗಡಿಗೆ ಬರಬೇಕಾಗಿದೆ. "ಶ್ರೀರಾಘವೇಂದ್ರ"
9482653953

SHOP FOR RENT
8X12 ft Shop with Attached Godown 15x15 ft # 191, Ramvilas Road, Mysore-570024
9739895457
9008018684

HOUSE FOR LEASE
Vijayanagar 4th Stage, 2nd Phase, Double Road, Basavana Pura, Location: Manya Clinic Opposite Road Near
9480792529

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ ಸೋಮವಾರ 28 ಆಗಸ್ಟ್ 2023

ವರದ ಯೋಗನರಸಿಂಹಸ್ವಾಮಿಗೆ ಶ್ರಾವಣ ಮಾಸದ ಪೂಜೆ



ಕಿಕ್ಕೇರಿ, ಆ.27– ಪಟ್ಟಣದ ವರದ ಯೋಗ ನರಸಿಂಹಸ್ವಾಮಿ ದೇವರಿಗೆ ಶ್ರಾವಣ ಮಾಸದ ವಿಶೇಷ ಪೂಜೆ, ಅಲಂಕಾರ ವಿಜೃಂಭಣೆಯಿಂದ ಜರುಗಿತು.

ಅರ್ಚಕ ನರಸಿಂಹಮೂರ್ತಿ ಮಾತ ನಾಡಿ, ಈ ಬಾರಿ ಅಧಿಕ ಶ್ರಾವಣ ಮಾಸ ಬಂದಿರುವುದು ವಿಶೇಷವಾಗಿದೆ. ವಿಷ್ಣುವಿಗೆ ಬಲುಪ್ರಿಯವಾದ ಮಾಸದಲ್ಲಿ ದೇವರ ಆರಾಧನೆ ಬಲುಶ್ರೇಷ್ಠವಾಗಿದೆ. ವರದಪ್ಪನ ಗುಡಿ ಎಂಬ ಪ್ರತೀತಿ ಇದ್ದು, ಪ್ರಸಿದ್ಧಿ ಹೊಂದಿರುವ ದೇಗುಲಕ್ಕೆ ಭಕ್ತರು ಆಗಮಿಸಿ ಶ್ರದ್ಧೆಯಿಂದ ಪೂಜಿಸಿದರೆ ಕೇಳಿದ ವರವನ್ನು ನೀಡುವ ದೇವರು ಇದಾಗಿದೆ. ಇಷ್ಟಾರ್ಥವನ್ನು ವರವಾಗಿ ಈಡೇರಿಸುವ ಶಕ್ತಿ ದೇವರಿಗೆ ವರದ ಯೋಗನರಸಿಂಹ ಕೂಡ ಎಂದು ಕರೆಯಲಾಗುತ್ತದೆ.

ದೇಗುಲ ಮರುನಿರ್ಮಾಣಕ್ಕಾಗಿ ದಾನಿ ಗಳು, ಭಕ್ತರಿಂದ ದೇಣಿಗೆ ಸಂಗ್ರಹಿಸಿ, ಭಿನ್ನ ವಾಗಿದ್ದ ವರದ ಯೋಗನರಸಿಂಹಸ್ವಾಮಿ ದೇಗುಲ, ಮೂರ್ತಿ ನಿರ್ಮಿಸಲಾಗಿದೆ. ಭಿನ್ನ ವಾದ ಮೂಲ ಮೂರ್ತಿಯನ್ನು ಮರು ಜೋಡಣೆ ಮಾಡಿ ನೈಜ ರೂಪ ತರಲಾಗಿದೆ. ಈ ಮೂಲಮೂರ್ತಿಗೆ ಆರತಿ ಬೆಳಗುವ ಮೂಲಕ ನೂತನ ವಿಗ್ರಹದ ಮೂರ್ತಿಗೆ ಜೀವಕಳೆ ತುಂಬುವುದು ದೇಗುಲದ ವಿಶೇಷವಾಗಿದೆ. ನಂಬಿ ಬಂದ ಭಕ್ತರಿಗೆ ಎಂದೂ ಕೈಬಿಡದ ದೇವರು ವರದ ಯೋಗನರಸಿಂಹಸ್ವಾಮಿ ಎಂದರು.

ಶ್ರಾವಣ ಮಾಸ, ವೈಕುಂಠ ಏಕಾದಶಿ ಯಂತಹ ವಿಶೇಷ ದಿನಗಳಲ್ಲಿ ದೇವರ ಆರಾಧಿಸಿದರೆ ಖಚಿತವಾಗಿ ಯಶಸ್ಸು ಸಿಗಲಿದೆ ಎಂದು ನಂಬಿ ದೂರದ ಊರಿನಿಂದ ಭಕ್ತರು ಅಧಿಕ ಸಂಖ್ಯೆಯಲ್ಲಿ ಬರುವುದುಂಟು ಎಂದು ದೇಗುಲದ ಮಹಿಮೆ ಕುರಿತು ಹೇಳಿದರು.

ಭಕ್ತರು ಅಧಿಕ ಸಂಖ್ಯೆಯಲ್ಲಿ ಶ್ರಾವಣ ಮಾಸದ ಅಂಗವಾಗಿ ಆಗಮಿಸಿದ್ದರು. ಭಕ್ತರಿಗೆ ಪುಳಿಯೋಗರೆ, ಮೊಸರನ್ನ, ರಸಾಯನ, ತೀರ್ಥಪ್ರಸಾದ ವಿನಿಯೋಗ ಮಾಡಲಾಯಿತು.

ರಾಜ್ಯದಲ್ಲಿ ಗೃಹಲಕ್ಷ್ಮಿ ಯೋಜನೆ ಯಶಸ್ವಿಗೆ

ಅಂಗನವಾಡಿ ಕಾರ್ಯಕರ್ತರ ಸಹಕಾರ ಅಗತ್ಯ

ಪೂರ್ವಭಾವಿ ಸಭೆಯಲ್ಲಿ ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ಚರ್ಚೆ



ಕೆ.ಆರ್.ಪೇಟೆ, ಆ.27– ರಾಜ್ಯ ಸರ್ಕಾರದ 5 ಗ್ಯಾರಂಟಿಗಳಲ್ಲಿ ಗೃಹಲಕ್ಷ್ಮಿ ಯೋಜನೆಯು ಮಹಿಳೆಯರ ಸ್ವಾವಲಂಬನೆಗೆ ಸಹಕಾರಿಯಾಗುವ ಯೋಜನೆಯಾಗಿದೆ. ಈ ಯೋಜನೆಗೆ ರಾಜ್ಯದಲ್ಲಿ ಒಂದು ಕೋಟಿ 10 ಲಕ್ಷಕ್ಕೂ ಹೆಚ್ಚಿನ ಮಹಿಳೆಯರು ನೋಂದಣಿ ಮಾಡಿಸಿಕೊಂಡಿದ್ದಾರೆ. ಆ.30 ರಂದು ಈ ಯೋಜನೆಯನ್ನು ಮೈಸೂರಿನಲ್ಲಿ ಅಧಿಕೃತ ವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಉದ್ಘಾಟಿ ಸಲಾಗುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಗೃಹಲಕ್ಷ್ಮಿ ಕಾರ್ಯಕ್ರಮ ಪ್ರತಿಯೊಂದು ಕುಟುಂಬಕ್ಕೆ ತಲುಪುವಂತೆ ಮಾಡಲು ಅಂಗನವಾಡಿ ಕಾರ್ಯ ಕರ್ತೆಯರ ಜವಾಬ್ದಾರಿ ಹೆಚ್ಚಿನದಾಗಿರುತ್ತದೆ. ಇದನ್ನು ಅರಿತು ಇಲಾಖೆಯ ಸಿಬ್ಬಂದಿ ವರ್ಗದವರು ಕ್ರಿಯಾ ಶೀಲವಾಗಿ ಕೆಲಸ ಮಾಡಬೇಕೆಂದು ಪಟ್ಟಣದ ಜಯಮ್ಮ–ಶಿವಲಿಂಗೇಗೌಡ ಸಮುದಾಯ ಭವನ ದಲ್ಲಿ ತಾಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಹಮ್ಮಿಕೊಂಡಿದ್ದ ಗೃಹಲಕ್ಷ್ಮೀ ಯೋಜನೆಯ ಜನಜಾಗೃತಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಬೆಲೆ ಏರಿಕೆ ಎಂದು ಬೊಬ್ಬೆ ಹೊಡೆಯುವವರಿಗೆ ನಮ್ಮ ಸರ್ಕಾರದ ಯೋಜನೆ ಕಂಗೆಡಿಸಿದೆ. ಕೊರೊನಾ ನಂತರ ಜೀವನ ದುಸ್ತರವಾಗಿದ್ದು, ಇದಕ್ಕೆ ಸರ್ಕಾರ ಶಕ್ತಿ, ಅನ್ನಭಾಗ್ಯ ಯೋಜನೆ, ಗೃಹಜ್ಯೋತಿ, ಗೃಹಲಕ್ಷ್ಮಿ ಯೋಜನೆಯನ್ನು ಜಾರಿಗೆ ತಂದು ಮಹಿಳಾ ಅಭ್ಯುದಯಕ್ಕೆ ಶ್ರಮಿಸುತ್ತಿರುವುದಾಗಿ ಸಚಿವೆ ಅವರು ತಿಳಿಸಿದರು.

ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ರಾಜಮೂರ್ತಿ ಅವರು ಕಾರ್ಯಕ್ರಮ ಕುರಿತು ಪ್ರಾಸ್ತಾವಿಕ ನುಡಿಗಳ ನ್ನಾಡಿದರು. ಶಾಸಕ ಎಚ್.ಟಿ.ಮಂಜು, ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪಾಂಡವಪುರ ಉಪವಿಭಾಗಾ ಧಿಕಾರಿ ನಂದೀಶ್, ತಹಸೀಲ್ದಾರ್ ನಿಸರ್ಗಪ್ರಿಯ, ತಾಲೂಕು ಪಂಚಾಯಿತಿ ಇಓ ಸತೀಶ್, ಸಿಡಿಪಿಓ ಅರುಣ್ ಕುಮಾರ್, ಕೆಯುಐಡಿಎಫ್ ಸಿ ನಿಗಮದ ಮಾಜಿ ರಾಜ್ಯಾಧ್ಯಕ್ಷ ಎಂ.ಡಿ.ಕೃಷ್ಣಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾ ಕಾಂಗ್ರೆಸ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಂಜನಾ ಶ್ರೀಕಾಂತ್, ಜಿಲ್ಲಾ ಕಾಂಗ್ರೆಸ್ ಜೋಡೋ ಕಾರ್ಯಕ್ರಮ ಸಂಚಾಲಕ ವಿಜಯ್ ರಾಮೇಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹರಳಹಳ್ಳಿ ವಿಶ್ವನಾಥ್, ಕೆ.ಎಸ್.ಬಸವೇಗೌಡ, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್, ಕಿಕ್ಕೇರಿ ಸುರೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಮಹೇಂದ್ರ ಹತಿ.ಶ್ರೀನಿವಾಸ್, ತಾಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕೆ.ಬಿ.ಪ್ರತಿಮಾ, ಲೋಲಾಕ್ಷಿ, ಬಿ.ಸಿ.ಮೀನಾಕ್ಷಿ, ವಿನೂತ, ಯುವ ಕಾಂಗ್ರೆಸ್ ಮುಖಂಡರಾದ ಬೀರುವಳ್ಳಿ ಆಕಾಶ್, ಎ.ಬಿ. ಕುಮಾರ್, ಚೇತನಾ ಮಹೇಶ್ ಸೇರಿದಂತೆ ನೂರಾರು ಮುಖಂಡರು ಸಾವಿರಾರು ಕಾರ್ಯಕರ್ತರು ಫಲಾನುಭವಿಗಳು ಉಪಸ್ಥಿತರಿದ್ದರು.

ಪಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆಗೆ ಡಿಸಿ ಭೇಟಿ, ಪರಿಶೀಲನೆ

ಮಂಡ್ಯ, ಆ.27– ಜಿಲ್ಲಾಧಿಕಾರಿ ಡಾ. ಕುಮಾರ ಅವರು ಪಾಂಡವಪುರ ಪಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆಗೆ ಭೇಟಿ ನೀಡಿ, ಆಡಳಿತ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕಬ್ಬು ಅರೆಯುವ ಘಟಕದಿಂದ ಸಕ್ಕರೆ ಉತ್ಪಾದನಾ ಘಟಕದವರೆಗೂ ನಡೆಯುವ ಪ್ರಕ್ರಿಯೆ ಬಗ್ಗೆ ಪರಿಶೀಲನೆ ನಡೆಸಿ ಸಿಬ್ಬಂದಿಗಳ ಕುಂದು ಕೊರತೆಗಳನ್ನು ಆಲಿಸಿದರು.

ಆದಿಚುಂಚನಗಿರಿ ಮಠದಲ್ಲಿ ಸೌಹಾರ್ದತೆ ಬಗ್ಗೆ ಶ್ರೀಗಳೊಂದಿಗೆ ಮುಸ್ಲಿಂ ಮುಖಂಡರ ಚರ್ಚೆ



ನಾಗಮಂಗಲ, ಆ.27– ತಾಲೂಕಿನ ಪ್ರಸಿದ್ಧ ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠದಲ್ಲಿ ಮುಸ್ಲಿಂ ಬಾಂಧವರು ಚುಂಚ ಶ್ರೀಗಳ ಜೊತೆ ಸೌಹಾರ್ದಯುತ ಸಮನ್ವಯತೆಯ ಬಗ್ಗೆ ಭಾನುವಾರ ಚರ್ಚೆ ನಡೆಸಿದರು.

ಕರ್ನಾಟಕ ಹಿಂದೂ–ಮುಸ್ಲಿಂ ಬಾಂಧವ್ಯ ವೇದಿಕೆ ಆಶ್ರಯದಲ್ಲಿ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡಿದ ಮುಸ್ಲಿಂ ಸಮು ದಾಯದ ಸಾಹಿತಿ, ಚಿಂತಕರು ಮತ್ತು ವಿವಿಧ ಕ್ಷೇತ್ರದ ಸಾಧಕರು ಶ್ರೀಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಭೇಟಿಯಾಗಿ ಸಮ ನ್ವಯತೆಯ ಬಗ್ಗೆ ಮಾತುಕತೆ ನಡೆಸಿದರು.

ಕರ್ನಾಟಕದಲ್ಲಿ ವಿವಿಧ ಸಮುದಾಯ ಗಳ ನಡುವೆ ಸೌಹಾರ್ದಯುತ ವಾತಾ ವರಣ ನಿರ್ಮಿಸುವ ಉದ್ದೇಶದಿಂದ ರಾಜ್ಯದ ಹಲವಾರು ಮಠಮಾನ್ಯಗಳ ಸ್ವಾಮೀಜಿಗಳನ್ನು ಭೇಟಿ ಮಾಡಿ ಸಮನ್ವಯತೆಯ ವೇದಿಕೆಯನ್ನು ಸೃಷ್ಟಿ ಮಾಡುತ್ತಿದ್ದೇವೆ ಎಂದು ಸಂಘದ ಅಧ್ಯಕ್ಷ ಅನಿಸ್ ಪಾಷಾ ಶ್ರೀಗಳಿಗೆ ತಿಳಿಸಿ ಮುಸ್ಲಿಂ ಬಾಂಧವ್ಯ ವೇದಿಕೆಯ ಬಗ್ಗೆ ವಿವರಣೆ ನೀಡಿದರು.

ವೇದಿಕೆಯ ಕಾರ್ಯ ಚಟುವಟಿಕೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಮಾತ ನಾಡಿದ ನಿರ್ಮಲಾನಂದನಾಥ ಶ್ರೀಗಳು, ಭೂಮಿ ಮೇಲೆ ಜೀವಿಸುವ ಪ್ರತಿಯೊಬ್ಬ ವ್ಯಕ್ತಿಗೂ ಸರ್ವಧರ್ಮ ಸಮನ್ವಯತೆ ಇರಬೇಕು. ಒಂದು ಸಮುದಾಯದ ಬಗ್ಗೆ ಯಾರಾದರೂ ಅತಿಯಾದ ಪ್ರೀತಿ ತೋರಿಸಿ ದರೆ ನಾವು ಎಚ್ಚರಿಕೆಯ ನಡೆಯನ್ನು ಇಡ ಬೇಕು. ಏಕೆಂದರೆ ಅವರ ಅತಿಯಾದ ಪ್ರೀತಿ ನಮ್ಮ ನೆಮ್ಮದಿಯನ್ನು ಹಾಳು ಮಾಡುವ ಸಂಭವವಿರುತ್ತದೆ ಎಂದು ಎಚ್ಚರಿಸಿದರು.

ಆದಿಚುಂಚನಗಿರಿ ಮಠದಲ್ಲಿ ಎಲ್ಲರನ್ನು ಸಮನ್ವಯತೆಯಿಂದ ಕಾಣುವ ಮನೋ ಭಾವನೆ ಇದೆ. ಸರ್ವಧರ್ಮದ ಮಕ್ಕಳು ಕೂಡ ಮಠದಲ್ಲಿ ಅತ್ಯುತ್ತಮ ಶಿಕ್ಷಣ ಪಡೆ ಯುತ್ತಿದ್ದಾರೆ. ಶಾಂತಿಯ ಸಂದೇಶ ಹೊತ್ತು ವೇದಿಕೆ ಉತ್ತಮ ದಾರಿಯಲ್ಲಿ ನಡೆಯ ಬೇಕು. ವೇದಿಕೆ ಸಹಯೋಗದಲ್ಲಿ ನಡೆ ಯುವ ಉತ್ತಮ ಕಾರ್ಯಗಳಿಗೆ ಮಠದ ಸಹಕಾರ ಇರಲಿದೆ ಎಂದು ತಿಳಿಸಿದರು.

ರಾಜ್ಯದ ವಿವಿಧೆಡೆಯಿಂದ ಆಗಮಿಸಿದ ಮುಸ್ಲಿಂ ಮುಖಂಡರನ್ನು ನಿರ್ಮಲಾನಂದನಾಥ ಸ್ವಾಮೀಜಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಹಿಂದೂ–ಮುಸ್ಲಿಂ ಬಾಂಧವ್ಯ ವೇದಿಕೆಯ ಅಭಿಗೌಡ, ವಿನಯ್, ಶಿವಣ್ಣ, ನವೀನ್ ಗೌಡ, ಮುಷ್ತಾಕ್, ಹೆನ್ನಾಬೈಲ್, ಇಬ್ರಾಹಿಂ ಸಾಹೇಬ್ ಕೋಟಾ, ಉಸ್ಮಾನ್ ಹೈಕಾಡಿ, ನಜೀರ್ ಬೆಳ ವಾಯಿ, ಮುಬಾರಕ್ ಗುಲ್ವಾಡಿ, ಅಶ್ರಫ್ ಕುಂದಾ ಪುರ, ಹಕೀಂ ತೀರ್ಥಹಳ್ಳಿ ಇತರರಿದ್ದರು.

ಕ್ರೀಡೆಯಿಂದ ಮನಸ್ಸು, ಆರೋಗ್ಯದ ಸುಧಾರಣೆ



ಮಂಡ್ಯ, ಆ.27– ಇಂದಿನ ಮಕ್ಕಳು, ಟಿವಿ ಮತ್ತು ಮೊಬೈಲ್‌ಗಳಿಂದ ಹೊರಬರಬೇಕು. ಆನ್‌ಲೈನ್ ಗೇಮ್‌ಗಳನ್ನು ದೂರ ಇಟ್ಟು ದೈಹಿಕ ಕ್ರೀಡೆಗಳ ಬಗ್ಗೆ ಆಸಕ್ತಿ ತೋರಿದರೆ ಮನಸ್ಸು ಮತ್ತು ದೇಹದ ಆರೋಗ್ಯ ಸುಧಾರಿಸಲಿದೆ ಎಂದು ಕೃಷಿಕ ಲಯನ್ಸ್ ಸಂಸ್ಥೆಯ ಆಡಳಿತಾಧಿಕಾರಿ ಕೆ.ಟಿ.ಹನುಮಂತು ಕರೆ ನೀಡಿದರು.

ನಗರದ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ಪ್ರತಿಭಾಂಜಲಿ ಸುಗಮ ಸಂಗೀತ ಅಕಾಡೆಮಿ, ಕೃಷಿಕ ಲಯನ್ಸ್ ಸಂಸ್ಥೆ ಸಂಸ್ಥೆಯು ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ "ಮೇಜರ್ ಧ್ಯಾನ್‌ಚಂದ್ ಒಂದು ನೆನಪು" ಕಾರ್ಯಕ್ರಮ ಮತ್ತು ರಾಷ್ಟ್ರೀಯ ಕ್ರೀಡಾಪಟುಗಳ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕೋವಿಡ್ ನಂತರ ಮಕ್ಕಳು, ವಿದ್ಯಾರ್ಥಿಗಳ ಕೈಗೆ ಸುಲಭವಾಗಿ ಮೊಬೈಲ್ ಸಿಗುತ್ತಿದೆ. ಇದರಿಂದ ಮಕ್ಕಳು ಮೊಬೈಲ್‌ಗೆ ದಾಸರಾಗುತ್ತಿದ್ದಾರೆ. ಮೊಬೈಲ್ ಮೂಲಕ ಆನ್‌ಲೈನ್ ಗೇಮ್‌ಗಳಿಗೆ ಅಡಿಕ್ಟ್ ಆಗುತ್ತಿದ್ದಾರೆ. ಇದರಿಂದ ಮಾನಸಿಕ, ಆರ್ಥಿಕ ನಷ್ಟವಾಗಲಿದೆ. ಖಿನ್ನತೆಗೆ ಜಾರಲೂ ಬಹುದು. ಹೀಗಾಗಿ ಮೊಬೈಲ್, ಟಿವಿಗಳಿಂದ ಮಕ್ಕಳು ಆದಷ್ಟು ದೂರವಿದ್ದಷ್ಟು ಒಳ್ಳೆಯದು ಎಂದು ಕಿವಿಮಾತು ಹೇಳಿದರು.

ಕ್ರೀಡೆಗಳಿಂದ ಆರೋಗ್ಯ ಸುಧಾರಿಸಲಿದೆ. ಹೀಗಾಗಿ 10 ಆಸ್ಪತ್ರೆಗಳ ನಿರ್ಮಾಣಕ್ಕಿಂತ ಒಂದು ಕ್ರೀಡಾಂಗಣ ನಿರ್ಮಿಸುವುದು ಸೂಕ್ತವೆನ್ನುವ ಮಾತಿದೆ. ಆಟೋಟಗಳಿಂದ ನಮ್ಮ ಆರೋಗ್ಯ ಚೆನ್ನಾಗಿರಲಿದೆ. ಇದರಿಂದ ಆಸ್ಪತ್ರೆಗೆ ಹೋಗು ವುದು ತಪ್ಪಲಿದೆ. ಜತೆಗೆ, ಪ್ರತಿಯೊಬ್ಬರಿಗೂ ಕ್ರೀಡಾ ಮನೋ ಭಾವ ಮುಖ್ಯ ಸಾಧಕರು ಯುವ ಕ್ರೀಡಾಪಟುಗಳು, ವಿದ್ಯಾರ್ಥಿ ಗಳಿಗೆ ಪ್ರೇರಣೆಯಾಗಲಿದೆ ಎಂದು ತಿಳಿಸಿದರು.

ಬದುಕು ವಿಶಾಲವಾದುದು. ಬದುಕಿಗೆ ಶಿಕ್ಷಣವೂ ಮುಖ್ಯ. ಹಾಗೆಂದು ಅನುತ್ತೀರ್ಣರಾದವೆಂಬ ಕಾರಣಕ್ಕೆ ದುಡುಕಬೇಕಿಲ್ಲ. ಶಿಕ್ಷಣದ ಹೊರತಾಗಿಯೂ ಬದುಕಿದೆ. ಮಕ್ಕಳು ತಮ್ಮ ಆಸಕ್ತಿಯ ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕು. ಕ್ರೀಡೆಗಳಿಂದಲೂ ಕೋಟ್ಯಾಂತರ ರೂ. ಹಣ ಸಂಪಾದಿಸ ಬಹುದು. ಇದಕ್ಕೆ ಚೆಸ್, ಕ್ರಿಕೆಟ್, ಪುಟ್ಬಾಲ್, ಬ್ಯಾಡ್ಮಿಂಟನ್ ಆಟಗಾರರೇ ಸಾಕ್ಷಿ ಎಂದು ತಿಳಿಸಿದರು. ಮೇಜರ್ ಧ್ಯಾನ್ ಚಂದ್ ಅವರು ಜೀವನಗಾಥೆಯನ್ನು ಮಕ್ಕಳಿಗೆ ತಿಳಿಸಿ, ಕ್ರೀಡೆಗಳತ್ತ ಪ್ರೋತ್ಸಾಹಿಸಿದರು. ಇದೇ ವೇಳೆ ಅಂತಾರಾಷ್ಟ್ರೀಯ ಹಿರಿಯ ಅಥ್ಲೆಟಿಕ್ ಕ್ರೀಡಾಪಟು ಸಿ.ಬಿ.ಚಲುವೇಗೌಡ, ಅಂತಾ ರಾಷ್ಟ್ರೀಯ ಕರಾಟೆ ಪಟು ವಿಷ್ಣು ಮೊದಲಿಯಾರ್, ಟೆನಿಕಾಯ್ಟ್ ಕ್ರೀಡಾಪಟು ಕ್ಯಾತನಹಳ್ಳಿ ಲಿಖಿತ, ಕ್ರಿಕೆಟ್ ತರಬೇತುದಾರ ನಂದಕಿಶೋರ್, ಜೂಡೋ ಪಟು ಬಿ.ಯ. ಉನ್ನತಿ, ವಾಲಿಬಾಲ್ ಆಟಗಾರ್ತಿ ಕೊತ್ತತ್ತಿ ರಕ್ಷಿತಾ, ರಾಷ್ಟ್ರೀಯ ಥ್ರೋಬಾಲ್ ಆಟಗಾರ್ತಿ ಬೃಂದಾ, ಚೆಸ್ ಆಟಗಾರ್ತಿ ಅನುಘ್ನ ಆನಂದ್ ಅವರನ್ನು ಅಭಿನಂದಿಸಲಾಯಿತು.

ಪ್ರತಿಭಾಂಜಲಿ ಅಕಾಡೆಮಿಯ ಅಧ್ಯಕ್ಷ ಡೇವಿಡ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಪತ್ರಕರ್ತ ನವೀನ್ ಚಿಕ್ಕಮಂಡ್ಯ, ಮನ್‌ಮುಲ್ ಮಾಜಿ ನಿರ್ದೇಶಕಿ ನೀನಾ ಪಟೇಲ್, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಮೇಲ್ವಿಚಾರಕಿ ಅಮೂಲ್ಯ ಸೇರಿದಂತೆ ಇತರರು ಭಾಗವಹಿಸಿದ್ದರು.

ನುಗು ಜಲಾಶಯದ ಹಿನ್ನೀರಿನಲ್ಲಿ ಸ್ವಚ್ಛತಾ ಕಾರ್ಯ

ನಾಲ್ಕೈದು ಟ್ರಾಕ್ಟರ್‌ಗಳಷ್ಟು ಹಳೆಯ ಬಟ್ಟೆ, ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹ



ಸರಗೂರು ನಗು ಜಲಾಶಯದ ಹೊಸ ಬೀರ್ವಾಳು ಗ್ರಾಮದ ಹಿನ್ನೀರು ಪ್ರದೇಶದಲ್ಲಿ ಹಳೆಯ ಬಟ್ಟೆಗಳು, ಪ್ಲಾಸ್ಟಿಕ್ ಹಾಗೂ ಇನ್ನಿತರ ತ್ಯಾಜ್ಯದ ರಾಶಿಯನ್ನು ಹೊಸಬೀರ್ವಾಳು ಗ್ರಾಮದ ಯುವಕರು ಶ್ರಮದಾನ ಮಾಡುವ ಮೂಲಕ ತೆರವುಗೊಳಿಸಿದರು.

ಸರಗೂರು, ಆ.27– ನುಗು ಜಲಾ ಶಯದ ಹಿನ್ನೀರಿನಲ್ಲಿ ತೇಲಿ ಬರುತ್ತಿದೆ ಹಳೆ ಬಟ್ಟೆ, ಪ್ಲಾಸ್ಟಿಕ್ ತ್ಯಾಜಗಳು. ಹೊಸ ಬೀರ್ವಾಳು ಗ್ರಾಮದ ಗ್ರಾಮೀಣ ಮಹೇಶ್ ತಂಡದ ಯುವಕರು ಸ್ವಚ್ಛತೆ ಗೊಳಿಸುವ ಮೂಲಕ ಶ್ರಮದಾನ ನಡೆಸಿದರು.

ನುಗು ಜಲಾಶಯದ ಹೊಸ ಬೀರ್ವಾಳು ಗ್ರಾಮದ ಹಿನ್ನೀರು ಪ್ರದೇಶದಲ್ಲಿ ಹಳೆಯ ಬಟ್ಟೆಗಳು, ಪ್ಲಾಸ್ಟಿಕ್ ಹಾಗೂ ಇನ್ನಿತರ ಕಸದ ರಾಶಿಯನ್ನು ಕಂಡಿದ್ದ ಹೊಸಬೀ ರ್ವಾಳು ಗ್ರಾಮದ ಯುವಕರು ಇಂದು ಮುಂಜಾನೆ ಅರಣ್ಯ ಇಲಾಖೆಯವರ ಜೊತೆಗೂಡಿ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಂಡಿದ್ದರು. ನಗು ಜಲಾಶಯದ ಸುತ್ತಮುತ್ತಲಿನ ಗ್ರಾಮದವರು ಹಳೆಯ ಬಟ್ಟೆಗಳನ್ನು ನೀರಿನಲ್ಲಿ ಬಿಟ್ಟಿದ್ದರ ಪರಿಣಾಮ ಅಲ್ಲಿನ ಪರಿಸರ ಹಾಳಾಗುತ್ತತ್ತು. ನುಗು ಹಿನ್ನೀರಿನಲ್ಲಿ ತೇಲಿ ಬರುತ್ತಿತ್ತು ಹಳೆ ಬಟ್ಟೆ, ಪ್ಲಾಸ್ಟಿಕ್ ತ್ಯಾಜಗಳು. ನದಿ ನೀರಿನಲ್ಲಿ ತೇಲಿಬಂದು ನದಿ ದಡದಲ್ಲಿ ರಾಶಿ ಗಟ್ಟಲೇ ತ್ಯಾಜ್ಯಗಳು ತುಂಬಿ ತುಳುಕುತ್ತಿವೇ, ಇದನ್ನು ಗಮನ ಹರಿಸಿದ ಗ್ರಾಮೀಣ ಮಹೇಶ್ ಅವರ ನೇತೃತ್ವದಲ್ಲಿ ಹೊಸ ಬೀರ್ವಾಳು ಗ್ರಾಮದ ಯುವಕರುಗಳಾದ ಸಂತೋಷ್, ಪ್ರಸಾದ್, ಕುಮಾರ್, ಶಿವು, ದಚ್ಚು, ಚಂದು, ಅಜಯ್ ಹಾಗೂ ಇತರ ಗ್ರಾಮದ ಯುವಕರು ಈ ಸ್ವಚ್ಛತಾ ಕಾರ್ಯ ನಡೆಸಿದರು.

ಸುಮಾರು ನಾಲ್ಕರಿಂದ ಐದು ಟ್ರಾಕ್ಟರ್‌ಗಳಲ್ಲಿ ತುಂಬುವಷ್ಟು ಹಳೆಯ ಬಟ್ಟೆಗಳ ರಾಶಿಯನ್ನು ಸಂಗ್ರಹಿಸಿ ಬೆಂಕಿಯಲ್ಲಿ ಸುಡಲಾಯಿತು. ಸ್ವಾತಂತ್ರೋತ್ಸವದ ಸಂದರ್ಭದಲ್ಲಿ ಸರಗೂರು ತಾಲೂಕಿನಲ್ಲಿ ಉತ್ತಮ ಅರಣ್ಯ ರಕ್ಷಕ ಎಂದು ಗುರುತಿಸಿ ಸನ್ಮಾನಿತರಾಗಿದ್ದ ಸಿದ್ದರಾಜು ಕೂಡ ಸ್ವಚ್ಛತೆಯಲ್ಲಿ ತೊಡಗಿಸಿಕೊಂಡಿದ್ದರು.

ಆ.30, ಗೃಹಲಕ್ಷ್ಮಿ ಯೋಜನೆಗೆ ಮೈಸೂರಲ್ಲಿ ಚಾಲನೆ

ಕೆ.ಆರ್.ನಗರದಿಂದ 6 ಸಾವಿರ ಫಲಾನುಭವಿಗಳು ಭಾಗಿ



ಕೆ.ಆರ್.ನಗರ, ಆ.27– ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಬುಧವಾರ (ಆ.30) ಮೈಸೂರಲ್ಲಿ ಚಾಲನೆ ನೀಡ ಲಿದ್ದು, ಅರ್ಹರಿಗೆ ಯೋಜನೆ ತಲುಪು ವಂತೆ ಅಧಿಕಾರಿಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಶಾಸಕ ಡಿ.ರವಿಶಂಕರ್ ಸೂಚನೆ ನೀಡಿದ್ದಾರೆ.

ಪಟ್ಟಣದ ತಾಲೂಕು ಕಚೇರಿಯಲ್ಲಿ ಆಯೋಜಿಸಿದ್ದ ಗೃಹಲಕ್ಷ್ಮಿ ಯೋಜನೆ ಕಾರ್ಯಕ್ರಮದ ಪೂರ್ವಭಾವಿ ಸಭೆ ಯಲ್ಲಿ ಮಾತನಾಡಿದ ಅವರು ಸರ್ಕಾರ ಜನ ಸಾಮಾನ್ಯರ ಅನುಕೂಲಕ್ಕಾಗಿ ಹಾಗೂ ಚುನಾವಣೆ ಪೂರ್ವದಲ್ಲಿ ನೀಡಿದ್ದ ಭರವಸೆಗಳಂತೆ ಗ್ಯಾರಂಟಿ ಯೋಜನೆ ಗಳನ್ನು ಅನುಷ್ಠಾನಗೊಳಿಸುತ್ತಿದ್ದು ನುಡಿದಂತೆ ನಡೆಯುವ ಮೂಲಕ ಜನ ಸಾಮಾನ್ಯರ ನೆರವಿಗೆ ನಿಂತಿದೆ ಎಂದು ಹೇಳಿದರು.

ಆ.30 ರಂದು ಮೈಸೂರಿನಲ್ಲಿ ನಡೆಯ ಲಿರುವ ಗೃಹಲಕ್ಷ್ಮಿ ಯೋಜನೆ ಚಾಲನೆ ಕಾರ್ಯಕ್ರಮಕ್ಕೆ ನಮ್ಮ ಕ್ಷೇತ್ರದಿಂದ 6 ಸಾವಿರ ಮಂದಿ ಫಲಾನುಭವಿಗಳು ಹಾಜರಾಗುಬೇಕು. ಪ್ರತಿ ಪಂಚಾಯಿತಿಗೆ 3 ಬಸ್‌ನಂತೆ 34 ಪಂಚಾಯಿತಿಗಳಿಗೂ ಬಸ್ ಸೌಕರ್ಯದ ಜತೆಗೆ ತಲಾ 1 ಬಸ್‌ಗೆ 10 ಸಾವಿರ ರೂಪಾಯಿಗಳನ್ನು ಖರ್ಚಿಗಾಗಿ ನೀಡಲಾಗುವುದು. ಪಟ್ಟಣಕ್ಕೆ 3 ಬಸ್ ನೀಡಲಾಗುತ್ತದೆ. ಯಾವುದೇ ತೊಂದರೆ ಯಾಗದಂತೆ ನಮ್ಮ ಕ್ಷೇತ್ರದ ಫಲಾನುಭವಿಗಳನ್ನು ಕರೆದುಕೊಂಡು ಹೋಗಿ ಕರೆತರುವ ಕೆಲಸ ಅಧಿಕಾರಿ ವರ್ಗದಿಂದ ನಡೆಯಬೇಕು ಎಂದು ಸೂಚನೆ ನೀಡಿದರು.

ಅಂದು ಬೆಳಿಗ್ಗೆ 11 ಗಂಟೆಗೆ ಕಾರ್ಯ ಕ್ರಮ ಆರಂಭವಾಗಲಿದ್ದು ಕಾರ್ಯಕ್ರಮಕ್ಕೆ ಹಾಜರಾಗುವ ಫಲಾನುಭವಿಗಳ ಪಟ್ಟಿಯನ್ನು ಆ.28 ರೊಳಗೆ ನಮಗೆ ತಲುಪಿಸುವ ಜತೆಗೆ ಅವರ ನೊಂದಣಿ ಮಾಡಿಕೊಂಡಿರುವ ಸಂಖ್ಯೆಯೊಂದಿಗೆ ಮೊಬೆಲ್‌ನ್ನು ತರಬೇಕು, ಇಲ್ಲಿವರೆಗೆ ನಮ್ಮ ಕ್ಷೇತ್ರದಲ್ಲಿ 51 ಸಾವಿರ ಮಂದಿ ಫಲಾನುಭವಿಗಳು ನೊಂದಣಿ ಮಾಡಿ ಕೊಂಡಿದ್ದು, ಉಳಿದವರು ಅರ್ಹ ದಾಖ ಲಾತಿಗಳೊಂದಿಗೆ ನೊಂದಣಿ ಮಾಡಿ ಸಲು ಅವಕಾಶ ಮಾಡಿಕೊಡುತ್ತಿದ್ದು ಇದಕ್ಕೆ ಯಾವುದೇ ಕಾಲ ಮಿತಿ ನೀಡಿಲ್ಲ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಹಸಿಲ್ದಾರ್ ಸಿ.ಎಸ್. ಪೂರ್ಣಿಮ, ತಾಪಂ ಇಓ ಹೆಚ್.ಕೆ.ಸತೀಶ್, ಬಿಇಓ ಕೃಷ್ಣಪ್ಪ, ಸಿಡಿಪಿಓ ಪೂರ್ಣಿಮ ಸೇರಿದಂತೆ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿ ಗಳು ಹಾಜರಿದ್ದರು.

ಚಿಲ್ಲರೆ ಬೀಡಿ–ಸಿಗರೇಟ್ ಮಾರಾಟ, ಬ್ರಾಂಡೆಡ್ ತಿಂಡಿ ನೀಡದ ಮದ್ಯದಂಗಡಿಯವರಿಗೂ ದಂಡ

ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಅಧಿಕಾರಿಗಳಿಂದ ಕಾರ್ಯಾಚರಣೆ



ಹುಣಸೂರು, ಆ.27– ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಅಧಿಕಾರಿಗಳ ನೇತೃತ್ವದ ತಂಡ ಹುಣ ಸೂರಿನ ವಿವಿಧ ಅಂಗಡಿ, ಬಾರ್ ಅಂಡ್ ರೆಸ್ಟೋರೆಂಟ್, ಟೀ ಅಂಗಡಿ ಗಳ ಮೇಲೆ ದಿಢೀರ್ ದಾಳಿ ನಡೆಸಿ, ಅಕ್ರಮ ತಂಬಾಕು ಉತ್ಪನ್ನಗಳ ಮಾರಾಟ, ಕೋಟ್ಪಾ ಕಾಯ್ದೆ ಉಲ್ಲಂ ಘನೆ ಸೇರಿದಂತೆ 114 ಪ್ರಕರಣ ದಾಖಲಿಸಿ 14,400ರೂ ದಂಡ ವಸೂಲಿ ಮಾಡಿ ಎಚ್ಚರಿಕೆ ನೀಡಿದರು.

ಶುಕ್ರವಾರ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಲಹೆಗಾರ ಶಿವಕುಮಾರ್ ನೇತೃತ್ವದಲ್ಲಿ ನಗರದ ಬಜಾರ್ ರಸ್ತೆ, ಎಸ್.ಜೆ.ರಸ್ತೆ, ಹೊಸ ಮತ್ತು ಹಳೇ ಬಸ್ ನಿಲ್ದಾಣದ ಮುಂಭಾಗದ ಅಂಗಡಿಗಳ ಮೇಲೆ ದಾಳಿ ನಡೆಸಿದ ಅಧಿಕಾರಿಗಳ ತಂಡವು ಅಂಗಡಿಗಳಲ್ಲಿ ಚಿಲ್ಲರೆಯಾಗಿ ಬೀಡಿ–ಸಿಗರೇಟ್ ಮಾರುವುದು, ಅಂಗಡಿಗಳ ಮುಂದೆ ಸಿಗರೇಟ್‌ನಿಂದಾಗುವ ದುಷ್ಪರಿಣಾಮದ ಎಚ್ಚರಿಕೆ ಫಲಕ ಅಳವಡಿಸದಿರುವುದು, ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದುದ್ದನ್ನು ಪತ್ತೆ ಹಚ್ಚಿ ಕೋಟ್ಪಾ ಕಾಯ್ದೆ ಪ್ರಕರಣದಡಿ ದಂಡವಿಧಿಸಿದ್ದಾರೆ.

ಕುರುಕಲು ತಿಂಡಿಗೂ ದಂಡ: ನಗರದ ವಿವಿಧ ಬಾರ್ ಅಂಡ್ ರೆಸ್ಟೋರೆಂಟ್‌ಗಳ ಮೇಲೂ ದಾಳಿ ನಡೆಸಿದ ತಂಡವು ಬ್ರಾಂಡೆಡ್ ಅಲ್ಲದ ಕುರುಕಲು ತಿಂಡಿಗಳನ್ನು ಪೂರೈಸುತ್ತಿದ್ದುದ್ದನ್ನು ಪತ್ತೆ ಹಚ್ಚಿ ಮೂರು ಮದ್ಯದಂಗಡಿಗಳವರಿಗೆ ತಲಾ ಮೂರು ಸಾವಿರ ರೂ. ದಂಡ ವಿಧಿಸಲಾಯಿತು.

ಮನೆ ಬಳಕೆ ಸಿಲಿಂಡರ್ ದಂಡ: ಮನೆ ಬಳಕೆಯ ಸಿಲಿಂಡರನ್ನು ಹೋಟೆಲ್‌ನಲ್ಲಿ ಬಳಸುತ್ತಿದ್ದ ಒಂದು ಪ್ರಕರಣ ಪತ್ತೆ ಹಚ್ಚಿ ದಂಡ ವಿಧಿಸಿ ಎಚ್ಚರಿಕೆ ನೀಡಿದ್ದಾರೆ. ಒಟ್ಟು 114 ಪ್ರಕರಣ ದಾಖಲಿಸಿ 14,400 ರೂ ದಂಡ ವಿಧಿಸಲಾಗಿದೆ ಎಂದು ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವಿಶ್ವನಾಥ್ ಮಾಹಿತಿ ನೀಡಿದರು. ದಾಳಿ ವೇಳೆ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಮಾಜ ಕಾರ್ಯಕರ್ತ ನವೀದುಲ್ಲಾ ಷರೀಫ್, ಆಪ್ತಸಮಾಲೋಚಕ ವಿಜಯ್‌ಕುಮಾರ್, ಎ.ಸಿ.ಡಿ.ಪಿ.ಓ.ವೀಣಾ, ನಗರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಶಶಿಕುಮಾರ್, ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ವಿಶ್ವನಾಥ್ ಹಾಗೂ ಮಹೇಶ್, ಮಲೇಶ್ವರ್, ಕೆ.ವಿ.ರುದ್ರಪ್ಪ ಭಾಗವಹಿಸಿದ್ದರು.

ಕಾಂಗ್ರೆಸ್ ಗ್ಯಾರಂಟಿಗಳಿಗೆ ಎಸ್‌ಸಿಪಿ, ಟಿಎಸ್‌ಪಿ ಹಣ ಬಳಕೆ ಆರೋಪ

ನಾಳೆ ಮೈಸೂರಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ

ನಂಜನಗೂಡು, ಆ.27– ಸರ್ಕಾರದ ಗ್ಯಾರಂಟಿಗಳಿಗೆ ಎಸ್‌ಸಿಪಿ ಮತ್ತು ಟಿಎಸ್‌ಪಿ ಕಾಯ್ದೆಗೆ ವಿರುದ್ಧವಾಗಿ ಮೀಸಲು ಹಣ ಬಳಸುತ್ತಿರುವ ರಾಜ್ಯ ಸರ್ಕಾರದ ದಲಿತ ವಿರೋಧಿ ಧೋರಣೆಯನ್ನು ಖಂಡಿಸಿ ಆ.29 ಮೈಸೂರಿನ ಪುರಭವನದಿಂದ, ಜಿಲ್ಲಾಧಿಕಾರಿಗಳ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು ಎಂದು ದಸಂಸ ಜಿಲ್ಲಾ ಸಂಚಾಲಕ ಶಿವಮೂರ್ತಿ ಹೇಳಿದರು.

ಕೇಂದ್ರ ಯೋಜನಾ ಆಯೋಗವು 1984ರಲ್ಲಿ ಎಸ್ಸಿ, ಎಸ್ಟಿ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್ ನಲ್ಲಿ ಹಣ ಕಾಯ್ದಿರಿಸಿ ಅವರ ಸಮಗ್ರ ಅಭಿವೃದ್ಧಿಗೆ ಮುಂದಾಗಬೇಕೆಂದು ಮಾರ್ಗಸೂಚಿ ಹೊರಡಿಸಿದರ ಪರಿಣಾಮವಾಗಿ 2013ರ ಕಾಂಗ್ರೆಸ್ ಸರ್ಕಾರವು ಎಸ್ ಸಿಪಿ, ಟಿಎಸ್‌ಪಿ ಕಾಯ್ದೆಯನ್ನು ಅನುಷ್ಠಾನಕ್ಕೆ ತಂದಿತ್ತು. ಕಾಯ್ದಿರಿಸಿದ ಹಣವನ್ನು ಬಳಸುವಾಗ ಕೆಲವು ನಿಬಂಧನೆಗಳನ್ನು ವಿಧಿಸಿ ಅದರಲ್ಲಿ 7 ಡಿ ಎಂಬ ಸೆಕ್ಷನ್ ಅಳವಡಿಸಿದ ಏಕೈಕ ಕಾರಣ ದಿಂದ ಮೀಸಲಿಟ್ಟ ಹಣವನ್ನು ಮನಬಂದತೆ ವಿನಿಯೋಗಿಸಲು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಮುಂದಾದರು. ಇದನ್ನು ಮನಗಂಡ ದಲಿತಪರ ಸಂಘಟನೆಗಳ ಒತ್ತಡಕ್ಕೆ ತಲೆ ಬಾಗಿದ ಸರ್ಕಾರವು ಎಸ್‌ಸಿಪಿ, ಟಿಎಸ್ಪಿ ಕಾಯ್ದೆಯಲ್ಲಿರುವ 7ಡಿ ಕಾಯ್ದೆಯನ್ನು ರದ್ದು ಮಾಡುವುದಾಗಿ ಘೋಷಿಸಿ ಅದನ್ನು ಅನುಷ್ಠಾನಕ್ಕೆ ತರಲು ಆದೇಶ ಹೊರಡಿಸಿದೆ.

ಆದರೆ ಆದೇಶ ಹೊರಡಿಸಿದ ಕಾಂಗ್ರೆಸ್ ಸರ್ಕಾರವೇ ತನ್ನ 5 ಗ್ಯಾರಂಟಿಗಳಿಗೆ ಎಸ್ಸಿಪಿ, ಟಿಎಸ್ಪಿಗೆ ಮೀಸಲಿಟ್ಟಿರುವ ಹಣವನ್ನು ಬಳಸುತ್ತಿರುವುದು ಖಂಡನೀಯ, ಈ ದಲಿತ ವಿರೋಧಿ ಧೋರಣೆಯನ್ನು ಖಂಡಿಸಿ, ಮೈಸೂರಿನ ಪುರಭವನದಿಂದ ಜಿಲ್ಲಾಧಿಕಾರಿಗಳ ಕಚೇರಿ ವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ನಡೆಸುತ್ತಿದ್ದು ಈ ಪ್ರತಿಭಟನೆಗೆ ನಂಜನಗೂಡು ತಾಲೂಕು ಶಾಖೆಯು ಬೆಂಬಲ ಸೂಚಿಸಿ ನೂರಾರು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀಚನಹಳ್ಳಿ ಸರ್ಕಾರಿ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆ



ಹೆಚ್.ಡಿ.ಕೋಟೆ, ಆ.27– ಬೀಚನಹಳ್ಳಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡಿದ ನಮ್ಮ ಸ್ನೇಹಿತ ಕಿರಣ್ ಹೃದಯಾಘಾತದಿಂದ ನಿಧನವಾದ ಹಿನ್ನೆಲೆಯಲ್ಲಿ ಅವರ ಸ್ಮರ ಣಾರ್ಥ ಪ್ರತಿ ವರ್ಷವೂ ಈ ಶಾಲೆಯ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡುತ್ತೇವೆ ಎಂದು ತಾಲೂಕು ಟೈಲರಿಂಗ್ ಕಾರ್ಮಿಕ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಬೀಚನಹಳ್ಳಿ ರಂಗಸ್ವಾಮಿ ತಿಳಿಸಿದರು.

ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿ ರುವ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 60 ಮಕ್ಕಳಿಗೆ ಸಮವಸ್ತ್ರವನ್ನು ವಿತರಿಸಿ ಮಾತನಾಡಿದ ಅವರು, ಪ್ರತಿ ವರ್ಷವೂ ಈ ಶಾಲೆಯಲ್ಲಿ ವ್ಯಾಸಂಗ ಮಾಡುವ ಅತ್ಯುತ್ತಮ ಅಂಕ ಗಳಿಸುವ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಕ್ರಮ ಕೈಗೊಳ್ಳುತ್ತೇವೆ ಎಂದರು.

ಈ ಶಾಲೆಯಲ್ಲಿ ಓದಿದ ಹಿರಿಯ ವಿದ್ಯಾರ್ಥಿಗಳ ಸುಮಾರು 70 ಸ್ನೇಹಿತರ ಬಳಗವಿದ್ದು ಈ ಶಾಲೆಯ ವಿದ್ಯಾರ್ಥಿಗಳ ಓದಿಗಾಗಿ ನಿರಂತರವಾಗಿ ಶ್ರಮಿಸುತ್ತೇವೆ. ಹಾಗಾಗಿ ಇಲ್ಲಿನ ವಿದ್ಯಾರ್ಥಿಗಳು ಸಹ ಉತ್ತಮ ಶಿಕ್ಷಣ ಪಡೆದು ಈ ಶಾಲೆಗೆ ಹಾಗೂ ನಮ್ಮ ಹಿರಿಯ ವಿದ್ಯಾರ್ಥಿ ಬಳಗಕ್ಕೆ ಕೀರ್ತಿಯನ್ನು ತರಬೇಕು ಎಂದು ಆಶಿಸುತ್ತೇವೆ ಎಂದರು.

ಇದೇ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ಅರ್ಚನಾ, ಶಿಕ್ಷಕಿ ಸರ್ಜ ಕಪೂರ್, ಲಲಿತಾ, ಶೈಲಜಾ, ನಾಗರತ್ನ, ಡಾ.ನಿರಂಜನ್ ಕುಮಾರ್ವಿದ್ಯಾರ್ಥಿಗಳು.

ಬಿದ್ದಂಡ ಸುರಕ್ಷಿತಾ 'ಮಿಸ್ ಮೈಸೂರ್'



ನಾಪೋಕ್ಲು, ಆ.27– ಎಸ್‌ಎಸ್ ಕಲಾ ಸಂಗಮದ ವತಿಯಿಂದ ಮಿಸ್, ಮಿಸೆಸ್ ಅಂಡ್ ಕಿಡ್ಸ್ ಸೀಸನ್ ಫೋರ್ ಕಾರ್ಯಕ್ರಮ ಮೈಸೂರಿನ ಗುರು ರೆಸಿಡೆನ್ಸಿ ಹೋಟೆಲ್‌ನಲ್ಲಿ ನಡೆಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ 60ಕ್ಕೂ ಅಧಿಕ ಸ್ಪರ್ಧಿಗಳು ಭಾಗವಹಿಸಿದ್ದರು.

ಇದರಲ್ಲಿ ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನ ಚೆಯ್ಯಂಡಾಣೆಯ ಕೋಕೇರಿ ಗ್ರಾಮದ ನಿವೃತ ದೈಹಿಕ ಶಿಕ್ಷಕ ಬಿದ್ದಂಡ ರಾಜ ಉತ್ತಪ್ಪ ಹಾಗೂ ಸಿಂತಿಯ ಉತ್ತಪ್ಪ ಅವರ ಪುತ್ರಿ ಬಿದ್ದಂಡ ಸುರಕ್ಷಿತ ಮಿಸ್ ಮೈಸೂರ್ ವಿನ್ನರ್ ಆಗಿ ಹೊರಹೊಮ್ಮಿದ್ದಾರೆ. ಮಿಸ್ ಮೈಸೂರ್ ಫ್ಯಾಶನ್ ಕಾರ್ಯಕ್ರಮದಲ್ಲಿ 20 ಸ್ಪರ್ಧಿಗಳ ಪೈಕಿ ಸುರಕ್ಷಿತ ಟ್ರೆಡಿಷನಲ್ ಮತ್ತು ವೆಸ್ಟರ್ನ್ ನಲ್ಲಿ ಕೊಡವ ಸೀರೆ ಧರಿಸಿ ಕೂರ್ಗ್ ಕೊಡವತಿ ಆಗಿ ಭಾಗವಹಿಸಿದ್ದರು. ಇವರು ಮೈಸೂರ್ ಮಹಾರಾಜ ಕಾಲೇಜಿನಲ್ಲಿ ಅಂತಿಮ ವರ್ಷದ ಎಂಸಿಎ ವ್ಯಾಸಂಗ ಮಾಡುತ್ತಿದ್ದಾರೆ.

ಕಾರ್ಯಕ್ರಮದ ತೀರ್ಪುಗಾರರಾಗಿ ಸತ್ಯವತಿ ಬಸವರಾಜ್, ಭುವನ ಸುಂದರಿ–2022 ವಿನ್ನರ್ ಜ್ಯೋತಿ ಬಿಹಲ್, ಖ್ಯಾತ ಡಿಸೈನರ್ ವರ್ಷ, ಮಿಸಸ್ ಇಂಡಿಯಾ ವಿನ್ನರ್ ಸುಪ್ರಜಾ, ಪೂರ್ಣಿಮಾ, ಗಂಡಸಿ ಸದಾನಂದ ಸ್ವಾಮಿ ಸಂಪಾದಕರು ಹಾಗೂ ಚಲನ ಚಿತ್ರ ನಟರು, ನಿರ್ಮಾಪಕರು ಮತ್ತಿತರರು ಪಾಲ್ಗೊಂಡಿದ್ದರು.

ಕಸ್ತೂರಿರಂಗನ್ ವರದಿ ತಿರಸ್ಕರಿಸಲು ಸರ್ಕಾರ ನಿರ್ಧಾರ

ವರದಿ ವೈಜ್ಞಾನಿಕವಾಗಿಲ್ಲ ಎಂದ ಅರಣ್ಯ ಸಚಿವ ಈಶ್ವರ್ ಖಂಡ್ರೆ

ಮಡಿಕೇರಿ, ಆ.27– ಕಸ್ತೂರಿ ರಂಗನ್ ವರದಿ 10 ವರ್ಷ ಹಳೆಯದಾಗಿದ್ದರೆ, ಮಾಧವ ಗಾಡ್ಗೀಳ್ ವರದಿ ಅದಕ್ಕಿಂತ ಹಳೆಯದ್ದಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಕಾಲಘಟ್ಟದ ಅಗತ್ಯಕ್ಕೆ ತಕ್ಕಂತೆ ವರದಿಯಲ್ಲಿ ಮಾರ್ಪಾಡು ಮಾಡಬೇಕಾಗುತ್ತದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅನಿಸಿಕೆ ವ್ಯಕ್ತಪಡಿಸಿದ್ದಾರೆ.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಸಚಿವ ಈಶ್ವರ್ ಖಂಡ್ರೆ, ಪಶ್ಚಿಮಘಟ್ಟ ಸಂರಕ್ಷಣೆ ಕುರಿತ ಕಸ್ತೂರಿ ರಂಗನ್ ವರದಿ ವೈಜ್ಞಾನಿಕವಾಗಿಲ್ಲ, ಇದನ್ನು ತಿರಸ್ಕರಿಸಬೇಕು ಎಂದು ರಾಜ್ಯ ಸರ್ಕಾರ ಈಗಾಗಲೇ ತೀರ್ಮಾನಿಸಿದೆ ಆದಾಗ್ಯೂ ಕೇಂದ್ರ ಸರ್ಕಾರ ನಿವೃತ್ತಿ ಐಎಫ್‌ಎಸ್ ಅಧಿಕಾರಿ ಸಂಜಯ್ ಕುಮಾರ್ ನೇತೃತ್ವದಲ್ಲಿ ಒಂದು ಸಮಿತಿ ರಚಿಸಿದ್ದು, ಈ ಸಮಿತಿಗೆ ರಾಜ್ಯದ ಪಶ್ಚಿಮ ಘಟ್ಟದ ಎಲ್ಲ ಬಾಧ್ಯಸ್ಥರನ್ನು ಭೇಟಿ ಮಾಡಿ ವರದಿ ಸಲ್ಲಿಸುವಂತೆ ಕೋರಲಾಗಿದೆ ಎಂದು ಹೇಳಿದರು.

ಇತ್ತೀಚೆಗೆ ಸಂಜಯ್ ಕುಮಾರ್ ಸಮಿತಿ ಸದಸ್ಯರು ತಮ್ಮನ್ನು ಭೇಟಿ ಮಾಡಿದಾಗ, ನೀವು ಕೊಡುಗು, ಹಾಸನ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಚಾಮರಾಜ ನಗರ ಮೊದಲಾದ ಪಶ್ಚಿಮಘಟ್ಟ ಪ್ರದೇಶಕ್ಕೆ ಭೇಟಿ ನೀಡಿ, ಅಲ್ಲಿನ ಜನವಸತಿಯಲ್ಲಿರುವ ನಿವಾಸಿಗಳೊಂದಿಗೆ ಸಮಾಲೋಚಿಸಿ ನಂತರ ವರದಿ ಸಿದ್ಧಪಡಿಸಬೇಕು ಎಂದು ಕೋರಿದ್ದೇನೆ ಎಂದು ಸ್ಪಷ್ಟಪಡಿಸಿದರು.



ಪರಿಸರ ಉಳಿಯಬೇಕಿದ್ದು, ಈ ಕಾರ್ಯವನ್ನು ಪಶ್ಚಿಮ ಘಟ್ಟದ ಜನರು ಮಾಡುತ್ತಿದ್ದಾರೆ. ಆದಾಗ್ಯೂ ಕೇಂದ್ರ ಸರ್ಕಾರ ಪಶ್ಚಿಮಘಟ್ಟ ಉಳಿಸಲು ಈ ಸಮಿತಿ ರಚಿಸಿದೆ. ಇದರಿಂದ ಜನರಿಗೆ ಯಾವುದೇ ತೊಂದರೆ ಆಗಬಾರದು ಎಂಬುದು ಸರ್ಕಾರದ ನಿಲುವಾಗಿದೆ ಎಂದು ಸಚಿವ ಈಶ್ವರ್ ಖಂಡ್ರೆ ಹೇಳಿದರು. ಎಲ್ಲರೂ ಒಪ್ಪುವಂತಹ ವರದಿ ಬಂದರೆ ಶಾಸಕರೊಂದಿಗೆ, ಬಾಧ್ಯಸ್ಥರೊಂದಿಗೆ ಮತ್ತು ಸಚಿವ ಸಂಪುಟದ ಉಪ ಸಮಿತಿಯಲ್ಲಿ ಚರ್ಚಿಸಿ ಅಂತಿಮವಾಗಿ ಸರ್ಕಾರ ಈ ಕುರಿತಂತೆ ನಿರ್ಧಾರ ಕೈಗೊಳ್ಳಲಿದೆ ಎಂದು ಮತ್ತೊಮ್ಮೆ ಸ್ಪಷ್ಟಪಡಿಸಿದರು. ಪರಿಸರ ಪ್ರಕೃತಿ, ಪಶ್ಚಿಮ ಘಟ್ಟದ ಜೀವ ಮತ್ತು ಸಸ್ಯ ಸಂಕುಲ ಉಳಿಯಬೇಕು ಇದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಸಚಿವರು ಹೇಳಿದರು.

ಈ ಸಂದರ್ಭ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಮಡಿಕೇರಿ ವಿಧಾನಸಭಾ ಕ್ಷೇತ್ರ ಶಾಸಕ ಡಾ.ಮಂಥರ್ ಗೌಡ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್ ಚಂದ್ರಮೌಳಿ, ಕೊಡಗು ಜಿಲ್ಲಾ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಕೆ.ಪಿ.ಸಿ.ಸಿ ಸದಸ್ಯರಾದ ಮಂಜುನಾಥ್ ಗುಂಡೂರಾವ್, ಕೆ.ಎ ಯಾಕೂಬ್, ರಮಾನಾಥ್, ಕಾಂಗ್ರೆಸ್ ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ಸುರಯ್ಯ ಅಬ್ರಾರ್, ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಂಸ, ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ. ಶಶಿಧರ್, ಕಾಂಗ್ರೆಸ್ ಜಿಲ್ಲಾ ವಕ್ತಾರರಾದ ಟಿ.ಪಿ ರಮೇಶ್ ಸೇರಿದಂತೆ ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು, ಪಕ್ಷದ ಮುಖಂಡರು ಹಾಜರಿದ್ದರು.

ಇಂದು ಅಂತರ ಮಹಾವಿದ್ಯಾಲಯಗಳ ಕ್ರೀಡಾಕೂಟ

ಗೋಣಿಕೊಪ್ಪ, ಆ.27– ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನ ವಿಶ್ವ ವಿದ್ಯಾಲಯದ ಅಂತರ ಮಹಾವಿದ್ಯಾಲಯಗಳ ಪಂದ್ಯಾವಳಿ ಆ.28 ರಂದು ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯ ಮೈದಾನದಲ್ಲಿ ಆಯೋಜಿಸಲಾಗಿದೆ.

ಫುಟ್ಬಾಲ್, ವಾಲಿಬಾಲ್, ಬ್ಯಾಡ್ಮಿಂಟನ್ ಕ್ರೀಡೆಗಳು ನಡೆಯಲಿವೆ. ಉದ್ಘಾಟನೆ ಬೆಳಗ್ಗೆ 10 ಗಂಟೆಗೆ ನಡೆಯಲಿದೆ. ಮಡಿಕೇರಿ ಫೀ. ಮಾ. ಕೆ ಎಂ. ಕಾರ್ಯಪ್ಪ ಕಾಲೇಜು ನಿವೃತ್ತ ಪ್ರಾಂಶುಪಾಲ ಡಾ. ಪುಷ್ಪಾ ಕುಟ್ಟಣ್ಣ ಉದ್ಘಾಟಿಸಲಿದ್ದು, ಶಿವಮೊಗ್ಗ ವಿಶ್ವವಿದ್ಯಾಲಯ ವಿದ್ಯಾರ್ಥಿ ಕಲ್ಯಾಣ ಮುಖ್ಯಸ್ಥ ಡಾ. ಎನ್. ಶಿವಶಂಕರ್, ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯ ಮುಖ್ಯಸ್ಥ ಡಾ. ಜಿ. ಎಂ. ದೇವಗಿರಿ ಭಾಗವಹಿಸಲಿದ್ದಾರೆ ಎಂದು ಕಾಲೇಜು ಪ್ರಕಟಣೆ ತಿಳಿಸಿದೆ.

ವಿರಾಜಪೇಟೆ ಸಾರ್ವಜನಿಕ ಆಸ್ಪತ್ರೆ ಸಮಸ್ಯೆ ಶೀಘ್ರ ನಿವಾರಣೆ

ಸಾರ್ವಜನಿಕರ ದೂರಿನ ಮೇರೆಗೆ ಆಸ್ಪತ್ರೆಗೆ ಭೇಟಿ ನೀಡಿ ಸಭೆ ನಡೆಸಿ ಭರವಸೆ ನೀಡಿದ ಶಾಸಕ ಪೊನ್ನಣ್ಣ



ವಿರಾಜಪೇಟೆ, ಆ.27– ತಾಲೂಕು ಕೇಂದ್ರವಾದ ವಿರಾಜಪೇಟೆ ಸಾರ್ವಜನಿಕ ಆಸ್ಪತ್ರೆ ಸುಸಜಿತ ಕಟ್ಟಡ ಹೊಂದಿದ್ದು, 240 ಹಾಸಿಗೆಯ ಆಸ್ಪತ್ರೆಗೆ ದಿನನಿತ್ಯ ನೂರಾರು ರೋಗಿಗಳು ಬರುತ್ತಿದ್ದಾರೆ. ವೈದ್ಯರು ಮತ್ತು ಸಿಬ್ಬಂದಿ ಕೊರತೆ ಇರುವ ಕಾರಣ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಆರೋಗ್ಯ ಸಚಿವರಾದ ದಿನೇಶ್ ಗುಂಡುರಾವ್ ಸೂಚಿಸಿರುವುದಾಗಿ ತಿಳಿಸಿದ ವಿರಾಜಪೇಟೆ ಶಾಸಕ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಆಸ್ಪತ್ರೆಯಲ್ಲಿರುವ ಎಲ್ಲಾ ಸಮಸ್ಯೆಗಳನ್ನು ಶೀಘ್ರದಲ್ಲೇ ಪರಿಹರಿಸಲಾಗುವುದು ಎಂದರು.

ಸರಕಾರಿ ಆಸ್ಪತ್ರೆಯಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಬಂದ ದೂರಿನ ಅನ್ವಯ ಆಸ್ಪತ್ರೆ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ವೈದ್ಯರು ಮತ್ತು ಸಮಿತಿ ಸದಸ್ಯರ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೈದ್ಯರ ಅವಶ್ಯಕತೆ ಮತ್ತು ಇತರ ಸಮಸ್ಯೆಗಳನ್ನು ವಿಚಾರಿಸಿದಾಗ ಆಸ್ಪತ್ರೆಯ ಪ್ರಭಾರ ಮುಖ್ಯ ವೈದ್ಯಾಧಿಕಾರಿ ಡಾ. ಹೇಮಪ್ರಿಯಾ ಮಾತನಾಡಿ, ಆಸ್ಪತ್ರೆಯಲ್ಲಿ ಎರಡು ಕೊಠಡಿಗಳು ದುಸ್ಥಿತಿಯಲ್ಲಿದೆ. ಆಸ್ಪತ್ರೆಗೆ ಬರುವ ವಾಹನಗಳ ನಿಲುಗಡೆಗೆ ಸ್ಥಳದ ಅವಶ್ಯಕತೆ ಇದ್ದು, ಆಸ್ಪತ್ರೆ ಆವರಣದ ಸುತ್ತ ರಸ್ತೆಗೆ ಡಾಂಬರೀಕಣ ಆಗಬೇಕು ಮತ್ತು ವೈದ್ಯರಿಗೆ ಎರಡು ಕಟ್ಟಡದ ಅವಶ್ಯಕತೆ ಇದೆ ಎಂದು ತಿಳಿಸಿದರು.

ಇದಕ್ಕೆ ದನಿಗೂಡಿಸಿದ ಆಡಳಿತಾಧಿಕಾರಿ ಡಾ. ಶ್ರೀನಿವಾಸ್, ಈಗಾಗಲೇ 12 ಸಿ.ಸಿ.ಕ್ಯಾಮರಗಳಿದ್ದು ಇನ್ನು 6 ಸಿ.ಸಿ.ಕ್ಯಾಮರಗಳ ಅವಶ್ಯವಿದೆ ಎಂದರು. ಇದನ್ನು ಆಲಿಸಿದ ಶಾಸಕ ಪೊನ್ನಣ್ಣ ಅವರು ಈ ಎಲ್ಲಾ ಸಮಸ್ಯೆಗಳನ್ನು ಕೂಡಲೆ ಬಗೆಹರಿಸಿ ಸಾರ್ವಜನಿಕರಿಗೆ ಉತ್ತಮ ಸೌಲಭ್ಯವನ್ನು ಒದಗಿಸಿ ಕೊಡುವಂತಾಗಬೇಕು ಎಂದರು.

ಜಿಲ್ಲಾ ಆರೋಗ್ಯಧಿಕಾರಿ ಸತೀಶ್ ಅವರು ಮಾತನಾಡಿ, ವಿರಾಜಪೇಟೆ, ಗೋಣಿಕೊಪ್ಪಲು, ಪಾಲಿಬೆಟ್ಟ ಸೇರಿದಂತೆ ಇತರೆ ಆಸ್ಪತ್ರೆಯಲ್ಲಿಯೂ ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ಇದೆ. ಆಸ್ಪತ್ರೆಯ ತುರ್ತು ಕೆಲಸಗಳಿಗೆ ಗುತ್ತಿಗೆ ಆದಾರದಲ್ಲಿ ಸಿಬ್ಬಂದಿ ತೆಗೆದುಕೊಳ್ಳಬಹುದು ಎಂದರು.

ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ, ತಾಲೂಕು ಆರೋಗ್ಯಧಿಕಾರಿ ಯತಿರಾಜ್, ಸರಕಾರಿ ಆಸ್ಪತ್ರೆಯ ವೈದ್ಯರುಗಳು ಹಾಗೂ ಸಮಿತಿಯ ಶಿಭಾ ಪೃಥ್ವಿನಾಥ್, ಸಂತೋಷ್, ಕೆ.ಪಿ.ಮಂಜು ದೇವಯ್ಯ, ಅನೀಲ್ ಅಯ್ಯಪ್ಪ, ಮತ್ತಿತರರು ಉಪಸ್ಥಿತರಿದ್ದರು. ಡಾ, ಹೇಮಪ್ರೀಯಾ ಸ್ವಾಗತಿಸಿ ವಂದಿಸಿದರು.

ಸಭೆ ಮುಗಿಯುವಷ್ಟರಲ್ಲಿ ಸಾಕಷ್ಟು ಸಾರ್ವಜನಿಕರು ಸಭಾಂಗಣಕ್ಕೆ ಆಗಮಿಸಿ ಆಸ್ಪತ್ರೆಯ ವೈದ್ಯರುಗಳ ಕರ್ತವ್ಯದ ಬಗ್ಗೆ ಆರೋಪಿಸಿ ಶಾಸಕರ ಬಳಿ ದೂರು ಹೇಳಿದರು. ಈ ಸಂದರ್ಭ ಗಾಂಧಿ ನಗರದ ಪಿ.ಎ.ಮಂಜುನಾಥ್ ಮಾತನಾಡಿ, ವೈದ್ಯರು 11 ಗಂಟೆ ನಂತರ ಕರ್ತವ್ಯಕ್ಕೆ ಹಾಜರಾಗುತ್ತಾರೆ. ಸಾರ್ವಜನಿಕರು ಸರತಿ ಸಾಲಿನಲ್ಲಿ ದಿನವಿಡೀ ಕಾದು ನಿಲ್ಲುತ್ತಾರೆ. ಅದನ್ನು ಪ್ರಶ್ನಿಸಿದರೆ ಪ್ರತಿಭಟನೆಗೆ ಮುಂದಾಗುತ್ತೇವೆಂದು ಬೆದರಿಕೆ ಹಾಕುತ್ತಾರೆ. ಸಣ್ಣ ವಿಚಾರಕ್ಕೂ ರೋಗಿಗಳನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ಕಳಿಸುತ್ತಾರೆ, ಬಡ ಕಾರ್ಮಿಕರ ಬಿಪಿಎಲ್ ಕಾರ್ಡ್ ಇದ್ದವರಿಗೆ ಸರಕಾರದ ಸೌಲಭ್ಯ ದೊರಕುತ್ತಿಲ್ಲ ಎಂದು ದೂರಿದರು.

ಶಾಸಕ ಪೊನ್ನಣ್ಣ ಆಗ ಮಧ್ಯ ಪ್ರವೇಶಿಸಿ, ಸಾರ್ವಜನಿಕರ ಬಗ್ಗೆ ಉತ್ತಮ ಅಭಿಪ್ರಾಯ ಇಟ್ಟುಕೊಳ್ಳುವುದು ನಮ್ಮ ಕರ್ತವ್ಯ. ವೈದ್ಯರು ಉತ್ತಮ ಸೇವೆ ಸಲ್ಲಿಸಬೇಕು. ಇನ್ನು ಮುಂದೆ ಈ ರೀತಿ ದೂರುಗಳು ಬಾರದಂತೆ ಎಚ್ಚರ ವಹಿಸಬೇಕು ಎಂದರು. ಈ ವೇಳೆ ಸಿ.ಕೆ.ಪೃಥ್ವಿನಾಥ್, ವಿ.ಕೆ.ಸತೀಶ್, ಹಮೀದ್, ಎಜಾಜ್ ಅಹ್ಮದ್, ಅಬ್ದುಲ್ ಜಲೀಲ್ ಮಾತನಾಡಿದರು.

ಹುಲಿ ದಾಳಿಗೆ ಕರು ಬಲಿ



ಗೋಣಿಕೊಪ್ಪ, ಆ.27– ಪೊನ್ನಂಪೇಟೆ ತಾಲೂಕಿನ ಕೋತುರು ಗ್ರಾಮದಲ್ಲಿ ಹುಲಿ ದಾಳಿಗೆ ಕರು ಬಲಿಯಾಗಿರುವ ಘಟನೆ ನಡೆದಿದೆ. ಗಣೇಶ್ ಎಂಬುವವರ ಕರುವನ್ನು ಕೊಂದುಹಾಕಿದೆ.

ಸ್ಥಳಕ್ಕೆ ನಾಗರಹೊಳೆ ಮತ್ತು ಪೊನ್ನಂಪೇಟೆ ವಲಯ ಅರಣ್ಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಸ್ಥಳದಲ್ಲಿ ಸಿಸಿಟಿವಿ ಅಳವಡಿಸಿ ಮುಂದಿನ ಕ್ರಮಕ್ಕೆ ಮುಂದಾಗಿದ್ದಾರೆ.

ಅರ್ಜಿ ಆಹ್ವಾನ

ಗೋಣಿಕೊಪ್ಪ ಆ.27– ಅಖಿಲ ಅಮ್ಮ ಕೊಡವ ವಿದ್ಯಾಭಿವೃದ್ಧಿ ಸಂಘ ವತಿಯಿಂದ ಜನಾಂಗದ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ. 7 ನೇ ತರಗತಿಯಿಂದ ಮೇಲ್ಪಟ್ಟ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅಂಕಪಟ್ಟಿ, ಶಾಲಾ–ಕಾಲೇಜಿನ ವ್ಯಾಸಂಗ ದೃಢೀಕರಣ ಪತ್ರ ಅಥವಾ ಶುಲ್ಕ ಪಾವತಿಯ ನಕಲು ಪ್ರತಿ ನೀಡಬಹುದಾಗಿದೆ. ಸೆ.15ರೊಳಗೆ ತಮ್ಮ ಗ್ರಾಮದಲ್ಲಿರುವ ಅಖಿಲ ಅಮ್ಮ ಕೊಡವ ವಿದ್ಯಾಭಿವೃದ್ಧಿ ಸಂಘದ ಸದಸ್ಯರಿಗೆ, ಅಧ್ಯಕ್ಷ ಉಮೇಶ್ ಕೇಚಮಯ್ಯ, ಕಾರ್ಯದರ್ಶಿ ಅಮ್ಮತ್ತಿರ ವಾಸುವರ್ಮ ಅವರಿಗೆ ನೀಡಬಹುದಾಗಿದೆ. ಹೆಚ್ಚಿನ ಮಾಹಿತಿಗೆ 9480425773, 9480116699 ಸಂಖ್ಯೆಯಲ್ಲಿ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

ಶ್ರೀ ಇಗ್ಗುತಪ್ಪ ದೇವಾಲಯಕ್ಕೆ 12 ಲಕ್ಷ ರೂ. ವೆಚ್ಚದ ಹೆಬ್ಬಾಗಿಲು

ಮಾಜಿ ಸಚಿವ ಎಂ.ಆರ್. ಸೀತಾರಾಮನ್‌ರಿಂದ ಲೋಕಾರ್ಪಣೆ



ನಾಪೋಕ್ಲು, ಆ.27– ಸಮೀಪದ ಕಕ್ಕಬ್ಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ವಿಧಾನಪರಿಷತ್ ಸದಸ್ಯರು, ಕೊಡಗು ಜಿಲ್ಲೆಯ ಮಾಜಿ ಉಸ್ತುವಾರಿ ಸಚಿವ ಎಂ.ಆರ್.ಸೀತಾರಾಮ್ ಮತ್ತು ಕುಟುಂಬಸ್ಥರು 12 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಹೆಬ್ಬಾಗಿಲನ್ನು ಭಾನುವಾರ ಲೋಕಾರ್ಪಣೆ ಮಾಡಿದರು.

ಈ ಸಂದರ್ಭ ಎಂ.ಆರ್. ಸೀತಾರಾಮ್ ಮಾತನಾಡಿ, ಇಗ್ಗುತ್ತಪ್ಪನ ಆಶೀರ್ವಾದದಿಂದ ದೇವಾಲಯಕ್ಕೆ ಮೆಟ್ಟಿಲುಗಳನ್ನು ಹಾಗೂ ಹೆಬ್ಬಾಗಿಲನ್ನು ಸಮರ್ಪಿಸಿ ಇಂದು ಉದ್ಘಾಟನೆ ನೆರವೇರಿಸಲಾಗಿದೆ. ಭಕ್ತರ ಅನುಕೂಲಕ್ಕಾಗಿ ದೇವಾಲಯಕ್ಕೆ ತೆರಳಲು ಕಾಂಕ್ರೀಟ್ ರಸ್ತೆ ಈ ಹಿಂದೆ ನಿರ್ಮಿಸಲಾಗಿದ್ದು, ಮಧ್ಯ ಭಾಗದಲ್ಲಿ ರಸ್ತೆ ಕೆಲಸ ಬಾಕಿ ಇದ್ದು ಅದನ್ನು ಮುಂದಿನ ದಿನಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದರು.

ಇಗ್ಗುತಪ್ಪ ದೇವಾಲಯದಲ್ಲಿ ಆಚರಿಸಲಾಗುತ್ತಿರುವ ಚೀನ್ಯಾರು ಹತ್ತರ ಹಬ್ಬದಂದು ದೇವಾಲಯದ ಹೆಬ್ಬಾಗಿಲನ್ನು ಸೀತಾರಾಮ್ ಅವರು ನಿರ್ಮಿಸಿ ಕೊಟ್ಟು ಇಂದು ಲೋಕಾರ್ಪಣೆಗೊಳಿಸಿದ್ದಾರೆ. ಮಾತ್ರವಲ್ಲದೆ ಸನ್ನಿಧಿಗೆ ಬರುವ ರಸ್ತೆ ಈ ಹಿಂದೆ ತೀವ್ರ ಹದಗೆಟ್ಟಿದ್ದು ಅದನ್ನು ದುರಸ್ತಿ ಮಾಡಿದ್ದಾರೆ. ಸಮಸ್ತ ಭಕ್ತರ ಪರವಾಗಿ ಅವರಿಗೆ ಅಭಿನಂದನೆಗಳು ಎಂದು ಅಖಿಲ ಕೊಡವ ಸಮಾಜದ ಅಧ್ಯಕ್ಷರೂ, ದೇವತಕ್ಕರಾದ ಪರದಂಡ ಸುಮನ್ ಕಾವೇರಪ್ಪ ಹೇಳಿದರು.

ಈ ಸಂದರ್ಭ ದೇವಾಲಯದ ಭಕ್ತ ಜನ ಸಂಘದ ಅಧ್ಯಕ್ಷ ಕಾಂಡಂಡ ಜೋಯಪ್ಪ, ಜನಸೇವಕರಾದ ಕದ್ದಣಿಯಂಡ ಹರೀಶ್ ಬೋಪಣ್ಣ, ಪತ್ನಿ ಪ್ರತಿಮಾ, ಸೀತಾರಾಮ್ ಪತ್ನಿ ಶೃತಿ ಸೀತಾರಾಮ್, ಮಕ್ಕಳಾದ ರಕ್ಷಾ ರಾಮಯ್ಯ, ಸುಂದರ್ ರಾಮ್, ಭಕ್ತ ಜನ ಸಂಘದ ಕಾರ್ಯದರ್ಶಿ ಲಲಿತಾ ನಂದಕುಮಾರ್, ಭಕ್ತ ಜನ ಸಂಘದ ನಿರ್ದೇಶಕರಾದ ಕಲಿಯಂಡ ಹ್ಯಾರಿ ಮಂದಣ್ಣ, ಪರದಂಡ ಡಾಲಿ. ಬಾಚಮಂಡ ಪುವಣ್ಣ , ಲವ ಚಿನ್ನಪ್ಪ ಕಲಿಯಂಡ ಸಂಪನ್ ಅಯ್ಯಪ್ಪ ಪಾಂಡಂಡ ನರೇಶ್. ಬಿದ್ದಾಟಂಡ ತಮ್ಮಯ್ಯ ದೇವಾಲಯದ ಪಾರು ಪತ್ತೆಗಾರ ಪರದಂಡ ಪ್ರಿನ್ಸ್ ತಮ್ಮಯ್ಯ. ಕಂದಾಯ ಪರಿವೀಕ್ಷಕ ರವಿಕುಮಾರ್. ಸಿಬ್ಬಂದಿ. ಇನ್ನಿತರ ಉಪಸ್ಥಿತರಿದ್ದರು. ಈ ಸಂದರ್ಭ ಸೀತಾರಾಮ್ ಅವರ ತುಲಾಭಾರ ಸೇವೆ ಸಲ್ಲಿಸಿದರು. ಪೂಜಾ ವಿಧಿ ವಿಧಾನವನ್ನು ದೇವಾಲಯದ ಅರ್ಚಕರ ಕುಶ್ಭೂಟ್. ಜಗದೀಶ್ ಹಾಗೂ ಶ್ರೀಕಾಂತ್ ನೆರವೇರಿಸಿಕೊಟ್ಟರು.

ಹನೂರು ಬಳಿ ಗಾಂಜಾ ಸಾಗಿಸಲು ಯತ್ನಿಸುತ್ತಿದ್ದ ವ್ಯಕ್ತಿ ಬಂಧನ



ಹನೂರು, ಆ.27– ಗಾಂಜಾ ಸಾಗಾಟ ಮಾಡುತ್ತಿದ್ದ ವ್ಯಕ್ತಿಯೋರ್ವನನ್ನು ಬಂಧಿಸುವಲ್ಲಿ ರಾಮಪುರ ಪೊಲೀಸರು ಯಶಸ್ವಿಯಾಗಿದ್ದಾರೆ. ಹನೂರು ತಾಲೂಕಿನ ವೈಶ್ಯಂಪಾಳ್ಯ ಗ್ರಾಮದ ಮುರುಗೇಶ್ ಬಂಧಿತ ಆರೋಪಿ.

ವೈಶ್ಯಂಪಾಳ್ಯ ಗ್ರಾಮದ ಮುರುಗೇಶ್ ಕೌದಳ್ಳಿ ಮಾರ್ಗವಾಗಿ ಹೊಸದೊಡ್ಡಿ ಗ್ರಾಮದ ಬಸ್ ನಿಲ್ದಾಣದ ಬಳಿ ತಮಿಳುನಾಡಿಗೆ ಮಾರಾಟ ಮಾಡಲು ಬಸ್‌ಗಾಗಿ ಕಾಯುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಮೇರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಹಾಗೂ ಕೊಳ್ಳೇಗಾಲ ಉಪ ವಿಭಾಗದ ಡಿವೈಎಸ್ಪಿ ಸೋಮೇಗೌಡ ಅವರ ಮಾರ್ಗದರ್ಶನದಲ್ಲಿ ರಾಮಾಪುರ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಸಂತೋಷ್ ಕಶ್ಯಪ್ ಹಾಗೂ ಸಿಬ್ಬಂದಿಗಳು ದಾಳಿ ನಡೆಸಿ 800 ಗ್ರಾಂ ಗಾಂಜಾ, ಸಾಗಾಟ ಮಾಡುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ. ದಾಳಿಯಲ್ಲಿ ಮುಖ್ಯಪೇದೆ ಸಿದ್ದೇಶ್, ಪೇದೆಗಳಾದ ಲಿಯಾಖತ್ ಅಲಿಖಾನ್, ಬಿರಾದರ್ ಪಾಲ್ಗೊಂಡಿದ್ದರು.

ಆ.30, ಮೈಸೂರಿನಲ್ಲಿ 'ಗೃಹಲಕ್ಷ್ಮಿ'ಗೆ ರಾಹುಲ್ ಚಾಲನೆ

ಸಹಸ್ರಾರು ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಲು ಡಿಕೆಶಿ ಮನವಿ



ಚಾಮರಾಜನಗರ, ಆ.27– ಮಹಿಳಾ ಸಬಲೀಕರಣಕ್ಕಾಗಿ ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಐದು ಗ್ಯಾರಂಟಿಗಳಲ್ಲಿ ಬಹು ಮುಖ್ಯವಾದ ಕುಟುಂಬದ ಯಜಮಾನಿ ಬ್ಯಾಂಕ್ ಖಾತೆಗೆ 2 ಸಾವಿರ ರೂ. ನೀಡುವ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮಿ ಯೋಜನೆಗೆ ಆ.30 ರಂದು ಮೈಸೂರಿನಲ್ಲಿ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕರಾದ ರಾಹುಲ್ ಗಾಂಧಿ ಚಾಲನೆ ನೀಡಿದ್ದಾರೆ.

ಈ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ ಸಹಸ್ರಾರು ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು ಮುಖಂಡರು ಭಾಗವಹಿಸಿ ಯಶಸ್ವಿಗೊಳಿಸಿಕೊಡಬೇಕೆಂದು ಕೆಪಿಸಿಸಿ ರಾಜ್ಯಾಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು. ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಪ್ರಥಮ ಬಾರಿಗೆ ಭೇಟಿ ನೀಡಿ ಮಾತನಾಡಿದ ಅವರು, ಚಾಮರಾಜನಗರ ಜಿಲ್ಲೆಯ ಕಾಂಗ್ರೆಸ್ ಭದ್ರಕೋಟೆಯಾಗಿದೆ. ನಾಲ್ಕು ಕ್ಷೇತ್ರಗಳಲ್ಲಿ ಮೂರಲ್ಲಿ ನಮ್ಮ ಪಕ್ಷದ ಶಾಸಕರು ಇದ್ದಾರೆ. ಹೀಗಾಗಿ ಪಕ್ಷದ ಮೈಸೂರಿನಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುವಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಕಾರ್ಯಯೋಜನೆಗಳನ್ನು ರೂಪಿಸಿ, ಅವರನ್ನು ಕರೆದುಕೊಂಡು ಬರುವ ಜವಾಬ್ದಾರಿ ನಿಮ್ಮೆಲ್ಲರದ್ದಾಗಿದೆ ಎಂದರು.

ನಮ್ಮದು ನುಡಿದಂತೆ ನಡೆಯುವ ಸರ್ಕಾರವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಸಂಪುಟದ ಎಲ್ಲಾ ಸಚಿವರು ಹಾಗೂ ಶಾಸಕರು ಐದು ಗ್ಯಾರಂಟಿಯನ್ನು ಈಡೇರಿಸುವ ನಿಟ್ಟಿನಲ್ಲಿ ತ್ವರಿತವಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಈಗಾಗಲೇ ಶಕ್ತಿ ಯೋಜನೆ ಜಾರಿಯಲ್ಲಿದೆ. ಗೃಹಜ್ಯೋತಿ ಯೋಜನೆ ಉಚಿತ ವಿದ್ಯುತ್ ನೀಡುವ ಯೋಜನೆ ಜುಲೈನಿಂದಲೇ ಜಾರಿಯಲ್ಲಿದೆ. ಬಿಪಿಎಲ್ ಪಡಿತರ ಕಾರ್ಡಿನ ಪ್ರತಿ ಸದಸ್ಯರಿಗೆ 10 ಕೆಜಿ ಅಕ್ಕಿ ನೀಡುವ ಯೋಜನೆ ಅನುಷ್ಠಾನಗೊಂಡಿದೆ. ಬಹುಮುಖ್ಯವಾಗಿರುವ ಗೃಹಲಕ್ಷ್ಮಿ ಯೋಜನೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅರ್ಜಿಗಳನ್ನು ಆಹ್ವಾನಿಸಿ, ಎಲ್ಲವು ಸಹ ಸಿದ್ಧತೆಯಾಗಿದೆ. ರಾಹುಲ್ ಗಾಂಧಿ ಅವರು ಆ. 30 ರಂದು ಚಾಲನೆ ನೀಡುತ್ತಿದ್ದಂತೆ ರಾಜ್ಯ ಎಲ್ಲಾ ಮನೆಗಳ ಕುಟುಂಬದ ಯಜಮಾನಿ ಬ್ಯಾಂಕ್ ಖಾತೆಗೆ 2 ಸಾವಿರ ರೂ. ಜಮಾ ಆಗಲಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ ಉಪ ಮುಖ್ಯಮಂತ್ರಿಗಳನ್ನು ಸ್ವಾಗತಿಸಿ, ಪ್ರಸ್ತಾವಿಕವಾಗಿ ಮಾತನಾಡಿ, ಚಾಮರಾಜನಗರ ಜಿಲ್ಲೆಗೆ ಉಪ ಮುಖ್ಯಮಂತ್ರಿಗಳಾದ ನಂತರ ಪ್ರಥಮ ಬಾರಿಗೆ ಡಿ.ಕೆ.ಶಿವಕುಮಾರ್ ಅವರು ಆಗಮಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾದ ಬಳಿಕ ರಾಜ್ಯದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಹುರಿದುಂಬಿಸಿ, ಉಪಯುಕ್ತ ಕಾರ್ಯಕ್ರಮಗಳನ್ನು ನೀಡುವ ಮೂಲಕ ಸಂಘಟಿಸಿದರು ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಸಿ. ಪುಟ್ಟರಂಗಶೆಟ್ಟಿ, ಎಚ್.ಎಂ. ಗಣೇಶ್ ಪ್ರಸಾದ್, ದರ್ಶನ್ ಧ್ರುವನಾರಾಯಣ್, ನೆಲಮಂಗಲದ ಶಾಸಕ ಶ್ರೀನಿವಾಸ್, ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ, ಮಾಜಿ ಸಂಸದ ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವ್, ಆರ್.ಮಹದೇವ್, ಬ್ಲಾಕ್ ಅಧ್ಯಕ್ಷರಾದ ಎ.ಎಸ್. ಗುರುಸ್ವಾಮಿ, ಮಹಮದ್ ಅಸ್ಗರ್, ತೋಟೇಶ್, ಮಹೇಂದ್ರ ವರ್ಮ, ಹೊಂಗನೂರು ಚಂದ್ರು, ಜಿಪಂ ಮಾಜಿ ಸದಸ್ಯ ಕಾಗಲವಾಡಿ ಸದಾಶಿವ ಮೂರ್ತಿ, ಹೊಂಗನೂರು ಜಯರಾಜ್, ಗ್ರಾಪಂ ಅಧ್ಯಕ್ಷ ಪಿ. ಶೇಖರ್, ಪದ್ಮ ಪುರುಷೋತ್ತಮ್ ಮೊದಲಾದವರು ಇದ್ದರು.

ಚಾಸಿಯ ಅಧ್ಯಕ್ಷರಿಂದ ಉಪಮುಖ್ಯಮಂತ್ರಿ ಡಿಕೆಶಿಗೆ ಮನವಿ



ಚಾಮರಾಜನಗರ ಆ.27– ಚಾಮರಾಜನಗರ ಜಿಲ್ಲೆಯ ಬದನಗುಪ್ಪೆ ಕೈಗಾರಿಕಾ ಪ್ರದೇಶಕ್ಕೆ ಶನಿವಾರ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೂತನ ಕೈಗಾರಿಕೆ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಚಾಮರಾಜನಗರ ಸಣ್ಣ ಕೈಗಾರಿಕೆಗಳ ಸಂಘದ (ಚಾಸಿಯ) ಅಧ್ಯಕ್ಷ ಎ.ಜಯಸಿಂಹ ಅವರು ಉಪ ಮುಖ್ಯಮಂತ್ರಿಗಳಿಗೆ ಗೌರವಿಸಿ, ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ವಿವರಿಸಿದ ಅವರು ಜಿಲ್ಲೆಯ ಅಭಿವೃದ್ಧಿಗೆ ಸಣ್ಣ ಕೈಗಾರಿಕೆಗಳು ಬಹಳ ಅವಶ್ಯಕವಾಗಿದೆ ಇದು ಅಭಿವೃದ್ಧಿಗೆ ಸರ್ಕಾರದ ವತಿಯಿಂದ ಹಲವಾರು ಯೋಜನೆಗಳನ್ನು ನೀಡಬೇಕಾಗಿದೆ. ಇದರಿಂದ ಸಾಕಷ್ಟು ಜನರಿಗೆ ಉದ್ಯೋಗ ಕಲ್ಪಿಸಿದಂತಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಇಮ್ರಾನ್ ಅಹ್ಮದ್ ಇದ್ದರು.

ಉಪ್ಪಾರ ಸಮುದಾಯ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡಬೇಕು

ಜಿಲ್ಲಾ ಉಪ್ಪಾರ ಯುವಕರ ಸಂಘದಿಂದ ಪ್ರತಿಭಾ ಪುರಸ್ಕಾರ ಸಮಾರಂಭ



ಚಾಮರಾಜನಗರ, ಆ.27– ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಬೇಕಾದರೆ ಮೊದಲು ನಾನೇನಾಗಬೇಕು ಎಂಬುದರ ಬಗ್ಗೆ ಆಲೋಚನೆ ಮಾಡಬೇಕು ಎಂದು ಕೇಂದ್ರ ಆದಾಯ ತೆರಿಗೆ ಇಲಾಖೆ ನಿರ್ದೇಶಕ ಲಕ್ಕಪ್ಪ ಹನುಮಣ್ಣನವರ್ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಜಿಲ್ಲಾ ಉಪ್ಪಾರ ಯುವಕರ ಸಂಘದ ವತಿಯಿಂದ ನಡೆದ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿಯಲ್ಲಿ ಶೇ 80 ಕ್ಕಿಂತ ಹೆಚ್ಚಿನ ಅಂಕಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ ಹಾಗೂ ನಾನಾ ಗ್ರಾಮಪಂಚಾಯಿತಿಗಳ ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಉಪ್ಪಾರ ಸಮುದಾಯದ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡಬೇಕು ಎಂದರು.

ಐಎಎಸ್, ಐಪಿಎಸ್, ಸಿಎ, ಉಪನ್ಯಾಸಕ ವೃತ್ತಿಯ ಬಗ್ಗೆ ಆಸಕ್ತಿ ವ್ಯಕ್ತಪಡಿಸಿದಾಗ ಅದಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಅಧ್ಯಯನ ಮಾಡಬೇಕು. ಓದಿ ಮನನ ಮಾಡಿಕೊಳ್ಳಬೇಕು, ವೃತ್ತ ಪತ್ರಿಕೆಗಳನ್ನು ಓದುವ ಅಭ್ಯಾಸ ಮಾಡಿಕೊಳ್ಳಬೇಕು, ಮೊಬೈಲ್ ಬಳಕೆಗೆ ಆದಷ್ಟು ಕಡಿವಾಣ ಹಾಕಬೇಕು. ವಿದ್ಯಾರ್ಥಿಗಳು ಸಕಾರಾತ್ಮಕ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಚಾಮರಾಜನಗರ ಗ್ರಾಮಾಂತರ ಠಾಣೆ ವೃತ್ತ ನಿರೀಕ್ಷಕ ಚಿಕ್ಕರಾಜಶೆಟ್ಟಿ ಮಾತನಾಡಿ," ಬಹುತೇಕ ಪೋಷಕರು ತಮ್ಮ ಮಕ್ಕಳಿಗೆ ಆಸ್ತಿ ಮಾಡುವ ಇಚ್ಛೆ ಹೊಂದಿರುತ್ತಾರೆ. ಇದರ ಬದಲು ಅವರಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವ ಕಾರ್ಯ ಪೋಷಕರಿಂದ ಆಗಬೇಕು ಎಂದರು.

ಪ್ರತಿಭಾ ಪುರಸ್ಕಾರ: ಉಪ್ಪಾರ ಸಮುದಾಯ 60 ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಪ್ರಮಾಣಪತ್ರ ನೀಡಿ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸಮುದಾಯದ ಗ್ರಾ.ಪಂ. ನೂತನ ಅಧ್ಯಕ್ಷ, ಉಪಾಧ್ಯಕ್ಷರುಗಳನ್ನು ಸನ್ಮಾನಿಸಲಾಯಿತು

ಐಟಿಐ ಕಾಲೇಜು ಪ್ರಾಂಶುಪಾಲ ರಂಗಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕೆಇಬಿ ಲೆಕ್ಕಾಧಿಕಾರಿ ಮಹೇಶ್, ಡೈರಿ ಅಧ್ಯಕ್ಷ ಕೋಡಿಮೋಳೆ ಗೋವಿಂದಶೆಟ್ಟಿ, ಸಂಘದ ಅಧ್ಯಕ್ಷ ಜಯಕುಮಾರ್, ಪ್ರಧಾನ ಕಾರ್ಯದರ್ಶಿ ಸಿ.ಎಸ್.ನಾಗರಾಜು, ಉಪಾಧ್ಯಕ್ಷ ಬಿ.ಸ್ವಾಮಿ, ರವಿ ಭಗೀರಥ, ಜಯಸಿದ್ದ, ಮಹದೇವಸ್ವಾಮಿ, ಶಿವಕುಮಾರ್, ನಿಟ್ರೆ ನಾಗರಾಜು, ಮೇಗಲಹುಂಡಿ ಮಹೇಶ್ ಇತರರು ಹಾಜರಿದ್ದರು.

ಸಂಸದ ಶ್ರೀನಿವಾಸಪ್ರಸಾದ್ ಹುಟ್ಟುಹಬ್ಬ

ಇಂದು ರಾಮಸಮುದ್ರದಲ್ಲಿ ಕಣ್ಣಿನ, ಉಚಿತ ಆರೋಗ್ಯ ತಪಾಸಣಾ ಶಿಬಿರ

ಚಾಮರಾಜನಗರ, ಆ.27– ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ 77ನೇ ಜನ್ಮದಿನದ ಅಂಗವಾಗಿ, ಅವರ ಅಭಿಮಾನಿ ಬಳಗವು ಸೋಮವಾರ (ಆ.28) ನಗರದ ರಾಮಸಮುದ್ರದ ಸಿ.ಆರ್. ಬಾಲರಪಟ್ಟಣ ಶಾಲಾ ಆವರಣದಲ್ಲಿ ಕಣ್ಣಿನ ಉಚಿತ ಮತ್ತು ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡಿದೆ.



ಈ ಶಿಬಿರಕ್ಕೆ ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆ ಸಹಯೋಗ ನೀಡಿವೆ. ಬೆಳಗ್ಗೆ 9 ಗಂಟೆಗೆ ಶಿಬಿರದ ಉದ್ಘಾಟನೆ ನಡೆಯಲಿದೆ. ಶ್ರೀನಿವಾಸ ಪ್ರಸಾದ್ ಪತ್ನಿ ಭಾಗ್ಯಲಕ್ಷ್ಮಿ ಅವರು ಉದ್ಘಾಟಿಸಲಿದ್ದಾರೆ. ಬಿಜೆಪಿ ಮುಖಂಡ ಎನ್. ಮಹೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಬಿಜೆಪಿ ಮುಖಂಡರಾದ ಸಿ.ಎಸ್.ನಿರಂಜನ ಕುಮಾರ್, ಎಂ.ರಾಮಚಂದ್ರ, ಎಸ್.ಮಹದೇವಯ್ಯ, ಜಿಲ್ಲಾ ಘಟಕದ ಅಧ್ಯಕ್ಷ ನಾರಾಯಣ ಪ್ರಸಾದ್, ಉಪಾಧ್ಯಕ್ಷ ವೃಷಬೇಂದ್ರಪ್ಪ, ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ಮುಖಂಡ ಹನುಮಂತಶೆಟ್ಟಿ, ಡಿಎಚ್‌ಒ ಡಾ.ಕೆ.ಎಂ. ವಿಶ್ವೇಶ್ವರಯ್ಯ, ಇಎನ್‌ಟಿ ತಜ್ಞ ಡಾ.ಎ.ಆರ್.ಬಾಬು, ಸಿ.ಆರ್.ಬಾಲರ ಪಟ್ಟಣ ವಿದ್ಯಾಸಂಸ್ಥೆಗಳ ಮುಖ್ಯಸ್ಥ ಆಗ್ನೇಲ್ ಅಲ್ಮೇಡ್, ಸೇಂಟ್ ಫ್ರಾನ್ಸಿಸ್ ಶಾಲೆಯ ಪ್ರಾಂಶುಪಾಲ ಎ.ಪ್ರಭಾಕರ್ ಇತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಅಭಿಮಾನಿ ಬಳಗದವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂಜುಂಡಸ್ವಾಮಿ ನಿಧನ



ಬೇಗೂರು(ಗುಂಡ್ಲುಪೇಟೆ), ಆ.27– ಸಮೀಪದ ಕುರುಬರಹುಂಡಿ (ಶಿವಕುಮಾರಪುರ) ಗ್ರಾಮದ ನಿವಾಸಿ ಹಾಗೂ ಕೋಟೆಕೆರೆ ಗ್ರಾಮ ಪಂಚಾಯಿತಿ ಸದಸ್ಯ ನಂಜುಂಡಸ್ವಾಮಿ(ಶನಿ) ಅನಾರೋಗ್ಯದಿಂದ ಗ್ರಾಮದಲ್ಲಿ ನಿಧನ ಹೊಂದಿದರು. ಅವರಿಗೆ 46 ವರ್ಷ ವಯಸ್ಸಾಗಿತ್ತು. ದಿವಂಗತರು ಪತ್ನಿ, ಪುತ್ರ, ಪುತ್ರಿ, ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಕುರುಬರಹುಂಡಿ ಜಮೀನಿನಲ್ಲಿ ನಡೆಯಿತು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಹಣ ದುರುಪಯೋಗ: ವಿಸ್ತೃತ ತನಿಖೆ ಆರಂಭ



ಬೆಳಗಾವಿ: ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ ಹಣ ದುರುಪಯೋಗ ಹಾಗೂ ಶೇ.40 ಕಮಿಷನ್ ಅವ್ಯವಹಾರದ ಬಗ್ಗೆ ವಿಸ್ತೃತ ತನಿಖೆ ನಡೆಸಲು ಇದು ಸೂಕ್ತ ಸಮಯ ಎಂದು ಅಬಕಾರಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋವಿಡ್ 19 ಪರಿಸ್ಥಿತಿಯಲ್ಲಿ ಹಣ ದುರುಪಯೋಗಪಡಿಸಿ ಕೊಂಡ ಬಗ್ಗೆ ತನಿಖೆ ನಡೆಸುವಂತೆ ನಾವು ವಿಪಕ್ಷದಲ್ಲಿದ್ದಾಗಲೇ ಸರ್ಕಾರದ ಮೇಲೆ ಒತ್ತಡ ಹೇರಿದ್ದೆವು. ಈಗ ನಮ್ಮ ಸರ್ಕಾರ ಅಧಿಕಾರದಲ್ಲಿದೆ. ಹೀಗಾಗಿ ವಿಚಾರಣೆ ನಡೆಸಲು ಇದು ಸರಿಯಾದ ಸಮಯ. ಸರ್ಕಾರದ ವಿವಿಧ ತನಿಖಾ ಸಂಸ್ಥೆಗಳು ಈಗಾಗಲೇ ತಮ್ಮ ಕೆಲಸ ಆರಂಭಿಸಿವೆ. ವರದಿ ಸಲ್ಲಿಸಿದ ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಬಿಜೆಪಿ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿದ್ದ ಡಾ.ಕೆ.ಸುಧಾಕರ್ ಕಾಂಗ್ರೆಸ್ ಪಕ್ಷ ಸೇರುತ್ತಾರೆಯೇ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಕಾಂಗ್ರೆಸ್ ಸೇರುವ ಬಗ್ಗೆ ನನಗೆ ತಿಳಿದಿಲ್ಲ. ಬಿಜೆಪಿ ತೊರೆದು ಕಾಂಗ್ರೆಸ್ ಸೇರುವ ನಿರ್ಧಾರ ಅವರಿಗೆ ಬಿಟ್ಟದ್ದು. ಆದರೆ, ಕೋವಿಡ್ ಪರಿಸ್ಥಿತಿಯಲ್ಲಿ ಹಣ ದುರುಪಯೋಗವಾಗುವುದು ಖಾತರಿಯಾಗಿದೆ. ಸುಧಾಕರ್ ಈಗ ಶಾಸಕರಲ್ಲದಿದ್ದರೂ ಅವರ ವಿರುದ್ಧ ಆರೋಪಗಳಿದ್ದು, ತನಿಖೆ ಅಗತ್ಯವಿದೆ ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದು 100 ದಿನಗಳು ಕಳೆದಿವೆ. ಸರ್ಕಾರದ ಸಾಧನೆಗಳನ್ನು ಅರಿಯಲು ಕನಿಷ್ಠ ಆರು ತಿಂಗಳು ಕಳೆಯಬೇಕು. ಕಳೆದ ಮೂರು ತಿಂಗಳಲ್ಲಿ ಮಾಡಿರುವ ಸಾಧನೆಯಿಂದ ನಮಗೆ ತೃಪ್ತಿ ಇದೆ ಎಂದು ಸಚಿವರು, ಲೋಕಸಭಾ ಚುನಾವಣೆಗೆ ಸಿದ್ಧತೆಯನ್ನು ಈಗಾಗಲೇ ಆರಂಭಿಸಿದ್ದೇವೆ. ಚಿಕ್ಕೋಡಿ ಮತ್ತು ಬೆಳಗಾವಿ ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಇನ್ನೂ ನಿಗದಿ ಮಾಡಿಲ್ಲ, ಮುಂದಿನ ದಿನಗಳಲ್ಲಿ ಅಂತಿಮಗೊಳಿಸಲಾಗುವುದು. ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ ಎಂದರು.

ಒಂದನೇ ಪುಟದಿಂದ

ನಾಲ್ವರು ನಿಗೂಢ ಸಾವು

ಮಕ್ಕಳೊಂದಿಗೆ ಅನ್ಯೋನ್ಯವಾಗಿದ್ದ ಮಹದೇವಸ್ವಾಮಿ, ಸಂಬಂಧಿಕರೊಂದಿಗೆ ದೂರವಿದ್ದರು ಎಂದು ತಿಳಿದುಬಂದಿದೆ.

ವಿದ್ಯಾನಗರದಲ್ಲಿ ಬಾಡಿಗೆ ರೂಂನಲ್ಲಿದ್ದ ಮಹದೇವಸ್ವಾಮಿಗೆ ನಮ್ಮ ಸಂಬಂಧಿಕರ ಮಗಳಾದ ಅನಿತಾಳೊಂದಿಗೆ ನಾವೇ ಮುಂದೆ ನಿಂತು ಮದುವೆ ಮಾಡಿಕೊಟ್ಟಿದ್ದೆವು. ಆರಂಭದಲ್ಲಿ ನಾನೇ ಭೋಗ್ಯಕ್ಕೆ ಮನೆ ಮಾಡಿಕೊಟ್ಟಿದೆ. ನಂತರದಲ್ಲಿ ಸಂಪರ್ಕ ಕಡಿಮೆ ಆಯಿತು. ಮೂರ್‍ನಾಲ್ಕು ಮನೆ ಬದಲಾವಣೆ ಮಾಡಿದ್ದರು. ಇದೇ ರಸ್ತೆಯಲ್ಲಿ ಓಡಾಡಿದರೂ ಮಹದೇವಸ್ವಾಮಿ ಇಲ್ಲಿರುವುದು ಗೊತ್ತಿರಲಿಲ್ಲ. ಎಪಿಎಂಸಿಯಲ್ಲಿ ತರಕಾರಿ ಏಜೆಂಟ್ ಆಗಿದ್ದಷ್ಟೇ ನಮಗೆ ಗೊತ್ತು. ಊರಿನಿಂದ ಕರೆ ಮಾಡಿದ್ದರಿಂದ ಈ ದುರ್ಘಟನೆ ಬಗ್ಗೆ ವಿಷಯ ತಿಳಿಯಿತು ಎಂದು ಮಹದೇವಸ್ವಾಮಿ ಪತ್ನಿ ಅನಿತಾ ಅವರ ಸಂಬಂಧಿ ಕೆಂಪನಂಜಪ್ಪ ತಿಳಿಸಿದರು.

ಮಹದೇವಸ್ವಾಮಿ ಊರಿಗೂ ಬರುತ್ತಿರಲಿಲ್ಲ. ಯಾವುದೇ ಕಾರ್ಯಕ್ರಮಗಳಿಗೂ ಭಾಗವಹಿಸುತ್ತಿರಲಿಲ್ಲ ಎಂದು ಅವರ ಚಿಕ್ಕಮ್ಮ ಹೇಳಿದರೆ, ಎದುರಿಗೆ ಸಿಕ್ಕಾಗ ತುಂಬಾ ಚೆನ್ನಾಗಿ ಮಾತನಾಡಿಸುತ್ತಿದ್ದರು, ಆದರೆ ಹೆಚ್ಚು ಸಂಪರ್ಕವಿರಲಿಲ್ಲ ಎಂದು ಚಿಕ್ಕಮ್ಮನ ಮಗ ತಿಳಿಸಿದರು. ಕಾರ್ಪೊರೇಟರ್ ಮಾ.ವಿ.ರಾಂಪ್ರಸಾದ್, ಮನೆಯಲ್ಲಿ ಶವಗಳಿದ್ದ ಸ್ಥಿತಿಯ ಬಗ್ಗೆ ಮಾಹಿತಿ ನೀಡಿ, ಘಟನೆ ಬಗ್ಗೆ ಮರುಕ ವ್ಯಕ್ತಪಡಿಸಿದರು. ಸ್ಥಳದಲ್ಲಿ ನೆರೆದಿದ್ದ ನೂರಾರು ಮಂದಿ ಕಂಬನಿ ಮಿಡಿದರು.

ಪೌರಕಾರ್ಮಿಕನಿಗೆ ಕಾರು ಡಿಕ್ಕಿ

ಎಡಗಾಲು ಮುರಿದಿದ್ದು ನೇತಾಡುವ ಸ್ಥಿತಿಯಲ್ಲಿದೆ. ಅಪಘಾತದ ಶಬ್ದ ಕೇಳಿ ಸಮೀಪದ ಟೀ-ಶಾಪ್‌ನಲ್ಲಿ ಟೀ ಕುಡಿಯುತ್ತಿದ್ದ ನಾಲ್ವರು ಪೌರಕಾರ್ಮಿಕರು ಹಾಗೂ ಸ್ಥಳೀಯರು ಗಾಯಾಳು ಮಹದೇವ ಅವರ ನೆರವಿಗೆ ಬಂದು ಕೆ.ಆರ್.ಆಸ್ಪತ್ರೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದಾರೆ.

ವಿಷಯ ತಿಳಿದು ಆಸ್ಪತ್ರೆಗೆ ಆಗಮಿಸಿದ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್, ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜ್ ಕೆ.ಆರ್.ಆಸ್ಪತ್ರೆಯಲ್ಲಿ ಗಾಯಾಳು ಮಹದೇವ ಅವರಿಗೆ ಚಿಕಿತ್ಸೆ ಕೊಡಿಸಿದರು. ಬಳಿಕ ರಕ್ತಸ್ರಾವ ನಿಯಂತ್ರಣಕ್ಕೆ ಬಂದ ನಂತರ ಡಾ.ಡಿ.ಜಿ.ನಾಗರಾಜು ಅವರು ಪೌರಕಾರ್ಮಿಕ ಮುಖಂಡರೊಂದಿಗೆ ಮಹದೇವ ಅವರನ್ನು ಕೆ.ಆರ್.ಆಸ್ಪತ್ರೆಯಿಂದ ಅಪೋಲೋ ಆಸ್ಪತ್ರೆಗೆ ಕರೆದೊಯ್ದು ತೀವ್ರ ನಿಗಾ ಘಟಕಕ್ಕೆ ದಾಖಲಿಸಿದರು.

ವಕೀಲ ಚಾಲನೆ ಮಾಡುತ್ತಿದ್ದ ಕಾರು: ಪೌರಕಾರ್ಮಿಕ ಮಹದೇವ ಅವರಿಗೆ ಡಿಕ್ಕಿ ಹೊಡೆದ ಕಾರು ಪಿರಿಯಾಪಟ್ಟಣ ತಾಲೂಕಿನ ಚಪ್ಪರದಹಳ್ಳಿ ನಿವಾಸಿ ಮಂಜುನಾಥ್(45) ಎಂಬುವರು ಚಾಲನೆ ಮಾಡುತ್ತಿದ್ದರು. ವಕೀಲರಾಗಿರುವ ಮಂಜುನಾಥ್ ಭಾನುವಾರ ಬೆಳಗ್ಗೆ ತಮ್ಮ ಕಾರನ್ನು ಕೆ.ಆರ್.ವೃತ್ತದಿಂದ ಡಿ.ದೇವರಾಜ ಅರಸು ರಸ್ತೆಯಲ್ಲಿ ವೇಗವಾಗಿ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ರಸ್ತೆ ಬದಿ ಸ್ವಚ್ಛತಾ ಕೆಲಸ ಮಾಡುತ್ತಿದ್ದ ಮಹದೇವ ಅವರಿಗೆ ಡಿಕ್ಕಿ ಹೊಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರು ವಿದ್ಯುತ್ ಕಂಬಕ್ಕೆ ಅಪ್ಪಳಿಸಿದ ಹಿನ್ನೆಲೆಯಲ್ಲಿ ಕಾರಿನ ಮುಂಭಾಗ ನುಜ್ಜುಗುಜ್ಜಾಗಿದ್ದು, ಚಾಲನೆ ಮಾಡುತ್ತಿದ್ದ ಮಂಜುನಾಥ್ ಅವರಿಗೂ ಗಾಯಗಳಾಗಿವೆ. ಚಾಲಕ ಮಂಜುನಾಥ್ ಅವರನ್ನು ಕಾಮಾಕ್ಷಿ ಆಸ್ಪತ್ರೆ ದಾಖಲಿಸಲಾಗಿದೆ.

ಈ ಸಂಬಂಧ ದೇವರಾಜ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಮುನಿಯಪ್ಪ ಅವರು ಅತೀ ವೇಗ ಮತ್ತು ನಿರ್ಲಕ್ಷ್ಯದ ಚಾಲನೆಗಾಗಿ ಮೋಟಾರು ಕಾಯ್ದೆ ನಿಯಮ 279 ಹಾಗೂ ವ್ಯಕ್ತಿಗೆ ಗಂಭೀರ ಗಾಯಗೊಳಿಸಿದ್ದಕ್ಕಾಗಿ 338 ಸೆಕ್ಷನ್ ಅನ್ವಯ ಪ್ರಕರಣ ದಾಖಲಿಸಿದ್ದಾರೆ. ಅಪಘಾತಕ್ಕೀಡಾದ ಕಾರನ್ನು ವಶಕ್ಕೆ ಪಡೆದು ತನಿಖೆ ನಡೆಸಲಾಗುತ್ತಿದೆ.

ನವಭಾರತದ ಚೈತನ್ಯದ ಸಂಕೇತ

ದೇಶವಾಗಿ ಹೊರಹೊಮ್ಮುವುದನ್ನು ತಡೆಯುವವರು ಯಾರು? ಎಂದು ಪ್ರಧಾನಿ ನರೇಂದ್ರ ಮೋದಿ ಪ್ರಶ್ನಿಸಿದ್ದಾರೆ. ಹಲವಾರು ಮಹಿಳಾ ವಿಜ್ಞಾನಿಗಳು, ಎಂಜಿನಿಯರು ಈ ಕಾರ್ಯಕ್ರಮದ ಭಾಗವಾಗಿದ್ದರು. ಯೋಜನೆಯ ನಿರ್ದೇಶಕ, ವ್ಯವಸ್ಥಾಪಕ ಸೇರಿದಂತೆ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿದ್ದಾರೆ ಎಂದರು. ಚಂದ್ರನ ದಕ್ಷಿಣ ಧ್ರುವದಲ್ಲಿ ಚಂದ್ರಯಾನ ಗಗನನೌಕೆ ಇಳಿದು ನಾಲ್ಕು ದಿನಗಳು ಕಳೆದಿವೆ. ಆದರೆ, ಈ ಬಾಹ್ಯಾಕಾಶ ಯಾತ್ರೆ ಕುರಿತು ನಡೆಯುತ್ತಿರುವ ಚರ್ಚೆಗಳು ಸಾಕಾಗುತ್ತಿಲ್ಲ ಎಂದು ಪ್ರತಿಪಾದಿಸಿದ ಅವರು, ತಮ್ಮ ಕವನದ ಕೆಲ ಸಾಲುಗಳನ್ನು ಉಲ್ಲೇಖಿಸಿದರು.

ಇಸ್ರೋಗೆ ಮಾಹಿತಿ ರವಾನಿಸಿದ ಚೆಸ್ಟ್

ಎಂದು ಟ್ವಿಟರ್‌ನಲ್ಲಿ ಇಸ್ರೋ ಮಾಹಿತಿ ನೀಡಿದೆ. ಚೇಸ್ಟ್‌ನಲ್ಲಿ ತಾಪಮಾನ ಅರಿಯುವ ಸಾಧನವನ್ನು ಸಜ್ಜುಗೊಳಿಸಲಾಗಿದ್ದು, ಮೇಲ್ಮೈನಿಂದ 10 ಸೆಂಟಿಮೀಟರ್ ಕೆಳಗೆ ಹೋಗುವ ಸಾಮರ್ಥ್ಯ ಹೊಂದಿದೆ. ಇದರಲ್ಲಿ 10 ಪ್ರತ್ಯೇಕ ತಾಪಮಾನ ಸಂವೇದಕಗಳನ್ನು ಅಳವಡಿಕೆ ಮಾಡಲಾಗಿದೆ. ವಿವಿಧ ಆಳಗಳಲ್ಲಿ ಚಂದ್ರನ ಮೇಲ್ಮೈ/ಸಮೀಪದ ಮೇಲ್ಮೈಯ ತಾಪಮಾನ ವ್ಯತ್ಯಾಸಗಳನ್ನು ವಿವರಿಸುವ ಗ್ರಾಫ್ ಅನ್ನು ಸಹ ಇಸ್ರೋ ಹಂಚಿಕೊಂಡಿದೆ. ಪ್ರಸ್ತುತಪಡಿಸಲಾದ ಗ್ರಾಫ್ ಚಂದ್ರನ ಮೇಲ್ಮೈ/ಸಮೀಪ-ಮೇಲ್ಮೈಯ ವಿವಿಧ ಆಳಗಳಲ್ಲಿ ತಾಪಮಾನ ವ್ಯತ್ಯಾಸಗಳನ್ನು ವಿವರಿಸುತ್ತದೆ, ಚಂದ್ರನ ದಕ್ಷಿಣ ಧ್ರುವಕ್ಕೆ ಇದು ಮೊದಲ ಪ್ರೊಫೈಲ್ ಆಗಿದ್ದು, ವಿವರವಾದ ಅವಲೋಕನಗಳು ನಡೆಯುತ್ತಿವೆ' ಎಂದು ಇಸ್ರೋ ತಿಳಿಸಿದೆ.

ಮುಂದಿನ ವಾರ ಉಡಾವಣೆ

ಪ್ರಯಾಣಿಸುವ ಸಾಮರ್ಥ್ಯವನ್ನು ಹೊಂದಿದೆ. ನಾವು ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಬೇಕಾಗಿದೆ. ನಮಗೆ ಹೆಚ್ಚಿನ ಹೂಡಿಕೆಯ ಅಗತ್ಯವಿದೆ. ಬಾಹ್ಯಾಕಾಶ ಕ್ಷೇತ್ರವು ಅಭಿವೃದ್ಧಿ ಹೊಂದಬೇಕು. ಇದರಿಂದ ಇಡೀ ರಾಷ್ಟ್ರವು ಅಭಿವೃದ್ಧಿ ಹೊಂದುತ್ತದೆ, ಅದು ನಮ್ಮ ಧ್ಯೇಯವಾಗಿದೆ. ನಾವು ಮೋದಿಯವರು ನಮಗೆ ನೀಡಿದ ದೂರದೃಷ್ಟಿಯನ್ನು ಈಡೇರಿಸಲು ಸಿದ್ಧ ಎಂದರು.

ಆದಿತ್ಯ ಎಲ್ 1 ಉಪಗ್ರಹ ಸಿದ್ಧ: ಚಂದ್ರನ ಅಜ್ಞಾತ ದಕ್ಷಿಣ ಧ್ರುವ ಪ್ರದೇಶದಲ್ಲಿ ಲ್ಯಾಂಡರ್ ಅನ್ನು ಯಶಸ್ವಿಯಾಗಿ ಇರಿಸಿದ ನಂತರ ಇಸ್ರೊದ ದೇಶದ ಚೊಚ್ಚಲ ಸೌರ ಮಿಷನ್ ಆದಿತ್ಯ-ಎಲ್ 1 ಸಿದ್ಧವಾಗಿದ್ದು, ಉಡಾವಣೆ ಸೆಪ್ಟೆಂಬರ್ ಮೊದಲ ವಾರದಲ್ಲಿ ಉಡಾವಣೆ ಮಾಡಲಾಗುವುದು ಎಂದರು. ಆದಿತ್ಯ ಎಲ್1 ಉಪಗ್ರಹ ಸಿದ್ಧವಾಗಿದೆ. ಇದು ಶ್ರೀಹರಿಕೋಟಾ ತಲುಪಿದ್ದು PSLV ಗೆ ಸಂಪರ್ಕ ಹೊಂದಿದೆ. ಇಸ್ರೊ ಮತ್ತು ದೇಶದ ಮುಂದಿನ ಗುರಿ ಅದರ ಉಡಾವಣೆಯಾಗಿದೆ. ಉಡಾವಣೆ ಸೆಪ್ಟೆಂಬರ್ ಮೊದಲ ವಾರದಲ್ಲಿ ನಡೆಯಲಿದೆ. ದಿನಾಂಕವನ್ನು ಇನ್ನೆರಡು ದಿನಗಳಲ್ಲಿ ಪ್ರಕಟಿಸಲಾಗುವುದು ಎಂದರು.

ಉಡಾವಣೆಯ ನಂತರ, ಅದು ದೀರ್ಘ ವೃತ್ತದ ಕಕ್ಷೆಗೆ ಹೋಗುತ್ತದೆ. ಅಲ್ಲಿಂದ ಅದು ಎಲ್1 ಪಾಯಿಂಟ್‌ಗೆ ಪ್ರಯಾಣಿಸುತ್ತದೆ, ಇದು ಸುಮಾರು 120 ದಿನಗಳನ್ನು ತೆಗೆದುಕೊಳ್ಳುತ್ತದೆ ಎಂದು ಹೇಳಿದರು.

ಆದಿತ್ಯ-ಐ1 ಸೂರ್ಯನನ್ನು ಅಧ್ಯಯನ ಮಾಡುವ ಮೊದಲ ಬಾಹ್ಯಾಕಾಶ ಆಧಾರಿತ ಭಾರತೀಯ ವೀಕ್ಷಣಾಲಯವಾಗಿದೆ. ಸೂರ್ಯನ ಮಧ್ಯಭಾಗದಿಂದ ಹೆಸರಿಸಲಾದ ಆದಿತ್ಯ-ಐ1, ಭೂಮಿಯಿಂದ ಸರಿಸುಮಾರು 1.5 ಮಿಲಿಯನ್ ಕಿಲೋಮೀಟರ್ ದೂರದಲ್ಲಿರುವ ಸೂರ್ಯ-ಭೂಮಿಯ ವ್ಯವಸ್ಥೆಯ ಲ್ಯಾಗ್ರೇಂಜ್ ಪಾಯಿಂಟ್ 1 (ಐ1) ಸುತ್ತ ಹಾಲೋ ಕಕ್ಷೆಯಲ್ಲಿ ತನ್ನನ್ನು ತಾನು ಇರಿಸಿಕೊಳ್ಳುವ ಮೂಲಕ ಸೂರ್ಯನ ವರ್ತನೆಯ ಬಗ್ಗೆ ಅಭೂತಪೂರ್ವ ಒಳನೋಟಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ.

ಪತ್ರಿಕೆಗಳು ಜನರ ದನಿಯಾದರೆ ದೇಶದ ಪ್ರತಿಷ್ಠೆ ಹೆಚ್ಚಾಗುತ್ತದೆ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಅಭಿಮತ

ಮೈಸೂರು, ಆ.27(ಬಿಎಲ್‌ಯು)- ಪತ್ರಿಕೆಗಳು ಜನರ ಹಿತ ಕಾಯುವ ಹಾಗೆ ಜನರ ದನಿಯಾಗಿ ಬರೆದರೆ ದೇಶದ ಪ್ರತಿಷ್ಠೆ ಹೆಚ್ಚಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಪತ್ರಿಕೋದ್ಯಮ, ಕೈಗಾರಿಕೋದ್ಯಮಿಗಳು ಹಾಗೂ ಬಲಾಢ್ಯರ ಪರವಾದರೆ ಅವರ ದನಿ ಹೆಚ್ಚಾಗುತ್ತದೆ. ಅದೇ ಜನರ ದನಿಯಾಗಿ, ಜನರ ಹಿತ ಕಾಯುವ ಸಲಹೆಗಾರನಾಗಿ ಹಾಗೂ ರಾಷ್ಟ್ರ ಸಂರಕ್ಷಕನಾಗಿ ಕೆಲಸ ಮಾಡಿದರೆ ಆ ದೇಶದ ಪ್ರಜಾಪ್ರಭುತ್ವ ಗಟ್ಟಿಯಾಗುತ್ತದೆ ಎಂದು ಹೇಳಿದರು.

ದನಿ ಇಲ್ಲದ, ಶಕ್ತಿ ಇಲ್ಲದ, ಬೆಳಕು ಕಾಣದ ಹಾಗೂ ಅಸಮಾನತೆಯಿಂದ ತೊಳಲಾಡುತ್ತಿರುವವರ ಪರವಾಗಿ ಪತ್ರಿಕೆಗಳು ಕೆಲಸ ಮಾಡಬೇಕು. ಪತ್ರಿಕೆಗಳು ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿ ಕೆಲಸ ನಿರ್ವಹಿಸಬೇಕು. ಸಮಾಜ ಸುಧಾರಣೆಗೆ ಪೂರಕವಾಗಿ ಪತ್ರಕರ್ತರು ಕರ್ತವ್ಯ ನಿರ್ವಹಣೆ ಮಾಡಬೇಕು ಎಂದು ಡಾ.ಮಹದೇವಪ್ಪ ಸಲಹೆ ನೀಡಿದರು.

ವಾಕ್ ಸ್ವಾತಂತ್ರ್ಯದ ಪ್ರತೀಕವಾದ ಪತ್ರಿಕೆಗಳು ಯಶಸ್ವಿ ಪ್ರಜಾಪ್ರಭುತ್ವದ ಸಂಕೇತವಾಗಿದೆ. ಈ ಕಾರಣದಿಂದ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರು 'ಯಂಗ್ ಇಂಡಿಯಾ' ಹಾಗೂ 'ಹರಿಜನ ಪತ್ರಿಕೆ' ನಡೆಸುತ್ತಿದ್ದರು. ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರು 'ಮೂಕ ನಾಯಕ' ಹಾಗೂ 'ಬಹಿಷ್ಕೃತ ಭಾರತ' ಪತ್ರಿಕೆ ನಡೆಸುತ್ತಿದ್ದರು. ಹಿತವಲ್ಲದ ನಡವಳಿಕೆ ಇದ್ದರೆ ತಮ್ಮ ಪರಮಾಪ್ತರಾದರೂ ಅದನ್ನು ಸಹಿಸದೆ ಡಾ.ಅಂಬೇಡ್ಕರ್ ಅವರು ಮುಕ್ತವಾಗಿ ತಮ್ಮ ಪತ್ರಿಕೆಗಳಲ್ಲಿ ಬರೆಯುತ್ತಿದ್ದರು ಎಂದು ಡಾ.ಮಹದೇವಪ್ಪ ತಿಳಿಸಿದರು.

ಪ್ರಜಾಪ್ರಭುತ್ವದಲ್ಲಿ ವಾಕ್ ಸ್ವಾತಂತ್ರ್ಯವಿರಬೇಕು. ಒಂದು ವೇಳೆ ವಾಕ್ ಸ್ವಾತಂತ್ರ್ಯ ನಿಂತರೆ ಪ್ರಜಾಪ್ರಭುತ್ವದ ಉಸಿರು ನಿಂತಂತೆ. ಈ ಹಿನ್ನೆಲೆ ಪತ್ರಿಕಾ ರಂಗದ ಜವಾಬ್ದಾರಿ ಮಹತ್ತರವಾಗಿದೆ. ಇದನ್ನು ಅರಿತು ಪತ್ರಕರ್ತರು ಕೆಲಸ ಮಾಡಬೇಕು ಎಂದು ಡಾ.ಮಹದೇವಪ್ಪ ಸಲಹೆ ನೀಡಿದರು.

ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್, ಆರೋಗ್ಯ ವಿಮೆ ಸೇರಿದಂತೆ ಪತ್ರಕರ್ತರ ಹಲವು ಬೇಡಿಕೆ ಈಡೇರಿಸಲು ಪ್ರಯತ್ನಿಸುವುದಾಗಿ ಡಾ.ಮಹದೇವಪ್ಪ ಈ ಸಂದರ್ಭದಲ್ಲಿ ಭರವಸೆ ನೀಡಿದರು.

ಇದೇ ವೇಳೆ ಮಾತನಾಡಿದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರು, ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾದ ಪತ್ರಿಕಾ ರಂಗದ ಕಾರ್ಯ ಪ್ರಶಂಸನೀಯ. ಕೊರೊನಾ ವೇಳೆಯಲ್ಲಂತೂ ಪತ್ರಕರ್ತರು ಪ್ರಾಣದ ಹಂಗು ತೊರೆದು ಕರ್ತವ್ಯ ನಿರ್ವಹಿಸಿದ್ದಾರೆ ಎಂದರು. ಸುದ್ದಿ ಹಾಗೂ ಲೇಖನಗಳ ಮೂಲಕ ಪತ್ರಿಕೆಗಳು ಕನ್ನಡ ಭಾಷೆ ಹಾಗೂ ಸಾಹಿತ್ಯವನ್ನು ಗಟ್ಟಿಗೊಳಿಸುತ್ತಿವೆ ಎಂದು ಶ್ರೀಗಳು ಅಭಿಪ್ರಾಯಪಟ್ಟರು.

ಇದೇ ಸಮಯದಲ್ಲಿ ಮಾತನಾಡಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಮೈಸೂರಿನ ನೂತನ ಪತ್ರಕರ್ತರ ಭವನ ನಿರ್ಮಾಣಕ್ಕೆ ಮುಡಾ 9 ಗುಂಟೆ ಜಮೀನು ನೀಡುತ್ತಿದ್ದು, ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಪತ್ರಿಕಾ ದಿನಾಚರಣೆ ಅಂಗವಾಗಿ ಹಲವು ಪತ್ರಕರ್ತರನ್ನು ಈ ವೇಳೆ ಪುರಸ್ಕರಿಸಲಾಯಿತು. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಘೋಷಣೆ ಮಾಡಲಾಗಿದೆ. ನಿಗದಿತ ಸಮಯಕ್ಕೆ ಸರಿಯಾಗಿ ಗಣಪತಿ ಅವರು ಸಮಾರಂಭಕ್ಕೆ ಆಗಮಿಸಿದ್ದರು. ಆದರೆ ಸಮಾರಂಭ ನಡೆಯುವುದು ವಿಳಂಬವಾದ ಹಿನ್ನೆಲೆ ಅನ್ಯ ಕಾರ್ಯಕ್ರಮವಿದ್ದ ಕಾರಣ ಶುಭ ಹಾರೈಸಿ ನಿರ್ಗಮಿಸಿದರು.

ವರ್ಷದ ಕನ್ನಡ ವರದಿಗೆ ಎಂ.ವಿನೋದ್, ವರ್ಷದ ಕನ್ನಡ ವರದಿ (ಗ್ರಾಮಾಂತರ) ಡಿ.ಜೆ.ವಿನಯ್, ವರ್ಷದ ಇಂಗ್ಲಿಷ್ ವರದಿಗೆ ಪಿ. ಶಿಲ್ಪ, ವರ್ಷದ ಅತ್ಯುತ್ತಮ ಛಾಯಾಚಿತ್ರಕ್ಕೆ ಎಸ್.ಆರ್.ಮಧುಸೂದನ್, ವರ್ಷದ ಅತ್ಯುತ್ತಮ ವಿದ್ಯುನ್ಮಾನ ವರದಿಗೆ ಎಸ್.ಪುನೀತ್‌ಗೆ ಡಾ.ಮಹದೇವಪ್ಪ ಅವರು ಪ್ರಶಸ್ತಿ ನೀಡಿ ಗೌರವಿಸಿದರು.

ಇನ್ನು ಜೀವಮಾನದ ಸಾಧನೆಗೆ ಗಾಯತ್ರಿ ವಿ.ರಾಜ್, ವರ್ಷದ ಹಿರಿಯ ಉಪ ಸಂಪಾದಕನಾಗಿ ಶಿವಮೂರ್ತಿ ಜುಪ್ತಿಮಠ, ಹಿರಿಯ ಛಾಯಾಗ್ರಾಹಕ ಎಂ.ಎಸ್.ಬಸವಣ್ಣ ವರ್ಷದ ಗ್ರಾಮಾಂತರ ಪತ್ರಕರ್ತನಾಗಿ ದಾಸೇಗೌಡ, ವರ್ಷದ ಹಿರಿಯ ವರದಿಗಾರ ದೃಶ್ಯ ಮಾಧ್ಯಮದಿಂದ ಬಿ.ರಾಘವೇಂದ್ರ ವರ್ಷದ ಹಿರಿಯ ಕ್ಯಾಮರಾಮನ್ ಆಗಿ ಎಲ್. ಸತೀಶ್, ಮುದ್ರಣ ವಿಭಾಗದಿಂದ 'ಮೈಸೂರು ಮಿತ್ರ' ಪತ್ರಿಕೆಯ ಕುಮಾರ್‌ಗೆ ಸಚಿವ ಡಾ.ಮಹದೇವಪ್ಪ ಅವರು ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಮೇಯರ್ ಶಿವಕುಮಾರ್, ಜಿಎಸ್‌ಎಸ್ ಮಾಧ್ಯಮ ಸಂಸ್ಥೆಯ ಅಧ್ಯಕ್ಷ ಶ್ರೀಹರಿ ದ್ವಾರಕನಾಥ್ ಯೋಗಾತ್ಮ, ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಮಾನಸಗಂಗೋತ್ರಿ ರಾಣಿಬಹದ್ದೂರ್ ಸಭಾಂಗಣದಲ್ಲಿ ಭಾನುವಾರ ನಡೆದ ಪತ್ರಿಕಾ ದಿನಾಚರಣೆಯಲ್ಲಿ ಮಾಧ್ಯಮದ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಹಲವರನ್ನು ಅಭಿನಂದಿಸಲಾಯಿತು.

> ವಿಶ್ವದ 180 ದೇಶಗಳ ಪತ್ರಿಕಾ ಸ್ವಾತಂತ್ರ್ಯದ ಸೂಚ್ಯಂಕದಲ್ಲಿ ಭಾರತ ಈ ಹಿಂದೆ 150 ನೇ ಸ್ಥಾನದಲ್ಲಿತ್ತು. ಈ ವರ್ಷ ಭಾರತ 161ನೇ ಸ್ಥಾನದಲ್ಲಿದೆ. ಡಿವಿಜಿಯವರು ಹೇಳಿದಂತೆ ಎಲ್ಲಾ ಆಯಾಮಗಳಲ್ಲಿ ಪರಿಶೀಲನೆ ಮಾಡಿ ಪತ್ರಕರ್ತರು ಸುದ್ದಿ ಬರೆಯಬೇಕು. ಮಾಧ್ಯಮಗಳು ಹೊಗಳು ಭಟ್ಟ ಸ್ಥಾನದಲ್ಲಿ ಇರಬಾರದು.
> -ಡಾ.ಹೆಚ್.ಸಿ.ಮಹದೇವಪ್ಪ

ಕಾರ್ಡಿಯಾಲಜಿಕಲ್ ಬಗ್ಗೆ ವಾಟ್ಸಪ್ ಯೂನಿವರ್ಸಿಟಿಯಿಂದ ಗಾಳಿಸುದ್ದಿ ಹರಡುತ್ತಿದೆ

ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ವಿಷಾದ



ಮೈಸೂರು, ಆ.27(ಜಿಎ)-ಕೋವಿಡ್ ನಂತರ ವಾಟ್ಸಪ್ ಯೂನಿವರ್ಸಿಟಿಯಿಂದ ಕಾರ್ಡಿಯಾಲಜಿಕಲ್ ಬಗ್ಗೆ ಸಾಕಷ್ಟು ಗಾಳಿಸುದ್ದಿ ಹರಡಲಾಗುತ್ತಿವೆ ಎಂದು ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ವಿಷಾದಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಸೊಸೈಟಿ ಆಫ್ ಇಂಡಿಯಾ ಮೈಸೂರು ವಿಭಾಗದ ಬೆಳ್ಳಿ ಹಬ್ಬವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಾಟ್ಸಪ್ ಯೂನಿವರ್ಸಿಟಿ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಕಾರ್ಡಿಯಾಲಜಿ ಬಗ್ಗೆ ಗಾಳಿಸುದ್ದಿ ಹರಡುತ್ತಿದ್ದು, ಇದರಿಂದ ಕೋವಿಡ್ ನಂತರ ಯುವಜನರಲ್ಲಿ ಹೆಚ್ಚು ಆತಂಕ ಮೂಡುತ್ತಿದೆ. ಜಿಮ್‌ಗೆ ಹೋದರೂ ಕಷ್ಟ ಹೋಗದಿದ್ದರೂ ಕಷ್ಟ ಎಂಬ ಗೊಂದಲ ಯುವಜನರಲ್ಲೂ ಮತ್ತು ವೈದ್ಯರಲ್ಲೂ ಉಂಟಾಗುತ್ತಿದ್ದು, ಇದಕ್ಕೆ ವಾಟ್ಸಪ್ ಯೂನಿವರ್ಸಿಟಿಯೇ ಕಾರಣವಾಗಿದೆ ಎಂದರು.

ಕಾರ್ಡಿಯಾಲಜಿಯ ಬಗ್ಗೆ ಜನರು ಗೊಂದಲದಲ್ಲಿದ್ದು, ನಿಜವನ್ನು ತಜ್ಞರು ತಿಳಿಸಬೇಕು. ಜಾಗೃತಿ ಮೂಡಿಸಬೇಕು. ಕೋವಿಡ್ ನಂತರ ಬಹಳ ಅಧ್ಯಯನ ನಡೆದಿದೆ. ಆ ವರದಿಗಳು ಹೊರಬರಬೇಕಿದೆ. ಅದರಿಂದ ಗೊಂದಲಗಳನ್ನು ಹೋಗಲಾಡಿಸಬೇಕು. ಕೋವಿಡ್ ನಂತರದ ಜನರನ್ನು ಸರಿದಾರಿಗೆ ತೆಗೆದುಕೊಂಡು ಹೋಗುವ ಜವಾಬ್ದಾರಿ ಕಾರ್ಡಿಯಾಲಜಿಸ್ಟ್‌ಗಳ ಮೇಲಿದೆ. ಜೀವನಶೈಲಿಯಿಂದ ಮಧುಮೇಹ ಮೊದಲಾದ ಆರೋಗ್ಯ ಸಮಸ್ಯೆಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ ಎಂದು ತಿಳಿಸಿದರು.

ಈ ರೀತಿ ಕಾರ್ಯಕ್ರಮ ಆಯೋಜಿಸಿರುವುದರಿಂದ ಜನರಿಗೆ ಆರೋಗ್ಯ ಸಮಸ್ಯೆಗಳ ಬಗ್ಗೆ ನೈಜ ಸ್ಥಿತಿ ತಿಳಿಯುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ, ನಾವು ನಿಮ್ಮೊಟ್ಟಿಗೆ ಇರುತ್ತೇವೆಂದರು.

ಕಾರ್ಯಕ್ರಮದಲ್ಲಿ ಕಾರ್ಡಿಯಾಲಜಿಕಲ್ ಸೊಸೈಟಿ ಆಫ್ ಇಂಡಿಯಾ ಮೈಸೂರು ವಿಭಾಗದ 12 ಮಂದಿ ಸಂಸ್ಥಾಪಕ ಸದಸ್ಯರು ಮತ್ತು 20ಕ್ಕೂ ಅಧಿಕ ಮಾಜಿ ಅಧ್ಯಕ್ಷರನ್ನು ಅಭಿನಂದಿಸಲಾಯಿತು. ವಿವಿಧ ವೈದ್ಯಕೀಯ ಆವಿಷ್ಕಾರಗಳ ಬಗ್ಗೆ ತಜ್ಞ ವೈದ್ಯರು ಉಪನ್ಯಾಸ ನೀಡಿದರು.

ಮುಖ್ಯ ಅತಿಥಿಗಳಾಗಿ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಮತ್ತು ವಿಭಾಗದ ಮುಖ್ಯಸ್ಥರಾದ ಡಾ.ಟಿ.ಆರ್. ರಘು, ಕಾರ್ಡಿಯಾಲಜಿಕಲ್ ಸೊಸೈಟಿ ಆಫ್ ಇಂಡಿಯಾ ರಾಜ್ಯ ಶಾಖೆಯ ಅಧ್ಯಕ್ಷ ಡಾ.ಬಿ.ಕೆ.ಮಹಾಲ, ಕಾರ್ಯಕಾರಿ ಸಮಿತಿ ಸದಸ್ಯ ಡಾ.ಟಿ.ಹೆಚ್.ನಟೇಶ್ ಮತ್ತು ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆ ಹೃದ್ರೋಗ ತಜ್ಞ ಅಧ್ಯಕ್ಷ ಡಾ.ವಿವೇಕ್ ಜವಳಿ, ಸಂಸ್ಥೆಯ ಅಧ್ಯಕ್ಷೆ ಡಾ.ಜೆ. ವೀನು, ಕಾರ್ಯದರ್ಶಿ ಡಾ.ಎಸ್. ಹೇಮಾ, ಉಪಾಧ್ಯಕ್ಷೆ ಡಾ.ಡಿ.ಶಶಿರೇಖಾ ಸೇರಿದಂತೆ ಮತ್ತಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.


ಕಾಶ್ಮೀರದತ್ತ ತೆರಳಿದ ರಾಜ್ಯ ಪುರುಷರ ಹ್ಯಾಂಡ್‌ಬಾಲ್ ತಂಡ



ಮೈಸೂರು, ಆ.27(ಜಿಎ)-ಜಮ್ಮು ಕಾಶ್ಮೀರದ ಶ್ರೀನಗರದಲ್ಲಿ ಸೆಪ್ಟೆಂಬರ್ 1ರಿಂದ 5ರವರೆಗೆ ನಡೆಯಲಿರುವ 52ನೇ ರಾಷ್ಟ್ರಮಟ್ಟದ ಪುರುಷರ ಹ್ಯಾಂಡ್ ಬಾಲ್ ಪಂದ್ಯಾವಳಿಗೆ ಕರ್ನಾಟಕ ತಂಡ ಭಾನುವಾರ ಜಮ್ಮು ಕಾಶ್ಮೀರದತ್ತ ಸಾಗಿದೆ.

ಕಳೆದ 15 ದಿನಗಳಿಂದ ರಾಜ್ಯ ವಿವಿಧ ಭಾಗದಿಂದ ಸ್ಪರ್ಧೆಯಲ್ಲಿ ಭಾಗವಹಿಸಲು ಆಗಮಿಸಿದ್ದ 18 ಸ್ಪರ್ಧಿಗಳು ಕರ್ನಾಟಕ ರಾಜ್ಯ ಹ್ಯಾಂಡ್‌ಬಾಲ್ ಅಸೋಸಿಯೇಷನ್ ಹಾಗೂ ಮಂಡ್ಯ ಜಿಲ್ಲಾ ಹ್ಯಾಂಡ್‌ಬಾಲ್ ಅಸೋಸಿಯೇಷನ್ ಮತ್ತು ಅಚೀವರ್ಸ್ ಅಕಾಡೆಮಿ ಇವರ ವತಿಯಿಂದ ಶ್ರೀರಂಗಪಟ್ಟಣದ ಸ್ಟೇಡಿಯಂನಲ್ಲಿ ತರಬೇತಿ ಮುಗಿಸಿ ಭಾನುವಾರ ರೈಲಿನ ಮೂಲಕ ಜಮ್ಮು ಕಾಶ್ಮೀರದ ಶ್ರೀನಗರಕ್ಕೆ ತೆರಳಿದರು.

ಈ ವೇಳೆ ಕ್ರೀಡಾಪಟುಗಳಿಗೆ ಹಿರಿಯ ಗಾಂಧಿವಾದಿಗಳು ಹಾಗೂ ಖ್ಯಾತ ವೈದ್ಯರೂ ಆದ ಡಾ.ಸುಜಯ್ ಕುಮಾರ್, ಶ್ರೀರಂಗಪಟ್ಟಣ ಗ್ರಾಮೀಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್, ಶ್ರೀರಂಗ ನಾಯಕಿ ಸಮಾಜದ ಮುಖ್ಯಸ್ಥೆ ಆಶಾಲತಾ ಪುಟ್ಟೇಗೌಡರು, ಕರ್ನಾಟಕ ರಾಜ್ಯ ಹ್ಯಾಂಡ್‌ಬಾಲ್ ಅಸೋಸಿಯೇಷನ್ ಗೌರವ ಕಾರ್ಯದರ್ಶಿ ಬಿ.ಎನ್. ಲೋಕೇಶ್, ಜಿಲ್ಲಾ ಹ್ಯಾಂಡ್‌ಬಾಲ್ ಅಸೋಸಿಯೇಷನ್ ಗೌರವ ಅಧ್ಯಕ್ಷ ನಿತ್ಯಾನಂದ, ತರಬೇತಿದಾರ ಡಾ.ರಾಘವೇಂದ್ರ, ತಂಡದ ವ್ಯವಸ್ಥಾಪಕ ಮಹೇಶ್, ನಿರ್ದೇಶಕ ದೇವರಾಜ ಮುಂತಾದವರು ಶುಭ ಹಾರೈಸಿದರು.



ಅನಾರೋಗ್ಯದಿಂದ ಬಳಲುತ್ತಿದ್ದ ಜಯಪುರ ಗ್ರಾಮದ ಉಮಾ ಮತ್ತು ಬಂಡಳ್ಳಿ ಕುಮಾರ್ ಅವರಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ವೈಯಕ್ತಿಕವಾಗಿ ತಲಾ ಐದು ಸಾವಿರ ರೂ.ಗಳ ಆರ್ಥಿಕ ನೆರವು ನೀಡಿದರು. ಈ ವೇಳೆ ಶಿವಣ್ಣ, ಸಂತೋಷ್ ಕುಮಾರ್, ಶಿವರಾಜು, ಗಿರೀಶ್, ಚಂದ್ರು, ಶೇಷ, ಪ್ರಕಾಶ್, ಚಾಮರಾಜು ಇದ್ದರು.

'ಚಿಟಿಗಾನಪುರಿ ಚಾರಣ', 'ರಾಮನ ಆಧ್ಯಾತ್ಮಿಕ ಸಾಧನೆಯ ಬೆಳಕು ನೆರಳುಗಳು' ಕೃತಿಗಳ ಬಿಡುಗಡೆ

ಭಾವನೆ ಹಂಚಿಕೊಳ್ಳಲು 'ಸಾಹಿತ್ಯ' ಅತ್ಯಂತ ಶ್ರೇಷ್ಠ ಮಾಧ್ಯಮ

ಸಂಸ್ಕೃತ ಪ್ರಾಧ್ಯಾಪಕ ಡಾ.ಜಯಶಂಕರ ಕಂಗಣ್ಣಾರು



ಮೈಸೂರು,ಆ.27(ಪಿಎಂ)- ಭಾವನೆಗಳನ್ನು ಹಂಚಿಕೊಳ್ಳಲು 'ಸಾಹಿತ್ಯ' ಅತ್ಯಂತ ಶ್ರೇಷ್ಠ ಮಾಧ್ಯಮ. ನಮ್ಮ ಬದುಕು ಸಾರ್ಥಕಗೊಳಿಸಿಕೊಳ್ಳಲು ಇರುವ ಮಾಧ್ಯಮವೆಂದರೆ ಒಂದು ಸಾಹಿತ್ಯ, ಮತ್ತೊಂದು ನಾವು ಸಮಾಜಕ್ಕೆ ನೀಡುವ ಕೊಡುಗೆ ಎಂದು ಉಡುಪಿ ಜಿಲ್ಲೆಯ ಅದಮಾರು ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ.ಜಯಶಂಕರ ಕಂಗಣ್ಣಾರು ಹೇಳಿದರು.

ಮೈಸೂರಿನ ಲಕ್ಷ್ಮೀಪುರಂನ ಗೋಪಾಲಸ್ವಾಮಿ ಶಿಶುವಿಹಾರ ಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ ಸಂಸ್ಕೃತಿ ಪ್ರಕಾಶನದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಡಾ.ಪುರುಷೋತ್ತಮ ಆರ್.ತಿಮ್ಮಪ್ಪ ಅವರ 'ಚಿಟಿಗಾನಪುರಿ ಚಾರಣ' ಮತ್ತು 'ರಾಮನ ಆಧ್ಯಾತ್ಮಿಕ ಸಾಧನೆಯ ಬೆಳಕು ನೆರಳುಗಳು' ಕೃತಿಗಳ ಬಿಡುಗಡೆ ಸಮಾರಂಭದಲ್ಲಿ 'ರಾಮನ ಆಧ್ಯಾತ್ಮಿಕ ಸಾಧನೆಯ ಬೆಳಕು ನೆರಳುಗಳು' ಕೃತಿ ಕುರಿತು ಮಾತನಾಡಿದ ಅವರು, ಭಾವಸಹಿತವಾದದ್ದನ್ನು ಸಾಹಿತ್ಯ ಎಂದು ಕರೆಯಲಾಗುತ್ತದೆ. ಮನುಷ್ಯನ ಬದುಕು ಸಾರ್ಥಕವಾಗಲು ಸಾಹಿತ್ಯ, ಸಂಗೀತ ಮತ್ತು ಕಲೆ ಅಗತ್ಯ ಇಲ್ಲವಾದರೆ ಮನುಷ್ಯನ ಜೀವನದಲ್ಲಿ ಚೈತನ್ಯವೇ ಇರುವುದಿಲ್ಲ ಎಂದರು.

'ರಾಮನ ಆಧ್ಯಾತ್ಮಿಕ ಸಾಧನೆಯ ಬೆಳಕು ನೆರಳುಗಳು' ಶೀರ್ಷಿಕೆಯ ಪುಸ್ತಕದಲ್ಲಿ ರಾಮ ಎಂದರೆ ಪ್ರಾಯಶಃ ಕೃತಿ ಕರ್ತೃಗಳೇ ಆಗಿದ್ದಾರೆ. ರಾಮನಿಗೆ ಈಗ 62 ತುಂಬಿದೆ ಎಂದು ಉಲ್ಲೇಖಿಸಿರುವ ಸಾಲುಗಳಿಂದ ಇದು ಸ್ಪಷ್ಟವಾಗುತ್ತದೆ. ಲೇಖಕರ ಹೆಸರು ಪುರುಷೋತ್ತಮ. ರಾಮ ಎಂದರೂ ಪುರುಷೋತ್ತಮನೇ ಹೌದು. ವಿಷ್ಣುವಿನ 10 ಅವತಾರಗಳಲ್ಲಿ ಕೃಷ್ಣ ಮತ್ತು ರಾಮ ಎಂಬುವು ಪೂರ್ಣ ಅವತಾರಗಳು. ಉಳಿದವು ಸಾಂದರ್ಭಿಕವಾದವು ಎಂದು ಹೇಳಿದರು.

ಕೃಷ್ಣನು ಮನುಷ್ಯನನ್ನು ಮೀರಿದ ಭಗವದ್ ಸ್ವರೂಪಿ. ಆದರೆ ರಾಮ, ನಮ್ಮ ನಿಮ್ಮಂತೆ ಮನುಷ್ಯನಿಂದ ಮಾಡಲಾಗುವ ಪ್ರಕ್ರಿಯೆಯನ್ನೇ ಮಾಡಿದ್ದಾನೆ. ಆಧ್ಯಾತ್ಮಿಕ ಬೆಳಕು ಕಾಣುವವರಲ್ಲಿ ಬ್ರಹ್ಮಾನಂದ ಉಂಟಾಗಲಿದೆ. ಇದನ್ನು ಈ ಪುಸ್ತಕದಲ್ಲಿ ಲೇಖಕರು ಉಲ್ಲೇಖಿಸಿದ್ದಾರೆ. ಆಧ್ಯಾತ್ಮ ಶ್ರೇಷ್ಠ. ಅದು ನೀಡುವ ನೆಮ್ಮದಿ ಶಾಶ್ವತ. ಅದರಿಂದ ದುಃಖದ ಸ್ಥಿತಿ ಉದ್ಭವವಾಗದು ಎಂದರು.

'ಚಿಟಿಗಾನಪುರಿ ಚಾರಣ' ಕುರಿತು ಮಾತನಾಡಿದ ಲೇಖಕ ಪಿ.ಎಸ್.ಲಕ್ಷ್ಮೀನಾರಾಯಣ ರಾವ್, ಚಿಟಿಗಾನಪುರಿ ಚಾರಣ ಕೃತಿಯ ಪರಿಷ್ಕರಣೆ ಸಹ ಮಾಡಿದ್ದೇನೆ. ಅಲ್ಲದೆ, ಮುನ್ನುಡಿಯನ್ನೂ ಬರೆದಿದ್ದೇನೆ. ಪ್ರತಿಯೊಬ್ಬರ ಜೀವನದಲ್ಲಿ ಬಾಲ್ಯಾವಸ್ಥೆಯು ಮಹತ್ತರ ಪಾತ್ರ ವಹಿಸುತ್ತದೆ. ಈ ಕೃತಿಯಲ್ಲಿ ಪುರುಷೋತ್ತಮ ಅವರು ತಮ್ಮ ಬಾಲ್ಯದ ಮೇಲೆ ಬೆಳಕು ಚೆಲ್ಲಿದ್ದಾರೆ. ಕೃತಿಯು ಒಟ್ಟು 176 ಪುಟಗಳನ್ನು ಒಳಗೊಂಡಿದ್ದು, ಈ ಪೈಕಿ ಸುಮಾರು 100ಕ್ಕೂ ಹೆಚ್ಚು ಪುಟಗಳಲ್ಲಿ ಬಾಲ್ಯದ ಅನುಭವಗಳ ಬಗ್ಗೆಯೇ ಬರೆದಿದ್ದು, ಅವು ಸ್ವಾರಸ್ಯಕರ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪುರುಷೋತ್ತಮ್ ಕೆಲವೊಮ್ಮೆ ಕಟ್ಟುಕಥೆ ಹಾಗೂ ಮೌಢ್ಯಗಳನ್ನು ಸಮರ್ಥಿಸುವ ರೀತಿಯಲ್ಲಿ ಕೆಲ ಉಲ್ಲೇಖಗಳನ್ನು ಕೃತಿಯಲ್ಲಿ ನೀಡಿದ್ದಾರೆ. ಜೊತೆಗೆ ಅತಾರ್ಕಿಕ ಅಂಶಗಳೂ ಇವೆ ಎಂದರು.

ಆಶಯ ನುಡಿಗಳನ್ನಾಡಿದ ಸಂಸ್ಕೃತಿ ಪ್ರಕಾಶನದ ಪ್ರಕಾಶಕ ಸಂಸ್ಕೃತಿ ಸುಬ್ರಹ್ಮಣ್ಯ, ಪುಸ್ತಗಳಲ್ಲಿರುವುದೇ ಅಂತಿಮ ಸತ್ಯ ಎಂಬುದು ಲೇಖಕರ ಅಭಿಮತವಲ್ಲ. ಬದಲಿಗೆ ಅವು ಚರ್ಚೆಯಾಗಬೇಕೆಂಬುದು ಲೇಖಕರ ಉದ್ದೇಶ. ಈ ಪುಸ್ತಕಗಳ ಕುರಿತು ಚರ್ಚೆಗೂ ಮುಂದೆ ಕಾರ್ಯಕ್ರಮ ರೂಪಿಸಲಾಗುವುದು ಎಂದರು.

> ಡಾ.ಪುರುಷೋತ್ತಮ ಆರ್.ತಿಮ್ಮಪ್ಪ ತಮ್ಮ ಜೀವನದ ಬೆಳವಣಿಗೆ, ಬದಲಾವಣೆ ಬಗ್ಗೆ ಮುಕ್ತ ಮನಸ್ಸಿನಿಂದ ದಾಖಲಿಸಿದ್ದಾರೆ. ಈ ರೀತಿ ಇದ್ದದ್ದನ್ನು ಇದ್ದ ಹಾಗೆ ಹೇಳುವುದು ಆತ್ಮಕಥೆಗಳಲ್ಲಿ ಅಪರೂಪ ಈ 'ಚಿಟಿಗಾನಪುರಿ ಚಾರಣ'ಯನ್ನು ಆತ್ಮಕಥೆ ಎನ್ನಲಾಗದು. ಆತ್ಮಕಥಾನಕ ಎನ್ನಬಹುದು. ಇಂಗ್ಲಿಷ್ ಭಾಷೆಯಲ್ಲಿ 'ಮೆಮೋಯಿರ್' ಎನ್ನುವ ಗುಂಪಿಗೆ ಈ ಕೃತಿ ಸೇರಿಸಬಹುದು.
> -ಪಿ.ಎಸ್.ಲಕ್ಷ್ಮೀನಾರಾಯಣ ರಾವ್

ಕೃತಿಗಳ ಕರ್ತೃ ಡಾ.ಪುರುಷೋತ್ತಮ ಆರ್.ತಿಮ್ಮಪ್ಪ ಮಾತನಾಡಿ, ಉತ್ತರ ಭಾರತದಲ್ಲಿ ಯಾರೇ ಪರಸ್ಪರ ಸಂದರ್ಶಿಸಿದರೆ ಇಬ್ಬರೂ 'ರಾಮ್ ರಾಮ್' ಎನ್ನುತ್ತಾರೆ. ಎಲ್ಲರಲ್ಲೂ ರಾಮನಿದ್ದಾನೆ. ರಾಮ ಅಷ್ಟು ಸಾಮಾನ್ಯ 'ರಾಮ ಮಂತ್ರ' ಜಪಿಸುವುದರಿಂದ ಖಂಡಿತವಾಗಲೂ ಮೋಕ್ಷ ದೊರೆಯಲಿದೆ ಎಂದು ತಿಳಿಸಿದರು. ಇದಕ್ಕೂ ಮುನ್ನ ಎರಡೂ ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಪ್ರಾಧ್ಯಾಪಕಿ ಪ್ರೊ.ಟಿ.ಕೆ.ಸುಂದರಲಕ್ಷ್ಮಿ, ಪುಸ್ತಕ ವಿಮರ್ಶಕ ಸಿ.ಪಿ.ವಿ.ಗುಪ್ತ, ಆರ್‌ಐಇ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕರಾದ ಡಾ.ಪಿ.ಆರ್.ಹರಿನಾಥ್, ಡಾ.ಮಂಜುಳಾ ಪಿ.ರಾವ್ ಮತ್ತಿತರರು ಹಾಜರಿದ್ದರು.

ಆ.30, ಮೈಸೂರಲ್ಲಿ ಗೃಹಲಕ್ಷ್ಮಿ ಯೋಜನೆಗೆ ಚಾಲನೆ

ಮಹಿಳಾ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಸಚಿವೆ ಮನವಿ

ನಂಜನಗೂಡು, ಆ.27– ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಲ್ಲೊಂದಾದ ಗೃಹಲಕ್ಷ್ಮಿ ಯೋಜನೆಗೆ ಆ.30 ರಂದು ಮೈಸೂರಿನಲ್ಲಿ ಅಧಿಕೃತ ಚಾಲನೆ ನೀಡಲಾಗುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಫಲಾನುಭವಿಗಳು ಭಾಗಿಯಾಗುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಮನವಿ ಮಾಡಿದ್ದಾರೆ.



ನಗರದ ಪ್ರವಾಸಿ ಮಂದಿರದಲ್ಲಿ ತಾಲೂಕು ಆಡಳಿತ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಕಾಂಗ್ರೆಸ್ ಪಕ್ಷ ಹಿಂದಿನಿಂದಲೂ ಸಹ ಮಹಿಳೆಯರ ಸಬಲೀಕರಣಕ್ಕೆ ದುಡಿದ ಪಕ್ಷವಾಗಿದೆ ಇಂದಿರಾಗಾಂಧಿ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಲ್ಲದೆ ದೇಶದ ಪ್ರಧಾನಿಯಾಗಿ 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೊಳಿಸಿದ್ದು ವಿಶ್ವದಲ್ಲೇ ಹೆಸರುವಾಸಿಯಾಗಿದೆ ಎಂದರು.

ಅದೇ ರೀತಿ ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರ್ಕಾರ ಮಹಿಳೆಯರಿಗೆ ಗೌರವ ನೀಡುವ ಸಲುವಾಗಿ ಮತ್ತು ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ರೂಪಿಸುವ ಸಲುವಾಗಿ ಗೃಹಲಕ್ಷ್ಮಿ ಯೋಜನೆಯನ್ನು ಜಾರಿಗೆ ತಂದಿದೆ. ಶಕ್ತಿಯೋಜನೆ, ಗೃಹಲಕ್ಷ್ಮಿ, ಅನ್ನಭಾಗ್ಯ, ಗೃಹಜ್ಯೋತಿ ಕಾರ್ಯಕ್ರಮಗಳನ್ನು ಯಾವುದೇ ಸರ್ಕಾರ ಬಂದರೂ ಸಹ ತೆಗೆದು ಹಾಕಲು ಸಾಧ್ಯವಿಲ್ಲ. ಅವು ಮುಂದುವರಿಯಲಿವೆ. ಕಾಂಗ್ರೆಸ್ ಸರ್ಕಾರ ಈ ಮೊದಲು ಮಾಡಿರುವ ಎಲ್ಲಾ ಯೋಜನೆಗಳು ಸಹ ಖಾಯಂ ಆಗಿ ಜನರ ಜೀವನಕ್ಕೆ ಉಪಯೋಗವಾಗುವಂತಹ ಯೋಜನೆಗಳೇ ಆಗಿವೆ. ನರೇಗಾ ಯೋಜನೆ ಇನ್ನೂ ಮುಂದುವರೆಯುತ್ತಿರುವುದೇ ಇದಕ್ಕೆ ನಿದರ್ಶನ ಎಂದರು.

ಗೃಹಲಕ್ಷ್ಮಿ ಯೋಜನೆಯನ್ನು ಸಿಎಂ ಹಾಗೂ ಡಿಸಿಎಂ ನೇತೃತ್ವದಲ್ಲಿ ಬೆಳಗಾವಿ ಜಿಲ್ಲೆಯಲ್ಲೇ ಚಾಲನೆ ನೀಡಬೇಕು ಎಂದು ನಿರ್ಣಯಿಸಿ ಎಲ್ಲಾ ರೀತಿಯ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಆದರೆ ತಾಯಿ ಚಾಮುಂಡೇಶ್ವರಿ ಹಾಗೂ ಶ್ರೀ ನಂಜುಂಡೇಶ್ವರನ ಆಶೀರ್ವಾದದಿಂದ ಮೈಸೂರಿಗೆ ಸ್ಥಳಾಂತರಗೊಂಡು ಆ.30ರಂದು ಚಾಲನೆ ನೀಡಲಾಗುತ್ತಿದೆ ಈ ಕಾರ್ಯಕ್ರಮ ಹಬ್ಬದ ರೀತಿ ಸಂಭ್ರಮದಿಂದ ಜಾರಿಗೊಳಿಸಲು ಎಲ್ಲರೂ ಸಹ ಮನೆ ಮುಂದೆ ರಂಗೋಲೆ ಬಿಡಿಸಿ ಸಂಭ್ರಮದಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು, ಕಾರ್ಯಕ್ರಮಕ್ಕೆ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮಹಿಳಾ ಫಲಾನುಭವಿಗಳನ್ನು ಕರೆತರುವಲ್ಲಿ ನಮ್ಮ ಇಲಾಖೆ ಅಧಿಕಾರಿಗಳು ಹಾಗೂ ತಾಲೂಕು ಆಡಳಿತ ಹೆಚ್ಚು ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ತಾಕೀತು ಮಾಡಿದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಕಾಂಗ್ರೆಸ್ ಪಕ್ಷದ ಭರವಸೆಯ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಗೆ ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ಚಾಲನೆಗೊಳ್ಳುತ್ತಿರುವುದು ಹೆಮ್ಮೆಯ ವಿಚಾರ. ಕಾರ್ಯಕ್ರಮದಲ್ಲಿ 1 ಲಕ್ಷ 50 ಸಾವಿರ ಜನ ಸೇರುವ ನಿರೀಕ್ಷೆ ಇದೆ. ಕಾರ್ಯಕ್ರಮ ಯಶಸ್ವಿಗೊಳ್ಳಲು ಎಲ್ಲ ರೀತಿಯ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ತಾಲೂಕಿನಿಂದ ಹೆಚ್ಚು ಜನ ಫಲಾನುಭವಿಗಳು ಭಾಗವಹಿಸುವ ಸಲುವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಪ್ರತಿ ಗ್ರಾಪಂಗೆ 3 ಉಚಿತ ಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಜೊತೆಗೆ ಕುಡಿಯುವ ನೀರು ಊಟ ತಿಂಡಿ ವ್ಯವಸ್ಥೆಯನ್ನು ಮಾಡಲಾಗಿದೆ. ಹಾಗಾಗಿ ನಮ್ಮ ಕ್ಷೇತ್ರದಿಂದ ಹೆಚ್ಚು ಮಹಿಳಾ ಫಲಾನುಭವಿಗಳನ್ನು ಕರೆ ತರಲು ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು ಮುಂದಾಗಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ನಿರ್ದೇಶಕ ಬಸವರಾಜ್, ತಹಸಿಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ರಾಜೇಶ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸಿಎಂ ಶಂಕರ್, ಶ್ರೀಕಂಠ ನಾಯಕ, ಜಿಪಂ ಮಾಜಿ ಸದಸ್ಯೆ ಲತಾಸಿದ್ಧಶೆಟ್ಟಿ, ಮುಖಂಡರಾದ ದೊರೆಸ್ವಾಮಿನಾಯಕ, ನಾಗೇಶ್ ರಾಜ್, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ದಲಿತರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣ ಗ್ಯಾರಂಟಿ ಯೋಜನೆಗೆ ಬಳಕೆ

ರಾಜ್ಯ ಸರ್ಕಾರದಿಂದ ಸಂವಿಧಾನ ವಿರೋಧಿ ಆಡಳಿತ



ತಿ.ನರಸೀಪುರ, ಆ.27– ಅಹಿಂದ ವರ್ಗದ ಪರ ಎಂದು ಹೇಳಿ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ದಲಿತರ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ 11,114 ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸುವ ಮೂಲಕ ಸಂವಿಧಾನ ವಿರೋಧಿ ಕೆಲಸ ಮಾಡುತ್ತಿದೆ ಎಂದು ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ ಕಿಡಿಕಾರಿದ್ದಾರೆ.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಮೊದಲನೇ ಬಾರಿ ಮುಖ್ಯಮಂತ್ರಿಯಾಗಿದ್ದ ವೇಳೆ ದುರುದ್ದೇಶ ಪೂರಕವಾಗಿ ಎಸ್ಸಿಪಿ ಟಿಎಸ್ಪಿ ಹಣ ದುರುಪಯೋಗ ಪಡಿಸಿಕೊಳ್ಳಲು 7 ಡಿ ಕಾಂಯ್ದೆಯನ್ನು ಅನವಶ್ಯಕವಾಗಿ ಅಳವಡಿಸಿದ್ದರು. ಈಗ ಅವರು ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದಾರೆ.

ಬಜೆಟ್ ಕುರಿತ ಭಾಷಣದಲ್ಲಿ ದಲಿತರ ಅಭಿವೃದ್ಧಿಗೆ ಮಾರಕವಾಗಿರುವ 7ಡಿ ಕಾಯ್ದೆಯನ್ನು ರದ್ದು ಮಾಡುವುದಾಗಿ ಹೇಳಿ ಇನ್ನೂ ಕಾರ್ಯರೂಪಕ್ಕೆ ತಂದಿಲ್ಲ. ಕಾಯ್ದೆ ರದ್ದಾದರೆ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಹಣ ಬಳಸಿಕೊಳ್ಳಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ದಲಿತರ ಕಣ್ಣೊರೆಸುವ ನಾಟಕ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.



ಕಂಪಲಾಪುರ ಸಹಕಾರ ಸಂಘದ ಚುನಾವಣೆ: ಜೆಡಿಎಸ್ ಜಯಭೇರಿ

ಕಂಪಲಾಪುರ, ಆ.27– ತೀವ್ರ ಕುತೂಹಲ ಕೆರಳಿಸಿದ್ದ ಕಂಪಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ 12 ಸ್ಥಾನಗಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ 11 ಜೆಡಿಎಸ್ ಬೆಂಬಲಿತರು ಗೆಲುವು ಸಾಧಿಸಿದ್ದು, ಕಾಂಗ್ರೆಸ್ ಬೆಂಬಲಿತರು ಕೇವಲ ಒಂದು ಸ್ಥಾನದಲ್ಲಿ ಮಾತ್ರ ಗೆಲುವು ಸಾಧಿಸಿದ್ದಾರೆ.

ಮತದಾನ ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ನಡೆಯಿತು. 12 ಸ್ಥಾನಕ್ಕೆ 24 ಮಂದಿ ಕಣದಲ್ಲಿದ್ದರಿಂದ ಅದೇ ದಿನ ಮತಎಣಿಕೆ ನಡೆದು ಫಲಿತಾಂಶ ರಾತ್ರಿ 7ಕ್ಕೆ ಹೊರಬಿದ್ದಿತು. ಸಾಲಗಾರರ ಕ್ಷೇತ್ರ ಸಾಮಾನ್ಯ, ಕೆಕುಮಾರ್(498), ನಾಗೇಗೌಡ(468), ಪ್ರಕಾಶ್(425), ಕೆ.ಎಂ.ಲಕ್ಷ್ಮಣ್(409), ಸಂತೋಷ್ (402) ಹಿಂವ 'ಅ' –ಮಹದೇವ (434), ಮಹದೇವ (406), ಪ.ಜಾತಿ – ತಮ್ಮಯ್ಯ ಬಿ.ಕೆ (410), ಪ.ಪಂ.– ರವಿ.ಕೆ.ಜಿ (362), ಮಹಿಳಾ ಮೀಸಲು– ಮಣಿ ಮಹೇಶ್(423), ಭಾಗ್ಯ ರಾಜೇಗೌಡ (376), ಸಾಲಗಾರರಲ್ಲದ ಕ್ಷೇತ್ರದಿಂದ ಕೆ.ಎನ್.ಗಿರೀಶ್ 141 ಮತ ಪಡೆದು ಜಯಗಳಿಸಿದ್ದಾರೆ.

ಜೆಡಿಎಸ್ ಬೆಂಬಲಿತರು ಜೈಕಾರ ಕೂಗಿ ವಿನಾಯಕ ಸರ್ಕಲ್‌ನಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಇದೇ ಸಂದರ್ಭದಲ್ಲಿ ಸಹಕಾರ ಸಂಘದ ಮಾಜಿ ಅಧ್ಯಕ್ಷ ಕೆ.ಎನ್. ಜಯಣ್ಣ, ಪುಟ್ಟೇಗೌಡ, ಬೀರೇಶ್, ವೆಂಕಟೇಶ್, ಸತ್ಯನಾರಾಯಣ, ಗ್ರಾಪಂ ಮಾಜಿ ಅಧ್ಯಕ್ಷ ಆಸೀಫ್, ಕೃಷ್ಣ, ವಜೀರ್ ಖಾನ್, ಲೋಕೇಶ್, ಭರತ್, ಹರೀಶ್, ಸೂರಿ, ಆನಂದ್, ಡೇರಿ ಅಧ್ಯಕ್ಷ ನಜೀಬ್, ಉಮೇಶ್, ಪರಮೇಶ್ ಇತರರಿದ್ದರು.

ಗ್ರಾಮೀಣ ಜನರ ಆರೋಗ್ಯ ರಕ್ಷಣೆಗೆ ಜೆಎಸ್ಎಸ್ ಆಸ್ಪತ್ರೆ ಸಂಜೀವಿನಿ

ಸರಗೂರಲ್ಲಿ ಉಚಿತ ಆರೋಗ್ಯ ಶಿಬಿರದಲ್ಲಿ 600 ಮಂದಿಗೆ ಚಿಕಿತ್ಸೆ

ಸರಗೂರು, ಆ.27– ಗ್ರಾಮೀಣ ಭಾಗದ ಜನರ ಆರೋಗ್ಯ ರಕ್ಷಣೆಗೆ ಜೆಎಸ್ಎಸ್ ಆಸ್ಪತ್ರೆ ಸಂಜೀವಿನಿಯಾಗಿದೆ ಎಂದು ಜೆಎಸ್ಎಸ್ ಶ್ವಾಸಕೋಶ ತಜ್ಞ ಡಾ.ಜಯರಾಜ್ ತಿಳಿಸಿದರು.

ಜೆಎಸ್ಎಸ್ ಆಸ್ಪತ್ರೆ ಮೈಸೂರು ವತಿಯಿಂದ ಸರಗೂರಿನ ಜೆಎಸ್ಎಸ್ ಶಿಕ್ಷಣ ಸಂಸ್ಥೆಯಲ್ಲಿ ಏರ್ಪಡಿಸಲಾಗಿದ್ದ ಉಚಿತ ಆರೋಗ್ಯ ಶಿಬಿರದಲ್ಲಿ ಮಾತನಾಡಿ, ಗ್ರಾಮೀಣ ಭಾಗದ ಜನರು ಆರೋಗ್ಯದಿಂದ ವಂಚಿತರಾಗಬಾರದು ಎಂದು ಸುತ್ತೂರು ಮಠದ ಶ್ರೀ ದೇಶಿಕೇಂದ್ರ ಮಹಾಸ್ವಾಮೀಜಿ ಅವರು ಪ್ರತಿತಿಂಗಳು ಕಡೆ ಭಾನುವಾರ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಜನರಿಗಾಗಿ ಜೆಎಸ್ಎಸ್ ಆಸ್ಪತ್ರೆ ಮೈಸೂರು ವತಿಯಿಂದ ಒಂದು ವರ್ಷದ ತನಕ ಈ ಶಿಬಿರವನ್ನು ಸರಗೂರಿನ ಜೆಎಸ್ಎಸ್ ಶಿಕ್ಷಣ ಸಂಸ್ಥೆಯಲ್ಲಿ ಏರ್ಪಡಿಸಲಾಗಿದೆ ಎಂದರು.



ಶಿಬಿರದಲ್ಲಿ ಸುಮಾರು 600 ರೋಗಿಗಳು ಭಾಗವಹಿಸಿ ವಿವಿಧ ವಿಭಾಗಗಳಲ್ಲಿ ಚಿಕಿತ್ಸೆ ಪಡೆದರು. ಸಾಮಾನ್ಯ ವೈದ್ಯಕೀಯ ವಿಭಾಗದ ಡಾ.ಕಿರಣ್ ಹೆಚ್.ಎಸ್, ಹೃದ್ರೋಗ ವಿಭಾಗದ ಡಾ.ಗುರುಪ್ರಸಾದ್ ಬಿ.ವಿ, ಶಸ್ತ್ರ ಚಿಕಿತ್ಸಾ ವಿಭಾಗದ ಡಾ.ಸಚೀನ್, ಚರ್ಮ ರೋಗ ವಿಭಾಗದ ಡಾ.ಚೇತನಾ, ಕಣ್ಣಿನ ವಿಭಾಗದ ಡಾ.ಕೀರ್ತನಾ ವಿ. ಆಚಾರ್, ಮಕ್ಕಳ ವಿಭಾಗದ ಡಾ.ಸುಷ್ಮಾ ಕಿವಿ, ಮೂಗು, ಗಂಟಲು ವಿಭಾಗದ ಡಾ.ಬಾಬು, ಮೂಳೆ ರೋಗ ವಿಭಾಗದ ಡಾ.ಪ್ರತೀಕ್ ಸ್ತ್ರೀರೋಗ ಮತ್ತು ಪ್ರಸೂತಿ ವಿಭಾಗದ ಡಾ.ಶ್ರೀವಾಣಿ, ಡಾ.ಅನುಪಮ ಮರ್ನಾಲ್, ದಂತ ಚಿಕಿತ್ಸಾ ವಿಭಾಗದ ಡಾ.ಹರ್ಷ, ಡಾ. ತಿಪ್ಪೇಸ್ವಾಮಿ ಹೆಚ್.ಎಂ. ಹಿರಿಯ ನಾಗರಿಕರ ವಿಭಾಗದ ಡಾ. ಅಜಯ್ ಶರ್ಮಾ, ಜಠರ ಕರುಳು ವಿಭಾಗ ಡಾ.ವಿನೋದ್ ಕುಮಾರ್, ಮೂತ್ರನಾಳ ವಿಭಾಗ ಡಾ. ಸಾಜನ್, ಮೂತ್ರ ಪಿಂಡ ವಿಭಾಗ ಡಾ. ವಂಶಿ,ಸ್ಥಾನೀಕ ವೈದ್ಯಾಧಿಕಾರಿಗಳು ಡಾ.ಶಾಂತಮಲ್ಲಪ್ಪ ಅವರು ತಪಾಸಣೆ ನಡೆಸಿ ಚಿಕಿತ್ಸೆ ನೀಡಿದರು.

ಸರಗೂರು ಜೆಎಸ್ಎಸ್ ಶಿಕ್ಷಣ, ಸಂಸ್ಥೆ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷೆ ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ಶಾಲಾ ಮತ್ತು ಕಾಲೇಜು ಮುಖ್ಯಸ್ಥರಾದ ಅಂಜುಮ್ ಪಾಷ, ಗಂಗಾಧರಯ್ಯ, ಮಹದೇವಸ್ವಾಮಿ, ಜೆಎಸ್ಎಸ್ ಆಸ್ಪತ್ರೆಯ ಮಾರ್ಕೆಟಿಂಗ್ ವಿಭಾಗದ ಮಲ್ಲಿಕಾರ್ಜುನಸ್ವಾಮಿ, ಜಗದೀಶ್ ಪರ ಶಿವಮೂರ್ತಿ, ಕೃಷ್ಣಮೂರ್ತಿ, ಅಶೋಕ್, ಜೆಎಸ್ಎಸ್ ಶಿಕ್ಷಣ ಸಂಸ್ಥೆ ಸಿಬ್ಬಂದಿವರ್ಗ, ಶಾಲಾ ಮಕ್ಕಳು, ಜೆಎಸ್ಎಸ್ ಆಸ್ಪತ್ರೆ ಸಿಬ್ಬಂದಿ ವರ್ಗದ ಅಶ್ವತಿ (ಎಕೋ ಟೆಕ್ನೀಷಿಯನ್), ಸುನೀಲ್ ಕುಮಾರ್, ಕೆ.ಎನ್, ಕುಸುಮ, ಸುನೀಲ್ ಕುಮಾರ್, ಸುಧಾ ಮಹದೇವ ಸ್ವಾಮಿ .ಎಂ.ಎನ್, ಲಕ್ಷ್ಮೀ ಶಿವಪ್ರಸಾದ್ .ಎಸ್.ಎಲ್. ಬಸವರಾಜು, ಚಂದ್ರಶೇಖರ್, ಕೆಂಡಣ್ಣಸ್ವಾಮಿ, ರೋಹಿತ್, ನಿತೀನ್ ಇದ್ದರು.

ರಾಜ್ಯದಲ್ಲಿ ತಂಬಾಕು ಬೆಳೆ ಕ್ಷೀಣ, ಶೀಘ್ರ ಮಾರುಕಟ್ಟೆ ತೆರೆದು ಖರೀದಿಗೆ ಆಗ್ರಹ

ಹುಣಸೂರು, ಆ.27– ಕಳೆದ ಎರಡು ವರ್ಷಗಳಿಂದ ಕರ್ನಾಟಕದಲ್ಲಿ ತಂಬಾಕು ಮಂಡಳಿ ನಿಗದಿಪಡಿಸಿರುವ 99 ಮಿಲಿಯನ್ ತಂಬಾಕು ಬೆಳೆಯನ್ನು ಬೆಳೆಯಲು ಸಾಧ್ಯವಾಗುತ್ತಿಲ್ಲ ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಹೊಸೂರು ಕುಮಾರ್ ತಿಳಿಸಿದ್ದಾರೆ.

ಕಳೆದ ವರ್ಷ ಅತಿವೃಷ್ಟಿ ಮತ್ತು ಈ ಸಾಲಿನಲ್ಲಿ ಬರದ ಛಾಯೆಯಿಂದಾಗಿ 60 ರಿಂದ 70 ಮಿಲಿಯನ್ ಕೂಡ ಬೆಳೆಯಲು ಕಷ್ಟಸಾಧ್ಯ. ಈಗಾಗಲೇ ತಂಬಾಕು ಬೆಳೆಯುವ ರೈತರು ತಂಬಾಕನ್ನು ಹದಗೊಳಿಸಿ, ವಿಂಗಡಣೆ ಮಾಡಿ ಮಾರುಕಟ್ಟೆಗೆ ಮಾರಾಟಕ್ಕೆ ಸಜ್ಜುಗೊಳಿಸಿದ್ದಾರೆ ಎಂದರು.

ಮಂಡಳಿಯವರಿಗೆ ಹರಾಜು ಮಾರುಕಟ್ಟೆಯನ್ನು ಮುಂದಿನ ತಿಂಗಳು ಪ್ರಾರಂಭಿಸಬೇಕೆಂದು ರೈತರು ಮನವಿ ಮಾಡಿದ್ದಾರೆ. ಸಂಘವೂ ಕೂಡ ಒತ್ತಾಯಿಸಿದೆ. ಈಗಾಗಲೇ ಕಳ್ಳಸಂತೆಯಲ್ಲಿ ವ್ಯಾಪಾರಿಗಳು ತಂಬಾಕನ್ನು ಖರೀದಿ ಮಾಡುತ್ತಿದ್ದು ಇದರ ಪರಿಣಾಮ ಮಾರುಕಟ್ಟೆ ಮೇಲೆ ದುಷ್ಪರಿಣಾಮ ಬೀರುವ ಸಂಭವ ಹೆಚ್ಚಾಗಿದೆ. ಆದುದರಿಂದ ಮಂಡಳಿಯವರು ಕಳ್ಳಸಂತೆಯಲ್ಲಿ ವ್ಯಾಪಾರವಾಗುವುದನ್ನು ನಿಯಂತ್ರಿಸಿ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಈ ಎಲ್ಲಾ ಕಾರಣಕ್ಕಾಗಿ ಮಂಡಳಿಯು ಸೆಪ್ಟೆಂಬರ್ ಎರಡನೇ ವಾರದಲ್ಲಿ ಮಾರುಕಟ್ಟೆಯನ್ನು ತೆರೆಯಬೇಕು ಮತ್ತು ಪ್ರಾರಂಭದ ಮೊದಲನೇ ಮಾರುಕಟ್ಟೆಯಲ್ಲಿ ಪ್ರತೀ ಕಿಲೋಗೆ ಕನಿಷ್ಠ 250 ಮೇಲೆ ತಂಬಾಕನ್ನು ಖರೀದಿಸಲು ಕ್ರಮ ಕೈಗೊಳ್ಳಬೇಕು. ಯಾವುದೇ ಕಾರಣಕ್ಕೂ 250ಕ್ಕಿಂತ ಕಡಿಮೆಗೆ ಖರೀದಿ ಮಾಡಲು ಮಂಡಳಿಯು ಅವಕಾಶ ಕೊಡದಂತೆ ರೈತರ ಹಿತವನ್ನು ಕಾಪಾಡಬೇಕೆಂದು ಮಂಡಳಿಯ ನಿರ್ದೇಶಕರಾದ ಶ್ರೀಮತಿ ಅಶ್ವಿನಿ ನಾಯ್ಡು ಅವರಲ್ಲಿ ವಿನಂತಿ ಮಾಡಿದ್ದಾರೆ.

ಕಣಗಾಲು ಎಪಿಎಂಸಿ ಚುನಾವಣೆ: ಜೆಡಿಎಸ್ ಜಯಭೇರಿ



ಬೆಟ್ಟದಪುರ, ಆ.27– ಪಿರಿಯಾಪಟ್ಟಣ ತಾಲೂಕಿನ ಕಣಗಾಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತರು ಭರ್ಜರಿ ಜಯ ಸಾಧಿಸಿದ್ದಾರೆ.

ಮುಂದಿನ ಐದು ವರ್ಷದ ಅವಧಿಗೆ ನಡೆದ ಚುನಾವಣೆಯಲ್ಲಿ ಸಾಲಗಾರರ ಕ್ಷೇತ್ರ ಮತ್ತು ಸಾಲಗಾರರಲ್ಲದ ಕ್ಷೇತ್ರದಿಂದ ಜೆಡಿಎಸ್ ಬೆಂಬಲಿತ 9 ಮಂದಿ, ಕಾಂಗ್ರೆಸ್ ಬೆಂಬಲಿತ ಮೂವರು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಬಹುಮತ ಪಡೆದ ಜೆಡಿಎಸ್ ಪಕ್ಷದ ಅಭಿಮಾನಿಗಳು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಸಹಕಾರ ಇಲಾಖೆಯ ರಘು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು.

ಈ ಸಂದರ್ಭದಲ್ಲಿ ನೂತನ ನಿರ್ದೇಶಕರಾದ ಪುಟ್ಟರಾಜಗೌಡ, ಎಂ.ಟಿ.ಹನುಮಂತು, ನಟರಾಜು, ಡಿ.ಕೆ.ನಟೇಶ್, ಪುಟ್ಟರಾಜೇಗೌಡ, ನರಸಯ್ಯ, ವೆಂಕಟನಾಯಕ, ಗೌರಮ್ಮ, ರೇಖಾ, ಪಾರ್ವತಮ್ಮ, ಅಣ್ಣೇಗೌಡ, ಬಲರಾಮೇಗೌಡ, ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷ ಕೆ.ಮಹದೇವ್, ಶ್ರೀನಿವಾಸ್, ಸಂಘದ ಕಾರ್ಯದರ್ಶಿ ಹಾಗೂ ನೌಕರರು ಇದ್ದರು.

ಉದ್ಯಮಿಗೆ ಜೈಲು ಶಿಕ್ಷೆ


ಸರಗೂರು, ಆ.27– ಚೆಕ್ ಬೌನ್ಸ್ ಪ್ರಕರಣದಲ್ಲಿ ಉದ್ಯಮಿ ಅರುಣ್ ಎಂ.ಗೌಡ ಅವರಿಗೆ 6 ತಿಂಗಳು ಜೈಲು, 10 ಸಾವಿರ ದಂಡ ವಿಧಿಸಿ ಮೈಸೂರಿನ 3ನೇ ಜೆಎಂಎಫ್‌ಸಿ ನ್ಯಾಯಾಲಯ ತೀರ್ಪು ನೀಡಿದೆ.

ಸರಗೂರು ಪಟ್ಟಣದ ನಿವಾಸಿ ಮಾಜಿ ಪುರಸಭೆ ಅಧ್ಯಕ್ಷ ಎಸ್.ಬಿ.ಸತೀಶ್ ಕುಮಾರ್ ಅವರಿಂದ ಹೆಚ್.ಡಿ.ಕೋಟೆ ತಾಲೂಕು ಯರಹಳ್ಳಿ (ಹ್ಯಾಂಡ್‌ಪೋಸ್ಟ್) ನೀವೇಶನ ಖರೀದಿ ಸಂಬಂಧ ಅರುಣ್ ಎಂ.ಗೌಡ ನೀಡಿದ್ದ ಚೆಕ್ ಬೌನ್ಸ್ ಆಗಿತ್ತು. ಹೀಗಾಗಿ ಸತೀಶ್ ಕುಮಾರ್, ಅವರು ಅರುಣ್ ಎಂ.ಗೌಡ ವಿರುದ್ಧ ಪ್ರಕರಣ ದಾಖಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶ ಸಂದೇಶ್ ವಿ.ಬಂಡಾರಿ ಅವರು ಅರುಣ್ ಗೌಡ ಅವರಿಗೆ 6 ತಿಂಗಳು ಜೈಲು, 10 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದು ಚೆಕ್ ಮೊಬಲಗು 24 ಲಕ್ಷ ರೂ. ಅರ್ಜಿದಾರರಿಗೆ ನೀಡುವಂತೆ ಆದೇಶದಲ್ಲಿ ತಿಳಿಸಿದ್ದಾರೆ. ಅರ್ಜಿದಾರರ ಪರ ನ್ಯಾಯವಾದಿ ಎಸ್. ಶಂಕರ್ ಅವರು ವಾದ ಮಂಡಿಸಿದ್ದರು.

ಕೆಡಿಪಿ ಸದಸ್ಯ ಸುನೀಲ್ ಬೋಸ್ ಜನ್ಮದಿನ ಅಂಗವಾಗಿ

ಆ.31, ನರಸೀಪುರದಲ್ಲಿ ಬೃಹತ್ ಆರೋಗ್ಯ ತಪಾಸಣಾ ಶಿಬಿರ

ತಿ.ನರಸೀಪುರ, ಆ.27– ವಸತಿ ಯೋಜನೆ ಸಮಿತಿಯ ಮಾಜಿ ಅಧ್ಯಕ್ಷ ಹಾಗೂ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಮಿತಿಯ(ಕೆಡಿಪಿ) ಸದಸ್ಯ ಸುನೀಲ್ ಬೋಸ್ ಅವರ ಹುಟ್ಟುಹಬ್ಬದ ಅಂಗವಾಗಿ ಪಟ್ಟಣದ ಗುರುಭವನದಲ್ಲಿ ಆ.31ರ ಗುರುವಾರ ಬೆಳಗ್ಗೆ 9 ಗಂಟೆಗೆ ಸುನೀಲ್ ಬೋಸ್ ಯುವ ಬ್ರಿಗೇಡ್ ವತಿಯಿಂದ ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರ, ಆರೋಗ್ಯ ತಪಾಸಣೆ ಹಾಗೂ ಮೂಳೆ ಮತ್ತು ಎಲುಬು ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.



ಪಟ್ಟಣದಲ್ಲಿ ಶಿಬಿರವನ್ನು ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಶನಿವಾರ ಕೆಡಿಪಿ ಸದಸ್ಯ ಸುನೀಲ್ ಬೋಸ್ ಅವರು ತಮ್ಮ ನಿವಾಸದಲ್ಲಿ ಯುವ ಬ್ರಿಗೇಡ್‌ನ ಪದಾಧಿಕಾರಿಗಳು ಹೊರತಂದಿರುವ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿ, ಶಿಬಿರದ ಮಾಹಿತಿಯನ್ನು ಪಡೆದುಕೊಂಡರು. ಶಿಬಿರದ ಆಯೋಜನೆಗೆ ಮೆಚ್ಚುಗೆ ವ್ಯಕ್ತಪಡಿಸಿ ಕಾರ್ಯಕ್ರಮದ ಯಶಸ್ಸಿಗೆ ಸಂಪೂರ್ಣ ಸಹಕಾರ ನೀಡುವುದಾಗಿಯೂ ಭರವಸೆ ನೀಡಿದರು.

ಸುನೀಲ್ ಬೋಸ್ ಯುವ ಬ್ರಿಗೇಡ್‌ನ ಸಂಚಾಲಕ ಕುಮಾರ್ ರಾಮೇಗೌಡ ಮಾತನಾಡಿ, ಮೈಸೂರಿನ ಎಆರ್ ಮತ್ತು ಕೆ.ಆರ್ ಆಸ್ಪತ್ರೆಯ ನುರಿತ ವೈದ್ಯರ ತಂಡದ ಸಹಯೋಗದೊಂದಿಗೆ ಆರೋಗ್ಯ ತಪಾಸಣೆ ಸೇರಿದಂತೆ ಬೃಹತ್ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಾಗೂ ಮೂಳೆ ಮತ್ತು ಎಲುಬು ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಸಾರ್ವಜನಿಕರು ಮೊ.ಸಂ: 8105022602, 9632679391, 8495896344 ಹಾಗೂ 9739710489ಗಳಿಗೆ ಕರೆ ಮಾಡಿ ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು.

ಮೈಮುಲ್ ನಿರ್ದೇಶಕ ಆರ್.ಚಲುವರಾಜು, ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ, ಗುತ್ತಿಗೆದಾರ ಸೋಸಲೆ ಎನ್.ನಿಂಗಯ್ಯ, ಗ್ರಾಪಂ ಮಾಜಿ ಸದಸ್ಯ ಉಕ್ಕಲಗೆರೆ ಎಂ.ರಾಜು, ಯುವ ಬ್ರಿಗೇಡ್‌ನ ಸಹ ಸಂಚಾಲಕರಾದ ಶಂಭುದೇವನಪುರ ಪ್ರಭು, ಹಸುವಟ್ಟಿ ಸುದರ್ಶನ್, ರೂರಲ್ ಅಕಾಡೆಮಿಯ ಸಂಸ್ಥಾಪಕ ಬೀರೇಶ್ ಹಾಗೂ ಇನ್ನಿತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಬೆದುರುಲಂಕ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗದರ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬೇಬಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಿಂಗ್ ಆಫ್ ಕೋತ (ತ)	4 ಪ್ರದರ್ಶನಗಳು
ಸಂಗಂ	
ಟೋಬಿ (ಕ)	4 ಪ್ರದರ್ಶನಗಳು
ಲಿಡೋ	
ಕೌಸಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಾಂಡೀವಧಾರಿ ಅರ್ಜುನ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ–2 (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10ಕ್ಕೆ, ಜೈಲರ್ (ತ): ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ಕಿಂಗ್ ಆಫ್ ಕೋಥಾ (ಮ): ರಾ.10.25ಕ್ಕೆ.
ಸ್ಕ್ರೀನ್ 2	ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಬೆ.9.50ಕ್ಕೆ, ಜೈಲರ್ (ಕ): ಮ.1ಕ್ಕೆ, ಗದರ್ 2 (ಹಿಂ): ಸಂ.4.10ಕ್ಕೆ, ಡ್ರೀಂ ಗರ್ಲ್ (ಹಿಂ): ರಾ.7.25ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 3	ರಾಮಚಂದ್ರ ಬಾಸ್ & ಕೋ (ಮ): ಬೆ.10ಕ್ಕೆ, ಗ್ರ್ಯಾನ್ ಟುರಿಸ್ಮೋ (ಇಂ): ಮ.1.30ಕ್ಕೆ, ರಾ.7.20ಕ್ಕೆ, ಗಾಂಡೀವಧಾರಿ ಅರ್ಜುನ (ತೆ): ಸಂ.4.30ಕ್ಕೆ, ಅಖೇಲಿ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಟೋಬಿ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬಿಜಿಎಸ್‌ನಲ್ಲಿ ಸಿಇಟಿ, ನೀಟ್, ಜೆಇಇ ಬಿಜಿಎಸ್ ತರಬೇತಿ ಕೇಂದ್ರ ಉದ್ಘಾಟನೆ



ಹೆಚ್.ಡಿ.ಕೋಟೆ, ಆ.27– ಯುವ ಪೀಳಿಗೆಯಲ್ಲಿ ಪರಂಪರೆಯ ಅರಿವಿನ ಕೊರತೆ ಇದೆ ಎಂದು ಆಧ್ಯಾತ್ಮಿಕ ಚಿಂತಕ ಮತ್ತು ವಿಶ್ರಾಂತ ಮುಖ್ಯ ಅಭಿಯಂತರ ಶಂಕರ ದೇವನೂರು ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜಿನಲ್ಲಿ ಸಿಇಟಿ, ನೀಟ್, ಜೆಇಇ ಬಿಜಿಎಸ್ ತರಬೇತಿ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ತಮ್ಮ ಸಾಮರ್ಥ್ಯದ ಅರಿವು ಇರಬೇಕು. ಪೋಷಕರು ತಮ್ಮ ವಿದ್ಯಾ ಭ್ಯಾಸಕ್ಕಾಗಿ ಪಡುತ್ತಿರುವ ಶ್ರಮದ ಬಗ್ಗೆ ತಿಳಿದು ಕೊಳ್ಳಬೇಕು. ಅವಲೋಕನ ಮಾಡಿಕೊಳ್ಳ ಬೇಕು. ಅಪ್ರಸ್ತುತ ವಿಚಾರಗಳನ್ನು ಮನಸ್ಸಿನಿಂದ ತೆಗೆದಿಡಬೇಕು ಎಂದರು.

ಸಮಾಜದಲ್ಲಿ ದೊಡ್ಡ ಬಂಗಲೆ, ಕಾರು, ಹಣ ಇದ್ದ ವ್ಯಕ್ತಿಗಳು ಎಂದಿಗೂ ಉತ್ತಮ ವ್ಯಕ್ತಿಯಾಗಿರುವುದಿಲ್ಲ ಎಲ್ಲಾ ವರ್ಗದವರೊಂದಿಗೆ ಸಾಮರಸ್ಯದಿಂದ ಬದುಕುವ ವ್ಯಕ್ತಿಯನ್ನು ಸಮಾಜದಲ್ಲಿ ಉತ್ತಮ ವ್ಯಕ್ತಿ ಎಂದು ಗುರುತಿಸಲಾಗುತ್ತದೆ ಎಂದ ಅವರು, ಸಮಾಜದಲ್ಲಿ ಪ್ರತಿಯೊಬ್ಬರೂ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು. ಕಲಿಕೆಯ ಹಂತದಲ್ಲಿ ಸಣ್ಣ ತಪ್ಪು ಮಾಡಬಾರದು ಎಂದರು.

ಕನ್ನಡ, ಇತಿಹಾಸ ಸೇರಿದಂತೆ ಇತರ ಎಲ್ಲಾ ವಿಷಯಗಳ ಮೇಲೂ ನಿಗಾವಹಿಸಬೇಕು. ಸಾಧನೆ ಮಾಡುತ್ತಿರುವವರ ಪಟ್ಟಿಯಲ್ಲಿ ಹೆಚ್ಚು ಹಸಿದವರು ಇದ್ದಾರೆ, ಅಸಾಧ್ಯವಾದುದು ಪ್ರಪಂಚದಲ್ಲಿ ಯಾವುದೂ ಇಲ್ಲ ಎಂದರು.

ಮೈಸೂರು ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಗುಂಡಪ್ಪಗೌಡ ಮಾತನಾಡಿ, ಆರ್ಥಿಕವಾಗಿ ಅತೀ ಹಿಂದುಳಿದು ಸಿಇಟಿ ಪರೀಕ್ಷೆಯಲ್ಲಿ ಉತ್ತಮವಾಗಿ ಸಾಧನೆ ಮಾಡಿದ ಮಕ್ಕಳಿಗೆ, ತಮ್ಮ ಸಂಸ್ಥೆಯಲ್ಲಿ ಉಚಿತ ವಿದ್ಯಾಭ್ಯಾಸ ಮತ್ತು ವಸತಿ ಸೌಕರ್ಯ ಕೊಡಲಾಗುವುದು ಎಂದರು. ನಿವೃತ್ತ ಪ್ರೊ.ಕೆ.ಪಿ.ಬಸವೇಗೌಡ ಮಾತನಾಡಿ, ಶಿಕ್ಷಣ ಎಂದರೆ ಪರಿವರ್ತನೆ. ಶಿಕ್ಷಣದಿಂದ ಸಾಧನೆ ಮಾಡಬಹುದು. ಶಿಕ್ಷಣದ ಸಾಧನೆಗೆ ಶ್ರಮ, ಗುರಿ ಮುಖ್ಯ ಎಂದರು.

ಕಾರ್ಯಕ್ರಮದ ತರಬೇತುದಾರ ಜಯಚಂದ್ರ ಅನುಸೂಯ ಶಂಕರ್ ದೇವನೂರು, ಪ್ರಾಂಶುಪಾಲರಾದ ಡಾ.ಜೆಎನ್. ವೆಂಕಟೇಶ್, ಡಾ.ಎಚ್.ಸಿ. ರಮೇಗೌಡ ಬೈರೇಗೌಡ ಉಪನ್ಯಾಸಕರಾದ ಮಲ್ಲೇಶ್, ರಾಜೇಶ್, ಚೆನ್ನಬಸಪ್ಪ, ಸುಬ್ರಮಣ್ಯ, ಸೋಮಶೇಖರ್, ಮುಖ್ಯ ಶಿಕ್ಷಕರಾದ ಬೈರಪ್ಪ, ನಂದಿನಿ ಇದ್ದರು.

ಅಣ್ಣ–ತಮ್ಮಂದಿರ ಸಂಬಂಧವನ್ನು ಜಗತ್ತಿಗೆ ತೋರಿಸಿದ ಶ್ರೀರಾಮ



ಮೈಸೂರು, ಆ. 27(ಎಸ್‌ಪಿಎನ್)– ಶ್ರೀರಾಮಚಂದ್ರನಿಗೆ ಪಟ್ಟ ಕಟ್ಟುವ ಸಂದರ್ಭ ಹಾಗೂ ಬಿಟ್ಟು ಕೊಡುವ ಸಂದರ್ಭದಲ್ಲಿ, ತಂದೆಗೆ ಕೊಟ್ಟ ಮಾತು ಉಳಿಸಿಕೊಳ್ಳುವ ಕಠಿಣ ಪರಿಸ್ಥಿತಿಯನ್ನು ಸಮಚಿತ್ತದಿಂದ ನಿರ್ವಹಿಸಿ, ಅವಿಭಕ್ತ ಕುಟುಂಬದಲ್ಲಿ ಅಣ್ಣ–ತಮ್ಮಂದಿರ ಸಂಬಂಧವನ್ನು ಇಡೀ ಜಗತ್ತಿಗೆ ಶ್ರೀರಾಮಚಂದ್ರ ತೋರಿಸಿಕೊಟ್ಟಿದ್ದಾರೆ. ಈ ಘಟನೆ ಇಂದಿನ ಯುವ ಪೀಳಿಗೆಗೆ ಮಾದರಿ ಎಂದು ಉಡುಪಿ ಪೇಜಾವರ ಅಧೋಕ್ಷಜ ತೀರ್ಥ ಪೀಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಮನೋಜ್ಞವಾಗಿ ವಿವರಿಸಿದರು.

ಮೈಸೂರು ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿನ ಟಿ.ಕೆ.ಬಡಾವಣೆಯ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ 'ಶ್ರೀಮದ್ರಾಮಾಯಣ' ಪ್ರವಚನ ಮಾಲೆಯಲ್ಲಿ ಶ್ರೀಗಳು ತಿಳಿಸಿದರು.

ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕದ ಕ್ಷಣವನ್ನು ಕಣ್ತುಂಬಿಕೊಳ್ಳಲು ದಶರಥ ಮಹಾರಾಜ ಕಾತುರದಿಂದ ಕಾಯುತ್ತಿದ್ದಾಗ ತನ್ನ ಮೂರನೇ ಹೆಂಡತಿ ಕೈಕೇಯಿಗೆ ನೀಡಿದ ವಾಗ್ದಾನದಿಂದ ಅರಮನೆಯಲ್ಲಿ ಪರಿಸ್ಥಿತಿ ಬದಲಾಗಿತ್ತು. ಆ ಸಂದರ್ಭದಲ್ಲಿ ದಶರಥ ಮಹಾರಾಜನ ಮನಸ್ಥಿತಿ ಯಾರೂ ಊಹಿಸಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಎಂದರಲ್ಲದೆ, ಶ್ರೀರಾಮಚಂದ್ರ ಪಟ್ಟಾಭಿಷೇಕ ಸಂದರ್ಭದಲ್ಲಿ ರಾಜಕುಮಾರ ವೇಷಭೂಷಣದಲ್ಲಿದ್ದರು. ಕಾಡಿಗೆ ಹೊರಡುವಾಗ ಮುನಿವೇಷದಲ್ಲಿ ಕಾಣುತ್ತಿದ್ದರು. ಈ ಸಂದರ್ಭದಲ್ಲಿ ರಾಜ್ಯದ ಜನರು ಸಂಪೂರ್ಣ ಶೋಕ ಸಾಗರದಲ್ಲಿ ಮುಳುಗಿರುವಾಗ, ಶ್ರೀರಾಮಚಂದ್ರನ ಮೊಗದಲ್ಲಿ ಒಂದಿಷ್ಟು ಅಧಿಕಾರ ತ್ಯಜಿಸಿದ ಮನೋಭಾವವಾಗಲಿ, ಪಿತೃವಾಕ್ಯ ಪರಿಪಾಲನಾಗಿ ಕಾಡಿಗೆ ಹೊರಟ ದುಃಖ ಆತನ ಮೊಗದಲ್ಲಿ ಕಾಣಲಿಲ್ಲ. ಆದರೆ, ಇಂದಿನವರೆಗೆ ಅಧಿಕಾರ ಕಳೆದುಕೊಂಡಾಗ ಅವರ ಮೊಗಗಳಲ್ಲಿ ಕಾಣಿಸುವ ಸನ್ನಿವೇಶವನ್ನು ಬೇರೆಯವರು ತಿಳಿಯುವ ರೀತಿಯಲ್ಲಿರುತ್ತವೆ ಎಂದು ಕೆಲವರು ಪ್ರಸಂಗಗಳನ್ನು ವಿವರಿಸಿದರು.

ಇದಕ್ಕೂ ಮುನ್ನ ವಿದ್ವಾನ ವೆಂಕಟೇಶ ನರಸಿಂಹ ಆಚಾರ್ಯರು 'ಭಕ್ತಪ್ರಹ್ಲಾದ' ಪ್ರವಚನ ಮಾಲೆಯಲ್ಲಿ ಮನೋಜ್ಞವಾಗಿ ತಿಳಿಸಿಕೊಟ್ಟರು. ನಂತರ ವಿದ್ವಾನ್ ಯಶಸ್ವಿ ಅವರ ಶಿಷ್ಯ ಮೋಕ್ಷಿತ್ (ಕಿರುತೆರೆ ಧಾರಾವಾಹಿಯ ಟಿ.ಎನ್ ಸೀತಾರಾಮ್ ಅವರ ಸಹೋದರ ಟಿ.ಎನ್.ಶ್ರೀನಿವಾಸಮೂರ್ತಿ ಮೊಮ್ಮಗ) ಭಕ್ತಿಗಳನ್ನು ಮನೋಜ್ಞವಾಗಿ ಹಾಡಿದರು.

ಮೂಲ ನಂಬಿಕೆ, ಮೂಢನಂಬಿಕೆ ಬಗ್ಗೆ ಚರ್ಚೆಗಳಾಗಿರುವುದು ಬೇಸರದ ಸಂಗತಿ

ಆರ್‌ಎಸ್‌ಎಸ್ ಮುಖಂಡ ಸು.ರಾಮಣ್ಣ

ಮೈಸೂರು, ಆ.27(ಎಸ್‌ಪಿಎನ್)– ಪ್ರಸ್ತುತ ಮೂಲ ನಂಬಿಕೆಗೂ, ಮೂಢ ನಂಬಿಕೆಗೂ ಸಾಕಷ್ಟು ವ್ಯತ್ಯಾಸಗಳಿವೆ. ಇವೆರಡು ಪದಗಳ ಬಗ್ಗೆ ವಿದ್ವಾಂಸರ ನಡುವೆ ಪರ–ವಿರೋಧ ಚರ್ಚೆಗಳಾಗುತ್ತಿರುವುದು ಬೇಸರ ಸಂಗತಿ ಎಂದು ಆರ್‌ಎಸ್‌ಎಸ್ ಮುಖಂಡ ಸು.ರಾಮಣ್ಣ ಅಭಿಪ್ರಾಯಪಟ್ಟರು.

ಮೈಸೂರು ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿನ ಟಿ.ಕೆ.ಬಡಾವಣೆಯ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮೂಲ ನಂಬಿಕೆ ಎಂದರೆ ಕಲ್ಲು – ಪ್ರಕೃತಿ, ದೇವರ ಮೂರ್ತಿ –ಸಂಸ್ಕೃತಿ, ಮೂರ್ತಿ ಪೂಜೆ ಜನರ ಮೂಲ ನಂಬಿಕೆ, ಈ ಆಚರಣೆಯ ನಿಂದನೆ–ವಿಕೃತಿ. ಹಾಗಾಗಿ ಮೂಲ ನಂಬಿಕೆ ಬಗ್ಗೆ ಈ ದೇಶದ ಪ್ರತಿಯೊಬ್ಬರು ತಿಳಿದುಕೊಳ್ಳಲು ಪ್ರಯತ್ನಿಸಬೇಕು ಎಂದು ತಿಳಿಸಿದರಲ್ಲದೆ, ಇಸ್ರೋ ವಿಜ್ಞಾನಿಗಳು ಚಂದ್ರಯಾನ–3ರ ಚಂದ್ರನ ದಕ್ಷಿಣ ಧ್ರುವದಲ್ಲಿ ವಿಕ್ರಮ್ ಇಳಿಸಿರುವುದು ಜನರ ನಂಬಿಕೆ. ಇದರ ಬಗ್ಗೆ ಬೇರೆ ಬೇರೆ ರೀತಿ ವಾದ ಮಾಡುವುದು ವಿಕೃತಿ ಎಂದು ತಿಳಿಸಿದರು.



ನಮ್ಮ ಆಚಾರ–ವಿಚಾರಗಳು ನಮ್ಮ ಸಂಸ್ಕೃತಿಯ ಪ್ರತೀಕ. ಸಮಾಜದಲ್ಲಿ ಪರಸ್ಪರ ನಂಬಿಕೆಗಳನ್ನು ಉಳಿಸಿಕೊಂಡು ಜೀವಿಸುವುದನ್ನು ನಾವು ಕಲಿಯಬೇಕು. ಇದರಿಂದ ದೇಶದ ಪ್ರಗತಿ, ಸಂಸ್ಕೃತಿಯ ಉಳಿವಿಗೆ ಸಹಕಾರಿಯಾಗುತ್ತದೆ. ಪ್ರಸ್ತುತ, ಹಿಂದೂ ಧರ್ಮದ ಮೂಲ ನಂಬಿಕೆಗಳನ್ನು ವಿಕಾರ ರೂಪದಲ್ಲಿ ಚರ್ಚಿಸಿ, ಜನರ ಮನಸ್ಸಿನಲ್ಲಿ ವಿಕೃತಿ ಮನೋಭಾವ ಬೆಳೆಸಲಾಗುತ್ತಿದೆ. ಇದು ನಮ್ಮ ಸಂಸ್ಕೃತಿಯ ಅಡಿಪಾಯವನ್ನು ಬುಡಮೇಲು ಮಾಡಲು ಕೆಲವರು ಹೊರಟಿರುವುದು ಬೇಸರದ ಸಂಗತಿ ಎಂದರು.

ದೇವರ ಮೂರ್ತಿಗಳಿಗೆ ಬಗೆ ಬಗೆಯ ಹೂಗಳಿಂದ ಅಲಂಕಾರ ಮಾಡಿ, ಭಕ್ತಿಯಿಂದ ಪೂಜಿಸುತ್ತೇವೆ. ಇದು ಬಹುಜನರ ಮೂಲ ನಂಬಿಕೆ. ಆದರೆ, ಕೆಲವರು ಈ ಆರಾಧನೆ ಮಾಡುವುದನ್ನೇ ಪ್ರಶ್ನಿಸುವುದು. ವಿಕೃತವಾಗಿ ಚರ್ಚಿಸುವುದು ಮೂಢನಂಬಿಕೆಯ ಭಾಗವಾಗಿ ವಿಕೃತಿ ಪ್ರದರ್ಶಿಸುತ್ತಾರೆ ಹಾಗಾಗಿ ಜನರ ಮನಸಿನ ಭಾವನೆಗಳಿಗೆ ವಿರುದ್ಧವಾಗಿ ಚರ್ಚಿಸಿ, ಮೂಲ ನಂಬಿಕೆ ಕುರಿತು ಯುವಕರಲ್ಲಿ ಗೊಂದಲ ಮೂಡಿಸುವುದು ತಪ್ಪು ಎಂದು ತಿಳಿಸಿದರು. ಈ ವೇಳೆ ಆರ್‌ಎಸ್‌ಎಸ್ ಮುಖಂಡ ವಾಸುದೇವ ಭಟ್ ಸೇರಿದಂತೆ ಅನೇಕ ಉಪಸ್ಥಿತರಿದ್ದರು.

ಶ್ರೀನಿವಾಸ ಪ್ರಸಾದ್ ರಾಜಕೀಯ ಪ್ರವೇಶಿಸಿ 50 ವರ್ಷ

ಸ್ವರ್ಣ ಮಹೋತ್ಸವಕ್ಕೆ ಅಭಿಮಾನಿಗಳ ಸಿದ್ಧತೆ




ಮೈಸೂರು, ಆ.27(ಎಸ್‌ಪಿಎನ್)– ಮತ್ತದಿ, ಹಿರಿಯ ರಾಜಕಾರಣಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು, ಮಾರ್ಚ್ 2024ಕ್ಕೆ ರಾಜಕಾರಣ ಪ್ರವೇಶಿಸಿ ಐವತ್ತು ವರ್ಷಗಳಾಗಿರುತ್ತಿರುವ ಹಿನ್ನೆಲೆಯಲ್ಲಿ ಈ ಸಂದರ್ಭವನ್ನು ವಿಶೇಷವಾಗಿ ಆಚರಿಸಲು ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿ ಬಳಗದ ಪದಾಧಿಕಾರಿಗಳು ಮುಂದಾಗಿದ್ದು, ಭಾನುವಾರ ಪೂರ್ವಭಾವಿ ಸಭೆ ನಡೆಸಿದ್ದಾರೆ.

ಮೈಸೂರು ಹುಣಸೂರು ರಸ್ತೆಯ ಜಲದರ್ಶಿನಿಯಲ್ಲಿ ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿ ಬಳಗವು ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ನೇತೃತ್ವದಲ್ಲಿ ಪೂರ್ವ ಭಾವಿ ಸಭೆ ನಡೆಸಿ, ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಈ ವೇಳೆ ಕಾರ್ಯಕ್ರಮ ನಿರ್ವಹಣೆ ಮಾಡಲು ಹಲವು ಸಮಿತಿಗಳನ್ನು ರಚಿಸುವ ಕುರಿತು ತೀರ್ಮಾನಿಸಲಾಗಿದೆ. ಈ ವೇಳೆ ನಿವೃತ್ತ ಪ್ರಾಧ್ಯಾಪಕ ಪ್ರೊ. ನೀಲಗಿರಿ ತಳವಾರ್, ಮೆಹುಲ್ ಪಟೇಲ್ ಸೇರಿದಂತೆ ಇತರೆ ಮುಖಂಡರಿದ್ದರು.

ಶೇ. 40ರಷ್ಟು ಕಮಿಷನ್ ಪ್ರಕರಣದ ತನಿಖೆ: ಸೇಡು ತೀರಿಸಿಕೊಳ್ಳುವ ಹುನ್ನಾರ– ಬೊಮ್ಮಾಯಿ

ಬೆಂಗಳೂರು: ಶೇ. 40ರಷ್ಟು ಕಮಿಷನ್ ಆರೋಪದಲ್ಲಿ ಯಾವ ನಿರ್ದಿಷ್ಟ ಪ್ರಕರಣವೂ ಇಲ್ಲ. ಕಾಂಗ್ರೆಸ್ ನೇತೃತ್ವದ ಸರ್ಕಾರವು ರಾಜಕೀಯ ಸೇಡು ತೀರಿಸಿಕೊಳ್ಳುವ ದುರುದ್ದೇಶದಿಂದ ತನಿಖೆಗೆ ಆದೇಶಿಸಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದರು.



ಕೋವಿಡ್ ಅವಧಿಯ ಭ್ರಷ್ಟಾಚಾರ ಮತ್ತು ಶೇ. 40ರಷ್ಟು ಕಮಿಷನ್ ಆರೋಪದ ಕುರಿತು ತನಿಖೆಗೆ ವಿಚಾರಣಾ ಆಯೋಗ ರಚಿಸಿರುವ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಟೆಂಡರ್ ಅಕ್ರಮಗಳಿಗೆ ಸಂಬಂಧಿಸಿದ ಹಲವು ದೂರುಗಳು ಲೋಕಾಯುಕ್ತದಲ್ಲಿ ಬಾಕಿ ಇವೆ. ಇನ್ನೂ ಹೆಚ್ಚಿನ ತನಿಖೆ ನಡೆಸುತ್ತಾರಾ? ಹೊಸ ದೂರುಗಳನ್ನು ಕೊಡಲು ಅವಕಾಶ ಕೊಡುತ್ತಾರಾ? ಎಂದು ಪ್ರಶ್ನಿಸಿದರು.

ನಮ್ಮ ಅವಧಿಯ ಪ್ರಕರಣಗಳನ್ನು ತನಿಖೆ ನಡೆಸಿ ಎಂದು ನಾವೇ ಹೇಳಿದ್ದೇವೆ. ಇವರ ಕಾಲದ ಅಕ್ರಮಗಳ ಬಗ್ಗೆಯೂ ತನಿಖೆ ನಡೆಸುತ್ತಾರಾ? ಅವರ ವಿರುದ್ಧದ ಆರೋಪಗಳ ಬಗ್ಗೆ ತನಿಖೆಗೆ ಏಕೆ ಹಿಂದೇಟು ಹಾಕುತ್ತಾರೆ? ಇದು ರಾಜಕೀಯವಾಗಿ ಅಧಿಕಾರ ದುರುಪಯೋಗಪಡಿಸಿಕೊಳ್ಳುವ ಪ್ರಯತ್ನ ಎಂದರು.

ಪಿಎಸ್‌ಐ ನೇಮಕಾತಿ ಅಕ್ರಮದ ಕುರಿತು ಪೊಲೀಸರು ತನಿಖೆ ನಡೆಸಿ ಆರೋಪ ಪಟ್ಟಿ ಸಲ್ಲಿಸಿದ್ದಾರೆ. ಈಗ ಇವರು ಆರೋಪಪಟ್ಟಿಯಲ್ಲಿ ಹೆಸರಿರುವವರನ್ನು ರಕ್ಷಣೆ ಮಾಡುತ್ತಾರಾ? ಇನ್ನೊಂದು ಆಯಾಮದಲ್ಲಿ ತನಿಖೆ ನಡೆಸುತ್ತಾರಾ? ಎಂದು ಕೇಳಿದರು.

"ಪ್ರಧಾನಿ ಸ್ವಾಗತಿಸಲು ಬಂದ ಬಿಜೆಪಿ ನಾಯಕರು ಬೀದಿ ಪಾಲಾಗಿದ್ದರು" ಎಂಬ ಕಾಂಗ್ರೆಸ್‌ನವರ ಟೀಕೆ ಕುರಿತು ಕೇಳಿದಾಗ, ನಾವು ಶಿಷ್ಟಾಚಾರ ಪಾಲಿಸಿದ್ದೇವೆ. ಟೀಕಿಸುವುದನ್ನು ನೋಡಿದರೆ ಅವರ ಮನಸ್ಥಿತಿ ಏನು ಎಂಬುದು ಗೊತ್ತಾಗುತ್ತದೆ ಎಂದರು.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆ.30ರಂದು ನಡೆಯಲಿರುವ ಕರ್ನಾಟಕ ಸರ್ಕಾರದ ಗೃಹಲಕ್ಷ್ಮಿ ಯೋಜನೆ ಚಾಲನಾ ಸಮಾರಂಭದ ಅಂತಿಮ ಸಿದ್ಧತೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರರೂ ಆದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಪರಿಶೀಲಿಸಿದರು.

ಕೋಲಾರದಲ್ಲಿ ಮಗಳನ್ನೇ ಹೊಡೆದು ಕೊಂದ ತಂದೆ

ಕೋಲಾರ: ಅನ್ಯ ಜಾತಿಯ ಯುವಕನನ್ನು ಪ್ರೀತಿಸುತ್ತಿದ್ದ ಮಗಳನ್ನು ತಂದೆಯ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಕೋಲಾರದ ತೊಟ್ಲಿ ಗ್ರಾಮದಲ್ಲಿ ನಡೆದಿದೆ.

ಕೊಲೆಯಾದ ಯುವತಿಯನ್ನು 19 ವರ್ಷದ ರಮ್ಯಾ ಎಂದು ಗುರುತಿಸ ಲಾಗಿದೆ. ಅನ್ಯ ಜಾತಿಯ ಯುವಕನನ್ನು ಪ್ರೀತಿಸದಂತೆ ಎಷ್ಟು ಹೇಳಿದರೂ ಮಗಳು ಕೇಳಲಿಲ್ಲ ಎಂದು ತಂದೆ ವೆಂಕಟೇಶಗೌಡ ಮಗಳ ಮೇಲೆ ಹಲ್ಲೆ ನಡೆಸಿದ್ದರು. ಇದ ರಿಂದ ತೀವ್ರವಾಗಿ ಗಾಯಗೊಂಡಿದ್ದ ಯುವತಿ ಮೃತಪಟ್ಟಿದ್ದಾಳೆ. ಕಳೆದ ಶುಕ್ರವಾರ ಈ ಘಟನೆ ನಡೆಸಿದ್ದು ನಂತರ ಸದ್ದಿಲ್ಲದೆ ಮಗಳ ಅಂತ್ಯ ಸಂಸ್ಕಾರವನ್ನು ಪೋಷಕರು ನೇರವೇರಿಸಿದ್ದಾರೆ. ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಚಂದ್ರಯಾನ–3ರ ಯಶಸ್ಸಿನ ಕ್ರೆಡಿಟ್‌ಗೆ ಕಾಂಗ್ರೆಸ್, ಬಿಜೆಪಿ ಪೈಪೋಟಿ

ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಆರೋಪ

ಹಾಸನ: ಚಂದ್ರಯಾನ–3ರ ಯಶಸ್ಸಿನ ಶ್ರೇಯಸ್ಸು ಪಡೆಯಲು ಭಾರತೀಯ ಜನತಾ ಪಕ್ಷ (ಬಿಜೆಪಿ) ಮತ್ತು ಕಾಂಗ್ರೆಸ್ ಎರಡೂ ಪರಸ್ಪರ ಪೈಪೋಟಿ ನಡೆಸುತ್ತಿವೆ ಎಂದು ಜೆಡಿಎಸ್ ನಾಯಕ ಮತ್ತು ಮಾಜಿ ಮುಖ್ಯಮಂತ್ರಿ ಎಚ್‌ಡಿ ಕುಮಾರಸ್ವಾಮಿ ಶನಿವಾರ ಟೀಕಿಸಿದ್ದಾರೆ.



ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಂದ್ರಯಾನದ ಯಶಸ್ಸಿಗಾಗಿ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಭಾರತೀಯ ವಿಜ್ಞಾನಿಗಳನ್ನು ಅಭಿನಂದಿಸಿದರು. ಕಾಂಗ್ರೆಸ್ ನಾಯಕರು ಚಂದ್ರಯಾನ–3 ಕುರಿತು ಹೇಳಿಕೆಗಳನ್ನು ನೀಡುವಲ್ಲಿ ನಿರತರಾಗಿರುವ ಕಾರಣ ನಾನು ಒಂದು ವಾರದವರೆಗೆ ಸರ್ಕಾರವನ್ನು ಟೀಕಿಸದಿರಲು ನಿರ್ಧರಿಸಿದೆ ಎಂದು ಅವರು ವ್ಯಂಗ್ಯವಾಡಿದರು. ಕರ್ನಾಟಕವೇ ನೈರುತ್ಯ ಮುಂಗಾರು ಹಂಗಾಮಿನಲ್ಲಿ ಸಂಕಷ್ಟ ಎದುರಿಸುತ್ತಿರುವಾಗ ತಮಿಳುನಾಡಿಗೆ ಕಾವೇರಿ ನೀರು ಬಿಡುತ್ತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ರಾಜ್ಯದ ರೈತರ ಹಿತ ಕಾಪಾಡುವಲ್ಲಿ ಸರ್ಕಾರ ವಿಫಲವಾಗಿದೆ ಎಂದರು.

2024ರಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಎಲ್ಲಾ 28 ಸ್ಥಾನಗಳಲ್ಲಿ ಜೆಡಿಎಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ ಮತ್ತು ಯಾವುದೇ ಪಕ್ಷದೊಂದಿಗೆ ಚುನಾವಣಾ ಪೂರ್ವ ಅಥವಾ ನಂತರದ ಮೈತ್ರಿ ಸಾಧ್ಯತೆಯನ್ನು ತಳ್ಳಿಹಾಕಿದರು.

ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸುವ ಕುರಿತು ಪ್ರತಿಕ್ರಿಯಿಸಿದ ಅವರು, ನಿಖಿಲ್‌ಗೆ ಸಿನಿಮಾದತ್ತ ಗಮನ ಹರಿಸುವಂತೆ ಹೇಳಿದ್ದೇನೆ ಎಂದರು. ಜೆಡಿಎಸ್ ಶಾಸಕರು ಮತ್ತು ಮುಖಂಡರು ಬೇರೆ ಪಕ್ಷಗಳಿಗೆ ಸೇರಲು ಮುಂದಾಗಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಯಾವುದೇ ಶಾಸಕರು ರಾಜೀನಾಮೆ ನೀಡುವುದನ್ನು ನಿರ್ಬಂಧಿಸಲು ಸಾಧ್ಯವಿಲ್ಲ. ಇದು ಅವರ ಆಯ್ಕೆಯಾಗಿದೆ ಎಂದು ಹೇಳಿದರು.

ನಾಡಿನ ಸಮಸ್ಯೆಗಳು ಕಣ್ಮುಂದೆ ಬರುತ್ತಿವೆ

ಮಾಜಿ ಪ್ರಧಾನಿ ದೇವೇಗೌಡ ಬೇಸರ, ಇಂದು ಸುದ್ದಿಗೋಷ್ಠಿ

ಬೆಂಗಳೂರು: 91ನೇ ವಯಸ್ಸಿನಲ್ಲೂ ನಾಡಿನ ಹಲವು ಜ್ವಲಂತ ಸಮಸ್ಯೆಗಳು ಕಣ್ಮುಂದೆ ಬರುತ್ತಿವೆ ಎಂದಿರುವ ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು, ನಾಳೆ ಬೆಳಗ್ಗೆ 11 ಗಂಟೆಗೆ ಜೆ.ಪಿ.ಭವನದಲ್ಲಿ ಸುದ್ದಿಗೋಷ್ಠಿ ಕರೆದಿದ್ದಾರೆ.



ಇಂದು ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಪ್ರಧಾನಿ, ನನಗೀಗ 91 ವರ್ಷ. ನಾಡಿನ ಜ್ವಲಂತ ಸಮಸ್ಯೆಗಳನ್ನು ನೋಡಿದಾಗ ನನ್ನ ಮನಸಿಗೆ ನೋವಾಗುತ್ತದೆ. ನಾಳೆ ಬೆಳಗ್ಗೆ 11 ಗಂಟೆಗೆ ಜೆ.ಪಿ. ಭವನದಲ್ಲಿ ಸುದ್ದಿಗೋಷ್ಠಿ ಕರೆದಿದ್ದೇನೆ. ಎಲ್ಲಾ ಸಮಸ್ಯೆಗಳನ್ನು ಬಿಚ್ಚಿಡುತ್ತೇನೆ ಎಂದಿದ್ದಾರೆ.

ಇಡೀ ರಾಜ್ಯದ ಪರಿಸ್ಥಿತಿ ಬಗ್ಗೆ ನಾಳೆ ಸುದ್ದಿಗೋಷ್ಠಿ ಕರೆದಿದ್ದೇನೆ. ಎಲ್ಲಾ ನೋಡ್ತಿರುವೆ, ಚಪ್ಪಲಿ ಹಾಕಿಲ್ಲ, ಹಳೆಯದ್ದು ನೆನಪಿಸಿಕೊಳ್ಳಲ್ಲ ರಾಜ್ಯದ ಸಮಸ್ಯೆ ನೋಡುತ್ತಿದ್ದೇನೆ. 91ನೇ ವಯಸ್ಸಿನಲ್ಲೂ ಹಲವು ಸಮಸ್ಯೆ ಕಣ್ಣ ಮುಂದೆ ಬರುತ್ತಿವೆ ಎಂದಿದ್ದಾರೆ.

ದೆಹಲಿ ರೈಲು ನಿಲ್ದಾಣಗಳಲ್ಲಿ ಖಲಿಸ್ತಾನ್ ಪರ ಬರಹ

ನವದೆಹಲಿ, ಆ.27– ದೇಶ ಮತ್ತು ವಿದೇಶದಲ್ಲಿ ಉಗ್ರ ಚಟುವಟಿಕೆಗಳನ್ನು ನಡೆಸುತ್ತಿರುವ ಪ್ರತ್ಯೇಕತಾವಾದಿ ಖಲಿಸ್ತಾನ್ ಗುಂಪು ದೇಶದ ರಾಜಧಾನಿ ದೆಹಲಿಯಲ್ಲಿ ಖಲಿಸ್ತಾನ್ ಪರ ಘೋಷಣೆಗಳನ್ನು ಬರೆಯುವ ಮೂಲಕ ಪುಂಡಾಟಿಕೆ ಮೆರೆದಿದೆ. ಮೆಟ್ರೋ ನಿಲ್ದಾಣಗಳ ಮೇಲೆ ಬರಹಗಳನ್ನು ಗೀಚಲಾಗಿದ್ದು, ಅವುಗಳನ್ನು ಪೊಲೀಸರು ಅಳಿಸಿದ್ದಾರೆ.

ಭಾರತದ ಅಧ್ಯಕ್ಷತೆಯಲ್ಲಿ ಮುಂದಿನ ತಿಂಗಳು ರಾಷ್ಟ್ರ ರಾಜಧಾನಿಯಲ್ಲಿ ನಡೆಯಲಿರುವ ಜಿ–20 ಶೃಂಗಸಭೆಗೂ ಪ್ರತ್ಯೇಕತಾವಾದಿ ಖಲಿಸ್ತಾನ್ ಗುಂಪು ಮತ್ತೆ ಬಾಲ ಬಿಚ್ಚಿದೆ. ಸಿಖ್ಸ್ ಫಾರ್ ಜಸ್ಟಿಸ್ (ಎಸ್‌ಎಫ್‌ಜೆ)ನ ಶಂಕಿತ ಸದಸ್ಯರು ನಗರದ ಮೆಟ್ರೋ ನಿಲ್ದಾಣ ಗೋಡೆಗಳ ಮೇಲೆ ಐದಕ್ಕೂ ಹೆಚ್ಚು ಕಡೆ ಉಗ್ರ ಹೇಳಿಕೆಗಳನ್ನು ಗೀಚಿದ್ದಾರೆ. ಪೊಲೀಸರು ಬರಹಗಳನ್ನು ವಿರೂಪಗೊಳಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದರು.

ಖಲಿಸ್ತಾನ್ ಜಿಂದಾಬಾದ್ ಘೋಷಣೆ: ದೆಹಲಿ ಪೊಲೀಸರು ಹಂಚಿಕೊಂಡ ಚಿತ್ರಗಳಲ್ಲಿ, ಮೆಟ್ರೋ ನಿಲ್ದಾಣಗಳ ಗೋಡೆಗಳ ಮೇಲೆ 'ದೆಹಲಿ ಬನೇಗಾ ಖಲಿಸ್ತಾನ್' ಮತ್ತು 'ಖಲಿಸ್ತಾನ್ ಜಿಂದಾಬಾದ್' ಎಂಬ ಘೋಷಣೆಗಳನ್ನು ಬರೆಯಲಾಗಿದೆ.

ಐದು ಕಡೆ ಪ್ರಚೋದನಾತ್ಮಕ ಗೋಡೆ ಬರಹ : ಶಂಕಿತ ಖಲಿಸ್ತಾನಿ ಪರ ಕಾರ್ಯಕರ್ತರು ದೆಹಲಿಯ ಶಿವಾಜಿ ಪಾರ್ಕ್‌ನಿಂದ ಪಂಜಾಬಿ ಬಾಗ್‌ವರೆಗಿನ ಮೆಟ್ರೋ ನಿಲ್ದಾಣಗಳ ಗೋಡೆಗಳ ಮೇಲೆ ಖಲಿಸ್ತಾನಿ ಪರ ಬರೆದಿದ್ದ ಘೋಷಣೆಗಳ ಬರಹಗಳನ್ನು ವಿರೂಪಗೊಳಿಸಲಾಗಿದೆ ಸಾರ್ವಜನಿಕ ಆಸ್ತಿಗಳನ್ನು ವಿರೂಪಗೊಳಿಸುವ ಮತ್ತು ಪ್ರಚೋದನಾತ್ಮಕ ಹೇಳಿಕೆಗಳ ವಿರುದ್ಧ ಕಾನೂನಿನಡಿ ಕ್ರಮ ಜರುಗಿಸಲಾಗುವುದು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಜಿ–20 ಶೃಂಗಸಭೆಯ ಹಿನ್ನೆಲೆ ಆಗಸ್ಟ್ 25 ರಿಂದ ಮೂರು ದಿನಗಳ ಅಧಿಕಾರಿಗಳ ಸಭೆ ನಡೆಯುತ್ತಿದ್ದು, ಭಾನುವಾರ ಮುಕ್ತಾಯವಾಗಲಿದೆ. ಸಭೆಗೆ 55 ದೇಶಗಳಿಂದ 1,500 ಪ್ರತಿನಿಧಿಗಳು ಆಗಮಿಸಿದ್ದಾರೆ. ಇಂತಹ ಗಣ್ಯ ಸಭೆಯ ಮಧ್ಯೆ ಖಲಿಸ್ತಾನಿಗಳು ದೇಶ ವಿರೋಧಿ ಚಟುವಟಿಕೆ ನಡೆಸಿದ್ದಾರೆ.

ಮುಂದಿನ ತಿಂಗಳು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆಯಲಿರುವ ಜಿ20 ಶೃಂಗಸಭೆಯಲ್ಲಿ 18 ರಾಷ್ಟ್ರಗಳ ಮುಖ್ಯಸ್ಥರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಜಿ20 ನಾಯಕರ ಶೃಂಗಸಭೆಯಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್, ಚೀನಾದ ಪ್ರಧಾನಿ ಕ್ಸಿ ಜಿನ್‌ಪಿಂಗ್, ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಸೇರಿದಂತೆ ಹಲವು ರಾಷ್ಟ್ರಗಳ ಮುಖ್ಯಸ್ಥರು ಮತ್ತು ರಾಜತಾಂತ್ರಿಕ ಅಧಿಕಾರಿಗಳು ಭಾಗವಹಿಸುವ ನಿರೀಕ್ಷೆಯಿದೆ.



ಮಣಿಪುರದಲ್ಲಿ ಮತ್ತೆ ಹಿಂಸಾಚಾರ: ಐದು ಮನೆಗಳಿಗೆ ಬೆಂಕಿ ಹಚ್ಚಿದ ದುಷ್ಕರ್ಮಿಗಳು



ಇಂಫಾಲ್: ಜನಾಂಗೀಯ ಕಲಹ ಪೀಡಿತ ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದಿದ್ದು, ರಾಜಧಾನಿ ಇಂಫಾಲ್‌ನ ನ್ಯೂ ಚೆಕ್ಕೋನ್ ಪ್ರದೇಶದಲ್ಲಿ ಭಾನುವಾರ ಮಧ್ಯಾಹ್ನ ದುಷ್ಕರ್ಮಿಗಳು ಐದು ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ.

ಇದು ಮುಖ್ಯವಾಗಿ ಇಂಫಾಲ್ ಪೂರ್ವ ಜಿಲ್ಲೆಯ ಕುಕಿ ಪ್ರದೇಶವಾಗಿದೆ. ಸುಟ್ಟು ಕರಕಲಾದ ಮನೆಗಳು ಕುಕಿ ಮತ್ತು ಮೈತೈ ಎರಡೂ ಸಮುದಾಯಗಳಿಗೆ ಸೇರಿದವುಗಳಾಗಿವೆ. ಬೆಂಕಿ ಹರಡುವ ಮುನ್ನ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಈ ಪ್ರದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿದ ಹೊರತಾಗಿಯೂ ಈ ಘಟನೆ ನಡೆದಿದೆ. ಘಟನೆ ನಡೆದ ಬಳಿಕ ಜನರು ಜಮಾಯಿಸಿದ್ದಾರೆ ಹಾಗೂ ಈ ಪ್ರದೇಶ ಪ್ರವೇಶಿಸಲು ಪ್ರಯತ್ನಿಸಿದ್ದಾರೆ. ಈ ಸಂದರ್ಭ ಭದ್ರತಾ ಸಿಬ್ಬಂದಿ ಅಶ್ರುವಾಯು ಶೆಲ್‌ಗಳನ್ನು ಸಿಡಿಸಿ ಜನರನ್ನು ಚದುರಿಸಿದ್ದಾರೆ. ಪರಿಸ್ಥಿತಿ ಉದ್ವಿಗ್ನಗೊಂಡಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಭದ್ರತೆ ಬಿಗಿಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಲ್ಲರ ಕಣ್ಣುಗಳು ಆಗಸ್ಟ್ 29 ರಂದು ನಡೆಯಲಿರುವ ವಿಧಾನಸಭೆಯ ಅಧಿವೇಶನದತ್ತ ನೆಟ್ಟಿದೆ. ರಾಜ್ಯದ ಪರಿಸ್ಥಿತಿಯ ಬಗ್ಗೆ ಸದನದಲ್ಲಿ ಯಾವುದೇ ಚರ್ಚೆ ನಡೆಯದೇ ಇರಬಹುದು ಎಂದು ಕಾಂಗ್ರೆಸ್ ಹಿರಿಯ ಮತ್ತು ಮಾಜಿ ಮುಖ್ಯಮಂತ್ರಿ ಒಕ್ರಾಮ್ ಇಬೋಬಿ ಸಿಂಗ್ ಹೇಳಿದ್ದಾರೆ.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆ.30 'ಗೃಹ ಲಕ್ಷ್ಮಿ' ಯೋಜನೆಗೆ ಚಾಲನೆ ಸಮಾರಂಭ ಆಯೋಜಿಸಿರುವ ಹಿನ್ನೆಲೆಯಲ್ಲಿ ವೃತ್ತಗಳು ಹಾಗೂ ರಸ್ತೆಗಳಲ್ಲಿ ಫ್ಲೆಕ್ಸ್, ಬ್ಯಾನರ್, ಕಟೌಟ್‌ಗಳು ರಾರಾಜಿಸುತ್ತಿವೆ.

